# ಗಾದೆಯ ಕಥೆಗಳು

## ಕೆ. ಕೃಷ್ಣಪ್ಪ ರೆಡ್ಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

# ಗಾದೆಯ ಕಥೆಗಳು

ಪ್ರಧಾನ ಸಂಪಾದಕ

**ಡಾ. ಜೀ. ಶಂ. ಪರಮಶಿವಯ್ಯ**

ಸಂಪಾದಕ

**ಪ್ರೊ. ಬಿ. ಕೃಷ್ಣಪ್ಪ ರೆಡ್ಡಿ**

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

*Gaadeya Kathegalu—A Collection of folk tales by Prof. B. Krishnappa Reddy, Kannada Department, Sahyadri Kala College, Shimoga. Published by Karnataka Janapada and Yakshagana Academy, Bangalore-560 002. P. xxiv + 92*

ಮೊದಲ ಮುದ್ರಣ : ೧೯೯೪

© ಪ್ರೊ. ಬಿ. ಕೃಷ್ಣಪ್ಪ ರೆಡ್ಡಿ

ಬೆಲೆ ರೂ. ೨೦-೦೦

ಮುಖಪುಟ ವಿನ್ಯಾಸ : ಕನಕೇಶ ಮೂರ್ತಿ

ಮುದ್ರಕರು : ಜಯಲಕ್ಷ್ಮಿ ಪ್ರಿಂಟರ್ಸ್
೧೪ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು-೪

## ಅರ್ಪಣೆ

ಇವರಿಗೆ—

ತಂದೆ ತಾಯಿ

## ಪ್ರಧಾನ ಸಂಪಾದಕರ ಮಾತು

ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಗಾದೆಗಳಿಗೆ ವಿಶೇಷ ಸ್ಥಾನವಿದೆ. ಗಾದೆಗಳನ್ನು ಆರ್. ಎಸ್. ಬಾಗ್ಸ್ ಅವರು 'ಭಾಷಿಕ ಬಗೆ' (**Linguistic types**)ಯ ವಿಭಾಗದಲ್ಲಿ ಗುರುತಿಸಿದ್ದಾರಾದರೂ ಸಾಹಿತ್ಯ ಸತ್ವವೇ ಹೆಚ್ಚಾಗಿರುವ ಗಾದೆಗಳನ್ನು ಸಾಹಿತ್ಯಿಕ ವರ್ಗದಲ್ಲಿ ಪರಿಗಣಿಸುವುದೇ ಸೂಕ್ತ. ಜೀವನದ ದಟ್ಟವಾದ ಅನುಭವದಿಂದ ಆಣಿಮುತ್ತುಗಳಾಗಿ ಸಿಡಿದು ಬಂದ ಗಾದೆಗಳು ನಾನಾ ಬಗೆಯಲ್ಲಿ ಮನುಷ್ಯನ ನಡೆನುಡಿಗಳನ್ನು ತಿದ್ದುತ್ತವೆ. 'ಗಾದೆ ವೇದಕ್ಕೆ ಸಮ' ಎಂಬ ಮಾತಿನ ಹಿನ್ನೆಲೆಯಲ್ಲಿ ಗಾದೆಗಳ ಮಹತ್ವ ನಿರ್ದೇಶಿತವಾಗಿದೆ. ಗಾದೆಯ ಮಾತು ಎಂದಿಗೂ ಸುಳ್ಳಾಗದು. ಎಂತಲೇ ಗಾದೆಗಳನ್ನು ಉಲ್ಲೇಖಿಸಿ ನ್ಯಾಯಾಲಯಗಳಲ್ಲಿ ತೀರ್ಪು ನೀಡುವ ಪರಿಪಾಠ ಕೆಲವು ಸಂಸ್ಕೃತಿಗಳಲ್ಲಿ ಇರುವುದನ್ನು ಕಾಣಬಹುದು.

ಗಾದೆಗಳನ್ನು ವರ್ಗೀಕರಿಸಿ ನೋಡುವಾಗ 'ಗಾದೆಯ ಕಥೆ'ಗಳಿಗೆ ಒಂದು ಸ್ಥಾನ ಲಭ್ಯವಾಗುತ್ತದೆ. ಬಹುಮಟ್ಟಿನ ಗಾದೆಗಳ ಹಿನ್ನೆಲೆಯಲ್ಲಿ ಕಥೆಗಳ ರೂಪದ ಘಟನೆಯೊಂದು ಇರುವಂತೆ ಗೋಚರಿಸಿದರೆ ಆಶ್ಚರ್ಯವಿಲ್ಲ. ಹಲವರ ಬದುಕಿನ ಪಾಠ ಒಂದು ಗಾದೆಯಾಗಿ ಮೈತಾಳಿರಬೇಕು. ಅದು ಒಂದು ಕಥೆಯ ಸ್ವರೂಪದಲ್ಲಿ ಅರಳಿ ಗಾದೆಯಿಂದ ಆರಂಭವನ್ನೋ, ಅಂತ್ಯವನ್ನೋ ಕಂಡಿರಬೇಕು. ಶ್ರೀ ಕೃಷ್ಣಪ್ಪ ರೆಡ್ಡಿಯವರು ಸಂಪಾದಿಸಿಕೊಟ್ಟಿರುವ ಗಾದೆಯ ಕಥೆಗಳು ಸಂಕಲನದಲ್ಲಿನ ಕಥೆಗಳು ಗಾದೆಗಳ ಹುಟ್ಟಿನ ನಮ್ಮ ಆಲೋಚನೆಯನ್ನು ಕೆರಳಿಸುತ್ತವೆ. ಒಂದು ಪರಿಪುಷ್ಟವಾದ ಕಥಾಲೋಕ ಗಾದೆಗಳ ಗರ್ಭದಲ್ಲಿ ಹುದುಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಶ್ರೀ ಕೃಷ್ಣಪ್ಪ ರೆಡ್ಡಿಯವರು ಗಾದೆಗಳಿಗೆ ಸಂಬಂಧಿಸಿದ ಕಥೆಗಳನ್ನೇ ಶ್ರಮಪಟ್ಟು ಸಂಗ್ರಹಿಸಿ ನಮ್ಮ ಜನಪದ ಕಥೆಗಳ ವೈವಿಧ್ಯಮಯ ಪ್ರಪಂಚವನ್ನು ಪರಿಚಯಿಸಿದ್ದಾರೆ. ವಕ್ತೃವಿನ ನಿರೂಪಣಾ ವಿಧಾನ, ಭಾಷಾ ಪ್ರಯೋಗಗಳನ್ನು ಅಚ್ಚುಕಟ್ಟಾಗಿ ಈ ಕತೆಗಳಲ್ಲಿ ಅವರು ಕಾಪಾಡಿರುವುದು ಒಂದು ಶಾಸ್ತ್ರೀಯ ಕ್ರಮಕ್ಕೆ ಉದಾಹರಣೆಯಾಗಿದೆ. ಇಂಥ ಒಂದು ಒಳ್ಳೆಯ ಸಂಕಲನವನ್ನು ಅರ್ಪಿಸುವುದರ ಮೂಲಕ ನಮ್ಮ ಜಾನಪದ ಕ್ಷೇತ್ರದ ಒಂದು ಪೊಗ್ಗವನ್ನು ಅವರು ತುಂಬಿದ್ದಾರೆ. ಇದಕ್ಕಾಗಿ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಈ ಸಂಕಲನವನ್ನು ಅಂದವಾಗಿ ಮುದ್ರಿಸಿಕೊಟ್ಟ ಜಯಲಕ್ಷ್ಮಿ ಪ್ರಿಂಟರ್ಸ್‌ನ ಶ್ರೀ ಜಯಣ್ಣನವರಿಗೂ, ಮುಖಪುಟದ ವಿನ್ಯಾಸವನ್ನು ರಚಿಸಿಕೊಟ್ಟ ಶ್ರೀ ಕನಕೇಶ ಮೂರ್ತಿಯವರಿಗೂ ಅಕಾಡೆಮಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಜೀ. ಶಂ. ಪರಮಶಿವಯ್ಯ**
ಪ್ರಧಾನ ಸಂಪಾದಕ

# ಅರಿಕೆ

ಕಾಲೇಜುವರೆಗಿನ ನನ್ನ ವಿದ್ಯಾಭ್ಯಾಸ ಹಳ್ಳಿ ಪರಿಸರದ ಶಾಲೆಗಳಲ್ಲಿ ನಡೆದುದ ರಿಂದ, ನಮ್ಮವರ ಮಣ್ಣಿನ ನಂಟಿನ ಬದುಕು, ಕಷ್ಟ ಕಾರ್ಪಣ್ಯಗಳು, ಅಸಂಖ್ಯ ನೈಜ ಅನುಭವಗಳು, ಆಚಾರವಿಚಾರಗಳು, ಭಾಷೆ, ಆ ಭಾಷೆಯ ಬನಿ—ಇವು ನನ್ನನ್ನು ತಮ್ಮ ತೋಳ ತೆಕ್ಕೆಯಲ್ಲಿ ಅಪ್ಪಿ ಮಡಿಲಲ್ಲಿ ತುಂಬಿಕೊಂಡಿವೆ. ಈ ಮಡಿಲಿನಲ್ಲಿ ಅದೆಷ್ಟು ಮುಖಗಳು? ಅದೆಂಥ ಅನುಭವಗಳ ಭಂಡಾರ! ಆ ಮುಖಗಳ ನಿಟ್ಟುಸಿರು, ಪಿಸುಮಾತು, ಖುಷಿಮಾತು, ರಸಪ್ರಸಂಗಗಳು, ಅನುಭವ ಸತ್ಯ ಮುಖಗಳು ಒಂದೇ ? ಎರಡೇ ? ಅವುಗಳನ್ನು ಮರವೆಯ ಕಂದರಕ್ಕೆ ಬೀಳದಂತೆ ದಾಖಲು ಮಾಡಿಕೊಳ್ಳುತ್ತಾ ಬಂದಿದ್ದೇನೆ. ಹೀಗೆ ದಾಖಲಿಸಿಕೊಂಡಿರುವ ವಿಷಯಗಳಲ್ಲಿ ಗಾದೆಗಳದೇ ಸಿಂಹಪಾಲು. ಸಂಖ್ಯೆಯಲ್ಲಿ ಸುಮಾರು ೫೦೦೦. ಈ ಮೊತ್ತದಲ್ಲಿ ೧೨೫೦ ಗಾದೆಗಳು ೧೯೮೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ 'ಗ್ರಾಮೀಣ ಗಾದೆಗಳು' ಎಂಬ ಹೆಸರಿನಲ್ಲಿ ಪ್ರಕಟವಾಗಿ ಬೆಳಕಿಗೆ ಬಂದಿರುವುದು ನನ್ನ ಪಾಲಿಗೆ ಒದಗಿದ ಒಂದು ಸುಯೋಗ.

"ಗ್ರಾಮೀಣ ಗಾದೆಗಳು" ಸಂಕಲನದ ಸಂಪಾದನಾ ಕಾರ್ಯದಲ್ಲಿ ತೊಡಗಿದ್ದಾಗ ನನ್ನ ಗಮನವನ್ನು ವಿಶೇಷವಾಗಿ ಸೆಳೆದವುಗಳೆಂದರೆ, ಕೆಲವು ಗಾದೆಗಳು ತಮ್ಮ ಹೃದಯ ದಲ್ಲಿ ಬಚ್ಚಿಟ್ಟುಕೊಂಡಂತಿರುವ, ಗಾದೆಯ ಆಶಯವನ್ನು ಸಮರ್ಥಿಸುವಂತಿರುವ ರಸಭರಿತ ಕಥಾ ಪ್ರಸಂಗಗಳು. ಆ ಪ್ರೇರಣೆಯಿಂದ ಆರು 'ಗಾದೆಯ ಕಥೆ'ಗಳನ್ನು 'ಗ್ರಾಮೀಣ ಗಾದೆಗಳು' ಸಂಕಲನದ ಅನುಬಂಧ–೨ರಲ್ಲಿ ವರ್ಗೀಕರಿಸಿದ್ದೇನೆ.

ಈ ವರ್ಗೀಕರಣ ಜನಪದ ಸಾಹಿತ್ಯದಲ್ಲಿ ಒಂದು ಹೊಸ ಪ್ರಕಾರವೇ ಆಗ ಬಹುದು; ಆಗಲು ಸಾಧ್ಯ–ಎಂಬ ಉತ್ತಮ ಪ್ರತಿಕ್ರಿಯೆ ವಿದ್ವಾಂಸರಿಂದ ಬಂದುದರಿಂದ 'ಗಾದೆಯ ಕಥೆಗಳು' ಸಂಪಾದನಾ ಕಾರ್ಯಕ್ಕೆ ಅನಿವಾರ್ಯವಾಗಿ ನನ್ನನ್ನು ಒಪ್ಪಿಸಿ ಕೊಳ್ಳಬೇಕಾಯಿತು. ನಾನು ಸಂಗ್ರಹಿಸಿರುವ ೩೭ 'ಗಾದೆ ಕಥೆಗಳ' ಪರಿಷ್ಕರಣ ಕಾರ್ಯ ಮುಗಿದಾಗ, ನನ್ನೆದುರು 'ಧುತ್ತೆಂದು' ನಿಂತ ದೊಡ್ಡ ಪ್ರಶ್ನೆ—ಪ್ರಕಟಿಸು ವವರು ಯಾರು ? ಸ್ವಂತಕ್ಕೇ ಪ್ರಕಟಿಸೋಣ ಎಂದರೆ ಆರ್ಥಿಕ ಮುಗ್ಗಟ್ಟು ! ಹೀಗಾಗಿ 'ಗಾದೆ ಕಥೆ'ಗಳ ಸಂಪಾದನಾ ಕಾರ್ಯ ಅರ್ಧಕ್ಕೆ ನಿಂತಿತು.

ಸ್ಥಗಿತಗೊಂಡ ನನ್ನ ಸಂಪಾದನಾ ಕಾರ್ಯಕ್ಕೆ ಚಾಲನೆ ಕೊಟ್ಟದ್ದು, ಹೊನ್ನಾಳಿ ತಾಲ್ಲೂಕು ಮಟ್ಟದ ಮೊದಲನೆಯ ಕನ್ನಡ ಸಾಹಿತ್ಯ ಮತ್ತು ಜಾನಪದ ಸಮ್ಮೇಳನ (೯ ಮತ್ತು ೧೦, ಮೇ ೧೯೮೨). ಈ ಸಮ್ಮೇಳನ ಪ್ರಕಟಿಸಿರುವ ಸ್ಮರಣ ಸಂಚಿಕೆ

'ಹೊನ್ನರಳಿ'ಯಲ್ಲಿ ನಾನು ಸಂಪಾದಿಸಿರುವ ಎರಡು ಗಾದೆಯ ಕಥೆಗಳನ್ನು ಸಂಪಾದಕ ಮಂಡಲಿಯು ಸ್ವೀಕರಿಸಿ ಪ್ರಕಟಿಸಿತ್ತು. ಆ ಸಮ್ಮೇಳನದ ಜನಪದ ಕಲಾ ಪ್ರದರ್ಶನದ ಉದ್ಘಾಟಕರಾಗಿ ಆಗಮಿಸಿದ್ದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿರುವ ಡಾ. ಜೀ. ಶಂ. ಪರಮಶಿವಯ್ಯನವರ ಭೆಟ್ಟಿ, ಸ್ಥಗಿತಗೊಂಡ ಸಂಪಾದನ ಕಾರ್ಯದ ಬಗ್ಗೆ ಪ್ರಸ್ತಾಪ ಹಾಗೂ ಅವರು ನೀಡಿದ ಅಪಾರ ಪ್ರೋತ್ಸಾಹ–ಗಾದೆಯ ಕಥೆಗಳು ಸಂಕಲನ ರೂಪ ಪಡೆದು ಪ್ರಕಟವಾಗುತ್ತಿರುವುದಕ್ಕೆ ಬಹುಮುಖ್ಯ ಕಾರಣ–ಎಂದು ನಾನು ಭಾವಿಸಿದ್ದೇನೆ.

ಡಾ. ಜೀಶಂಪರವರ ಮತ್ತು ಅಕಾಡೆಮಿಯ ಸದಸ್ಯ ಮಿತ್ರರಾದ ಶ್ರೀ ಬಸವರಾಜ ನೆಲ್ಲಿಸರ ಅವರ ಸೂಚನೆಯಂತೆ ೨೫ ಕಥೆಗಳನ್ನೊಳಗೊಂಡ 'ಗಾದೆಯ ಕಥೆಗಳು' ಎಂಬ ಹೆಸರಿನಲ್ಲಿ ಸಿದ್ಧಪಡಿಸಿ ಕಳುಹಿಸಿದ ಹಸ್ತಪ್ರತಿಯನ್ನು ಪರಿಶೀಲನಾ ಸಮಿತಿ ಪ್ರಕಟಣೆಗೆ ಸ್ವೀಕರಿಸಿ, ಅದನ್ನು ಒಪ್ಪವಾಗಿ ಪ್ರಕಟಿಸುತ್ತಿರುವುದಕ್ಕೆ ಅಕಾಡೆಮಿಯ ಸಂಬಂಧಪಟ್ಟ ಎಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

೧೯–೮–೧೯೭೪ **ಪ್ರೊ. ಬಿ. ಕೃಷ್ಣಪ್ಪ ರೆಡ್ಡಿ**
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು
ಶಿವಮೊಗ್ಗ

# ಗಾದೆಯ ಕಥೆಗಳು

## ಒಳಗಿನ ಪುಟಗಳಲ್ಲಿ


| | | ಪುಟ |
|---|---|---|
| ೧. | ವರ್ಗೀಕೃತ ಸೂಚಿ | |
| ೨. | ಪ್ರಸ್ತಾವನೆ | |
| ೩. | ದಾಂಪತ್ಯ ಕಥೆಗಳು | ೧ |
| ೪. | ತಂತ್ರ, ಕುತಂತ್ರ ಕಥೆಗಳು | ೮ |
| ೫. | ಹಾಸ್ಯ ಕಥೆಗಳು | ೧೬ |
| ೬. | ವೃತ್ತಿ ಕಥೆಗಳು | ೩೦ |
| ೭. | ನೀತಿ ಕಥೆಗಳು | ೪೦ |
| ೮. | ಐತಿಹ್ಯ ಕಥೆಗಳು | ೪೮ |
| ೯. | ಪ್ರಾಣಿ ಕಥೆಗಳು | ೫೫ |
| ೧೦. | ಗಾದೆಯ ಕಥೆಗಳನ್ನು ಹೇಳಿದವರು | ೬೪ |
| ೧೧. | ಅರ್ಥಕೋಶ | ೬೮ |

## ಕಥೆಗಳ ವರ್ಗೀಕೃತ ಸೂಚಿ

### ದಾಂಪತ್ಯ ಕಥೆಗಳು

೧. ಅದೇ ಉಂಡೇನು ಕದಾತಗಿ .... ೧
೨. ಒಲ್ಲೊಲ್ಲೆ ಅಂದೋನು ಒಳ್ಕಲ್ಲು ನೆಕ್ದ .... ೪
೩. ಹಳೇ ಗಂಡ್ನ ಪಾದ್ವೆಗತಿ .... ೬

### ತಂತ್ರ, ಕುತಂತ್ರ ಕಥೆಗಳು

೪. ಆಸೆಬುರ್ಕಿ ಸೊಸೇರ್ಗೆ ಹಂಚ್ನ ಬುರ್ಕೀನೇ ಸೋಬ್ತಿ .... ೯
೫. ಉಂಡೂ ಹೋದ, ಕೊಂಡೂ ಹೋದ .... ೧೧
೬. ಹಣ್ಣೂ ಕೆಡವ್ಕೊಂಡು ಹೆಣ್ಣೂ ಹೊಡ್ಕೊಂಡ್ಹಂಗೆ .... ೧೩

### ಹಾಸ್ಯ ಕಥೆಗಳು

೭. ಅಯ್ಯಪ್ಪಗೆ ಆದದ್ದು ದಾಸಪ್ಪಗೂ ಆಗ್ತೈತಿ .... ೧೭
೮. ಅಳಿಯನ ಎಮ್ಮೆ ಮಾವ್ನ ಕಲ್ಲೊಳ್ಹಲ ಮೇದ್ಹಂಗೆ .... ೨೧
೯. ಅಳಿಯನ ಕುಲ್ದು ಬೆಳ್ಗಾಗೊ ತಂಕ .... ೨೪
೧೦. ದಡ್ಡಗೆ ಒಂದು ದಂಡಾದ್ರೆ ಜಾಣಗೆ ಮೂರ್ದಂಡ .... ೨೬
೧೧. ಮೂಳರ ಪಂತ ಮೂರಾಬಟ್ಟೆ .... ೨೮

### ವೃತ್ತಿ ಕಥೆಗಳು

೧೨. ಕಲ್ಲಂಗ್ಡಿ ಕನಸ್ನಾಗೆ ಬುಡೇನ್ ಸಾಬು ಬಡ್ವಾದ .... ೩೧
೧೩. ಬೆಲ್ಲೋನು ಬಾಯ್ಬ್ಯಾಯ್ ಬಡ್ಕಂಡ್ರೆ
ತೆಂಗಿನ್ಕಾಯ್ಯೋನು ತಲೆ ತಲೆ ಹೊಡ್ಕಂಡ .... ೩೪
೧೪. ಸೀರಾಗಿದ್ದ ಅಗ್ಸ ಸೀರಡಸಿ ಸತ್ಹಂಗೆ .... ೩೫
೧೫. ಬಿಡ್ಡೀ ಅಂದ್ರೆ ಬಂಗಾರ್ದ ಕಡ್ಡೀ ಅಂತ .... ೩೬
೧೬. ಹೊನ್ನಾಳಿ ಅಗ್ಸ ಕೆಟ್ಟಂಗೆ .... ೩೮

## ನೀತಿ ಕಥೆಗಳು


೧೭. ಕಾರ್ಯವಾಸಿ ಕತ್ತೆ ಕಾಲು ಕಟ್ಟು–೧ .... ೪೧

೧೮. ಕಾರ್ಯವಾಸಿ ಕತ್ತೆ ಕಾಲು ಕಟ್ಟು–೨ .... ೪೩

೧೯. ಹುಚ್ಚಾಸೆ ಕಿಚ್ಚಿಡ್ತು .... ೪೪


## ಐತಿಹ್ಯ ಕಥೆಗಳು


೨೦. ಎತ್ತು ಗಾಡಿ ಜಿದ್ದಿಗೆ ಕತ್ತಿಕೊಡ್ಲಿ ಕುಣ್ದಾಡಿದ್ವಂತೆ .... ೪೯

೨೧. ದೆವ್ವನ ಕಾಟ್ದಾಗೆ ದಾಸರಹಟ್ಟಿ ಹಾಳಾತಂತೆ .... ೫೨


## ಪ್ರಾಣಿ ಕಥೆಗಳು


೨೨. ಆನೆ ಜರ್ದು ಒಂಟೆ ಹುಟ್ಡಂಗೆ .... ೫೬

೨೩. ಹುಲಿ ಪಟ್ಟೆ ಕಂಡು ನರಿ ಬರೆ ಹಾಕಿಸ್ಕಂಡ್ಹಂಗೆ .... ೫೮

೨೪. ಕುರಿ ವರಕೇಳಾಕೆ ಹೋಗಿ
ಜರಕ್ಕೆ ವರ ಪಡ್ಕಂತಂತೆ .... ೬೦

೨೫. ಕತ್ತೆ ಒದ್ತಕ್ಕೆ (ಲಾತ್ನೆ) ಹುಲೀನೂ ಹೇತ್ಕಂಡ್ಹಂಗೆ .... ೬೨


# ಪ್ರಸ್ತಾವನೆ

## ೧

ಕನ್ನಡ ಸಾಹಿತ್ಯ ಪರಿಷತ್ತು ೧೯೮೦ರಲ್ಲಿ "ಗ್ರಾಮೀಣ ಪರಿಸರದ ಗಾದೆಗಳನ್ನು ಸಂಗ್ರಹಿಸಿಕೊಡಿ" ಎಂದು ನನ್ನನ್ನು ಕೇಳಿಕೊಂಡ ಫಲವೇ ೧೯೮೧ರಲ್ಲಿ ಪರಿಷತ್ತಿನಿಂದ ಬೆಳಕು ಕಂಡ ನನ್ನ "ಗ್ರಾಮೀಣ ಗಾದೆಗಳು" ಎಂಬ ಸಂಗ್ರಹ. ಈ ಸಂಗ್ರಹದ ಸಂಪಾದನಾ ಕಾರ್ಯದಲ್ಲಿ ತೊಡಗಿದ್ದಾಗ ನನ್ನ ಗಮನವನ್ನು ವಿಶೇಷವಾಗಿ ಸೆಳೆದವು ಗಳೆಂದರೆ— ಕೆಲವು ಗಾದೆಗಳು ತಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಂಡಿರುವ ಕಥಾ ಪ್ರಸಂಗಗಳು. ಆ ಪ್ರೇರಣೆಯಿಂದಾಗಿ ಆರು ಗಾದೆಯ ಕಥೆಗಳನ್ನು "ಗ್ರಾಮೀಣ ಗಾದೆಗಳು" ಸಂಗ್ರಹದ ಅನುಬಂಧ–೨ರಲ್ಲಿ ಸೇರಿಸಿರುತ್ತೇನೆ. ಅದಕ್ಕೆ ಉತ್ತಮ ಪ್ರತಿ ಕ್ರಿಯೆ ವಿದ್ವಾಂಸರಿಂದ ಬಂದುದರಿಂದ "ಗಾದೆಯ ಕಥೆಗಳು" ಸಂಗ್ರಹದ ಸಂಪಾದನಾ ಕಾರ್ಯಕ್ಕೆ ಅನಿವಾರ್ಯವಾಗಿ ನನ್ನನ್ನು ಒಪ್ಪಿಸಿಕೊಳ್ಳಬೇಕಾಯಿತು.

ಗಾದೆಗಳಿಗಿಂತ ಗಾದೆಯ ಕಥೆಗಳು ಓದುಗರ ಮೇಲೆ ತೀವ್ರತರವಾದ ಪರಿಣಾಮ ವನ್ನುಂಟು ಮಾಡುತ್ತವೆ. ಗಾದೆ, ಒಂದು ನೈಜಾನುಭವ ಎದೆ ತಟ್ಟಿದಾಗ ಮೂಡುವ ಮೂರ್ತಿಯಾದರೆ, ಒಂದು ಗಾದೆಯ ಕಥೆ ಚಾಣದ ಅನೇಕ ಪೆಟ್ಟು ತಿಂದು ಮೂಡುವ ಸುಂದರ ಶಿಲ್ಪಕಲಾಕೃತಿಯಂತೆ. ಒಂದು ಸುರಮ್ಯ ಶಿಲ್ಪಕಲಾಕೃತಿಯಂತೆ ಅದು ತಲತಲಾಂತರದವರೆಗೂ ತನ್ನ ಪ್ರಭಾವದ 'ಪ್ರಭಾವಳಿ'ಯನ್ನು ಉಳಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಜನಪದ ಕಥೆಗಳು ಕಟ್ಟು ಕಥೆಗಳಂತೆ ಕಂಡುಬಂದರೆ, ನೆಲದ ಬದುಕೇ ನೆಲೆಗಟ್ಟಾದ ಗಾದೆಯ ಕಥೆಗಳು ಬಾಳಿನ ವಿವಿಧಾನುಭವಗಳ ಸಿಹಿಕಹಿ ಯನ್ನುಂಡು ಹುಟ್ಟುವ "ಹುಟ್ಟು ಕಥೆಗಳು".

"ಹುಟ್ಟು ಕಥೆಗಳು" ಎಂದಾಗ "ಅರಮನೆಯಲ್ಲಿದ್ದು ಗೊರಕೆ ಹೊಡಿಯುತ್ತಿದ್ವಿ, ನೆರೆಮನೆಗೆ ಬಂದು ಕೆರ್ಕಳ್ಳಾಕೆ ಹತ್ತಿದ್ವಿ" ಎಂಬ ಈ ಗಾದೆ ಜನ್ಮ ಪಡೆದ ಪ್ರಸಂಗ ನೆನಪಿಗೆ ಬರುತ್ತದೆ. ೧೯೮೪ ಮೇ ೧೮ನೆಯ ದಿನಾಂಕ ನಾನು ಮತ್ತು ನನ್ನ ಮಿತ್ರರಾದ ಶ್ರೀ ಟಿ. ಬಿ. ನೇತ್ರಕರ್ ಪದವಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ಮೈಸೂರಿಗೆ ಹೋಗಿ ವಸತಿ ಗೃಹದ ಕೋಣೆಯೊಂದರಲ್ಲಿ ವಾಸ್ತವ್ಯ ಹೂಡಿ ದೆವು. ಆ ವಸತಿ ಗೃಹದ ಹೆಸರು **Palace View** (ಅರಮನೆ ನೋಟ). ಗದ್ದುಗೆಯಂಥ ಹಾಸಿಗೆಯ ಮಂಚ, ಒಳ್ಳೆಯ ಸೊಳ್ಳೆ ಪರದೆ. ಗಾಳಿ, ನೀರು, ಬೆಳಕಿನ ಸಮೃದ್ಧ ಅನುಕೂಲತೆಯನ್ನು ಹೊಂದಿದ್ದ ಪ್ರಶಸ್ತವಾದ ಕೋಣೆ. ಆಗಾಗ್ಗೆ ಕಸ

ಗುಡಿಸುವ, ಫಿನಾಲಿನಿಂದ ನೆಲ ಒರಸುವ, ಕರೆಗಂಟೆ ಒತ್ತಿದಾಗ ಹಕ್ಕಿಯಂತೆ ಹಾರಿ ಹಾಜರಾಗುತ್ತಿದ್ದ ಕೆಲಸದ ಹುಡುಗ ! ಇಡೀ ದಿನದ ಮೌಲ್ಯಮಾಪನದ ಶ್ರಮ ಪುಷ್ಕಳವಾದ ನಿದ್ರೆಯನ್ನುಂಡು ಬೆಳಗಾಗುವ ವೇಳೆಗೆ ಮಾಯವಾಗುತ್ತಿತ್ತು.

ಈ ಸುಖಾನಂದದ ಅನುಭವ ಮೂರು ದಿನ ಮಾತ್ರ. ನಾಲ್ಕನೆಯ ಬೆಳಗಾಗುತ್ತಲೇ ಅದಿಲ್ಲವಾಗುವ ಪ್ರಸಂಗ ಉದ್ಭವಿಸಿತು. ಆ ವಸತಿ ಗೃಹದ ಮೇಲ್ವಿಚಾರಕ ನಮ್ಮಲ್ಲಿಗೆ ಬಂದು "ಸಾರ್ ನಮ್ಮ ಮ್ಯಾನೇಜರ್ ಸಾಹೇಬ್ರು ತುರ್ತಾಗಿ ಇಂದೇ ಬರುತ್ತಾರೆ. ಈ ರೂಮನ್ನು ಖಾಲಿ ಮಾಡಿರಿ. ನಿಮಗೆ ಬೇರೆ ವ್ಯವಸ್ಥೆ ಮಾಡುವೆ" ಎಂದು 'ಸರ್ವರಸಂಡಾಸಿ'ನ ಪಕ್ಕದ ರೂಮನ್ನು ತೋರಿಸಿ "ಅಲ್ಲಿಗೆ, ಈಗಲೇ ನೀವು ಶಿಫ್ಟ್ ಆಗಲೇಬೇಕು" ಆಜ್ಞೆ ಮಾಡಿದಂತೆ ಹೇಳಿದಾಗ, ಆ ಆದೇಶವನ್ನು ಪಾಲಿಸಿದಂತೆ ಆ ವಸತಿಗೃಹವನ್ನೇ ತೊರೆದು ನೆರೆಯ ವಸತಿಗೃಹದ ಗಿರಾಕಿಗಳಾದೆವು.

ಆ ಹೊಸ ವಸತಿಗೃಹದ ಕೋಣೆಯೋ ? "ಅರಮನೆಯ ನೋಟ"ಕ್ಕೆ ತೀರಾ ವಿರುದ್ಧ. ಅನೇಕ ಭೂಪಟಗಳನ್ನು ಬರೆಯಿಸಿಕೊಂಡಂತಿದ್ದ ಹಾಸಿಗೆಗಳು; ಅನೇಕ ಕಣ್ಣುಗಳನ್ನು ತೆರೆದುಕೊಂಡು ನೋಡುವಂತಿದ್ದ ಹರಿದ ಸೊಳ್ಳೆ ಪರದೆಗಳು; ಬೀಸುವಾಗ ತಲೆ ನಡುಗಿಸುತ್ತಾ "ಇನ್ನೇನು ಬಿದ್ದೇಬಿಡುತ್ತೇನೆ" ಎಂಬಂತೆ ತಿರುಗುತ್ತಿದ್ದ ಫ್ಯಾನು; ಹಗಲುಹೊತ್ತಿನಲ್ಲೇ ರಾಜಾರೋಷವಾಗಿ ಸೋಬಾನ ಹಾಡುತ್ತಿದ್ದ ಸೊಳ್ಳೆ ವೀರರು; (ಸೊಳ್ಳೆ ನೀರೆಯರೂ ಇದ್ದಿರಬಹುದು.) ಮೆಲ್ಲನೆ ಚುಚ್ಚುಮದ್ದು ಕೊಟ್ಟು ಎಚ್ಚರಿಸುತ್ತಿದ್ದ ತಿಗಣೆಗಳು; ಮೀಸೆಯನ್ನು ಅಲ್ಲಾಡಿಸುತ್ತಾ ಮುಖ ತೋರಿಸಿ ಕಣ್ಮರೆಯಾಗುತ್ತಿದ್ದ ಜಿರಳೆಗಳು ! ಈ ಸೈನ್ಯದ ಚಕ್ರವ್ಯೂಹದೊಳಗೆ ಸಿಲುಕಿದ್ದ ನಮ್ಮ ದಣಿದ ದೇಹಕ್ಕೆ ನಿದ್ರೆ ಬರುವುದಾದರೂ ಹೇಗೆ ? ಪರದೆಯ ಕಣ್ಣುಗಳಿಂದ ದಾಳಿ ಮಾಡಲು ನುಗ್ಗಿ ಬಂದ ಸೊಳ್ಳೆ ದಂಡನ್ನು 'ರಪ್ ರಪ್' ಎಂದು ಹೊಡೆಯುತ್ತಾ, ತಿಗಣೆ ಕಡಿತಕ್ಕೆ 'ಪರಪರ' ಮೈ ಕೈ ಕೆರೆದುಕೊಳ್ಳುತ್ತಾ ಜಾಗರಣೆಯಲ್ಲಿ ಕಳೆದಂತಾಯಿತು ಆ ರಾತ್ರಿ. ಬೆಳಗಾದಾಗ ಬೇರೆ ಸೊಳ್ಳೆ ಪರದೆಗಾಗಿ ಬೇಡಿಕೆ ಇಟ್ಟಾಗ ಬಂದ ಉತ್ತರ : ನಿಮಗೆ ಕೊಟ್ಟಿರುವ ಪರದೆಗಳೇ ಅತ್ಯುತ್ತಮವಾದವುಗಳು. ಬೇರೆ ಇಲ್ಲವೇ ಇಲ್ಲ ಸಾರ್ !

ಎರಡನೆಯ ರಾತ್ರಿ ನಮ್ಮ ಸಭ್ಯತೆಯನ್ನು ಪೂರ್ಣ ತಿಳಿದುಕೊಂಡ ಸೊಳ್ಳೆ, ತಿಗಣೆಗಳು ತೀವ್ರ ಸ್ವರೂಪದ ದಾಳಿ ಮಾಡತೊಡಗಿದವು. ಎದ್ದು ಕುಳಿತ ಮಿತ್ರರು 'ಚಟ್ ಚಟ್' ಎಂದು ಸೊಳ್ಳೆಗಳನ್ನು ಹೊಡೆಯುತ್ತಾ ಪರಪರ ಮೈಕೈ ಕೆರೆದುಕೊಳ್ಳುತ್ತಾ ಬಾತ್ ರೂಮಿಗೆ ಹೋಗಿ ಬಂದರು ! ಬಂದವರು ಮೇಜಿನ ಮೇಲಿದ್ದ ಹೂಜಿಯನ್ನೆತ್ತಿ ಗಟಗಟಾಂತ ನೀರು ಕುಡಿದು ಉಬ್ಬಸದ ಉಸಿರೆಳೆದು–"ರೆಡ್ಡಿಯವರೇ ಏನ್ರೀ ಇದು !? ಅರಮನೆಯಾಗಿದ್ದು ಗೊರಕೆ ಹೊಡಿತಿದ್ವಿ. ನೆರೆಮನೆಗೆ ಬಂದು ಕೆಟ್ಕೊಳ್ಳಹಂಗಾಯ್ತು" ಎಂದು ತಮ್ಮ ಸಂಕಟವನ್ನು ತೋಡಿಕೊಂಡು ನಾಳೆ ಬೇರೆ



ರೂಮು ಸಿಕ್ಕರೆ ಇದನ್ನು ಖಾಲಿ ಮಾಡೋದೇ ವಾಸಿ. ಇಲ್ಲ, ಶಿವಮೊಗ್ಗಕ್ಕೇ ಹೊರಟುಬಿಡೋಣ" ಎಂದರು. ಆ ದಿನವೇ ಬೇರೆ ವಸತಿಗೃಹದ ಗಿರಾಕಿಗಳಾದೆವು ಅನ್ನಿ.

ಹೀಗೆ, ಮಿತ್ರರ ಅನುಭವದ ಮೂಸೆಯಿಂದ ಹುಟ್ಟಿ ಬಂದ ಗಾದೆ ಕಥಾಲೇಪನದ ಕಾಲದ ಮುದ್ರೆಯನ್ನೊತ್ತಿಕೊಂಡು ಜೀವಂತಿಕೆಯನ್ನು ಪಡೆದುಕೊಂಡಿದೆ. ಗಾದೆ ಕಥೆಗಳು ಇಂಥ ನೈಜಾನುಭವದ ಸ್ಮಾರಕಗಳಂತೆ ತಮ್ಮ ಅಸ್ತಿತ್ವವನ್ನು ಬಹುಕಾಲ ಉಳಿಸಿಕೊಳ್ಳುತ್ತವೆ. ಇಂಥ ಗಾದೆಕಥೆಗಳ ಸಂಗ್ರಹವೇ ಈ "ಗಾದೆಯ ಕಥೆಗಳು".

ಗಾದೆಗಳ ಸಂಗ್ರಹ ಮತ್ತು ಸಂಪಾದನೆಗಿಂತ ಗಾದೆಯ ಕಥೆಗಳ ಸಂಗ್ರಹ ಹಾಗೂ ಸಂಪಾದನಾ ಕಾರ್ಯ ಶ್ರಮದಾಯಕವಾದುದು. ಒಂದು ಗ್ರಾಮದ ಒಳ್ಳೆಯ ಮಾತುಗಾರರನ್ನು ಕೆಣಕಿ ಮಾತಿಗೆಳೆದರೆ ಅವರ ಮಾತುಗಳಲ್ಲಿ ಗಾದೆ ಮಾತುಗಳು ಅಯತ್ನವಾಗಿ ತಂತಾನೆ ಹೊರಬೀಳುತ್ತವೆ. ಆದರೆ ಕಥಾ ಪ್ರಸಂಗವನ್ನುಳ್ಳ ಹಿನ್ನೆಲೆಯನ್ನು ಕೇಳಿದರೆ "ಏನೋಪಾ, ಕೆಲವ್ರು ಹಂಗೇ ಹೇಳ್ತಾರೆ, ಕೆಲವ್ರು ಹಿಂಗೆ ಹೇಳ್ತಾರೆ. ಮತ್ತೆ ಕೆಲವ್ರು ಹೆಂಗೆಂಗೋ ಹೇಳ್ತಾರೆ ಎಂದು" ಕೈಯ್ಯಾಡಿಸಿಬಿಡುತ್ತಾರೆ. ಹೀಗಾಗಿ ಗಾದೆಯ ಕಥೆಗಳು ಅನೇಕ ಪಾಠಗಳನ್ನು ಪಡೆದಿರುತ್ತವೆ ಎಂಬುದು ಸ್ಪಷ್ಟ. ಆಗ ಶುದ್ಧ ಪಾಠದ ಸಂಪಾದನಾ ಕಾರ್ಯಕ್ಕೆ ನಿಷ್ಠಾಯುಕ್ತ ಪರಿಶ್ರಮ ಅನಿವಾರ್ಯವಾಗಿ ಬೇಕಾಗುತ್ತದೆ.

೨

## ಗಾದೆಕಥೆಗಳ ವರ್ಗೀಕರಣ

ಜನಪದ ಕಥೆಗಳಂತೆ ಗಾದೆಕಥೆಗಳ ವರ್ಗೀಕರಣದಲ್ಲೂ ಅನೇಕ ತೊಡಕುಗಳು ತಲೆ ಎತ್ತುತ್ತವೆ. ಈ ಸಂಗ್ರಹದ ಗಾದೆಯ ಕಥೆಗಳು ಶೇಕಡ ೭೫ ರಷ್ಟು ಗ್ರಾಮೀಣ ಸಾಮಾನ್ಯರ ಬದುಕಿನ ಹಿನ್ನೆಲೆಯಲ್ಲಿ ಹುಟ್ಟಿಕೊಂಡಂಥವುಗಳಾಗಿವೆ. ಇಲ್ಲಿನ ೨೫ ಕಥೆಗಳಲ್ಲಿ ಕಂಡುಬರುವ ಜನಸಾಮಾನ್ಯರ ವೈವಿಧ್ಯಮಯವಾದ ಮುಖಗಳು ಮೇಲಿನ ಮಾತನ್ನು ರುಜುವಾತುಪಡಿಸುತ್ತವೆ.

ಈ ಹಿನ್ನೆಲೆಯಲ್ಲಿ ಮತ್ತು ಡಾ|| ಜೀಶಂಪರವರು "ಕನ್ನಡ ಜನಪದ ಕಥೆಗಳು" ಎಂಬ ಸಂಗ್ರಹದಲ್ಲಿ ಮಾಡಿರುವ "ಜನಪದ ಕಥೆಗಳ ವರ್ಗೀಕರಣ"ದ ನಿಯಮ ಹಾಗೂ "ಗ್ರಾಮೀಣ ಗಾದೆಗಳು" ಎಂಬ ಸಂಗ್ರಹದಲ್ಲಿ ನಾನು ಮಾಡಿರುವ ಗಾದೆಗಳ ವರ್ಗೀಕರಣ ಮಾದರಿಯನ್ನು ಅನುಸರಿಸಿ ಸಂಗ್ರಹಿಸಿರುವ ಮಿತಿಯಲ್ಲಿ ಗಾದೆಯ ಕಥೆಗಳನ್ನು ಅಧ್ಯಯನ ದೃಷ್ಟಿಯಿಂದ ಕೆಳಕಂಡಂತೆ ವರ್ಗೀಕರಿಸಲಾಗಿದೆ :

೧. ದಾಂಪತ್ಯ ಕಥೆಗಳು
೨. ತಂತ್ರ ಕುತಂತ್ರ ಕಥೆಗಳು
೩. ಹಾಸ್ಯ ಕಥೆಗಳು
೪. ವೃತ್ತಿ ಕಥೆಗಳು
೫. ನೀತಿ ಕಥೆಗಳು
೬. ಐತಿಹ್ಯ ಕಥೆಗಳು
೭. ಪ್ರಾಣಿ ಕಥೆಗಳು.

೧

ದಾಂಪತ್ಯ ಜೀವನ ತಾರುಣ್ಯ ಜೀವನದ ಮೊದಲ ರಸಘಟ್ಟ. ಕೌಟುಂಬಿಕ ಜೀವನದ ಒಂದು ಅಂಗವಾದ ದಾಂಪತ್ಯ ಜೀವನದ ಸಿಹಿಕಹಿ ಅನುಭವಗಳು ಜೀವನ ಪರ್ಯಂತ ಉಳಿಯುವಂಥವುಗಳು. ಈ ವಿಭಾಗದ ಮೊದಲೆರಡು ಕಥೆಗಳಲ್ಲಿ ಗಂಡ ಹೆಂಡಿರ ಮಧ್ಯೆ ಊಟದ ಬಗ್ಗೆ ಮುನಿಸು, ತಾತ್ಸಾರ ಮೂಡಿ ಕಡೆಗೆ ಹಾಸ್ಯವು ಶೃಂಗಾರದಲ್ಲಿ ಕೊನೆಗೊಳ್ಳುವ ಸನ್ನಿವೇಶಗಳು ಹದಿಹರೆಯದವರು ಮತ್ತೆ ಮತ್ತೆ ಮೆಲುಕು ಹಾಕುವಂತಿವೆ. ಮೂರನೆಯ ಕಥೆ ಮೊದಲನೆಯ ಗಂಡನನ್ನು ತಿರಸ್ಕರಿಸಿ ತಾಳಿಯನ್ನು ಕಿತ್ತೆಸೆದು ಹೋದವಳು, ಬೇರೊಬ್ಬನ ಹೆಂಡತಿಯಾಗುತ್ತಾಳೆ. ಎರಡನೆಯ ಗಂಡನೂ ಬೇಡವಾಗಿ ಮತ್ತೆ ಮೊದಲನೆಯ ಗಂಡನನ್ನು ಕೂಡಿಕೊಳ್ಳುವ ದೃಶ್ಯ ಹೃದಯಸ್ಪರ್ಶಿಯಾಗಿದೆ. ಮೊದಲೆರಡು ಕಥೆಗಳಲ್ಲಿ ದಂಪತಿಗಳಲ್ಲದೆ ಮತ್ತಾವ ಪಾತ್ರಗಳೂ ತಲೆ ಹಾಕದೆ ಕಥೆಗಳು ಯಾವ ಅಡೆತಡೆಗಳಿಲ್ಲದೆ ಹರಿಯುವ ನೀರಿನಂತೆ ಸರಾಗವಾಗಿ ಸಾಗುತ್ತವೆ. ಮೂರನೆಯ ಕಥೆ "ಸೀರುಡಿಕೆ" ಸಂಪ್ರದಾಯದ ಒಬ್ಬ ಕೂಲಿ ಹೆಣ್ಣಿನ ಸ್ವೇಚ್ಛಾ ರೀತಿಯ ಸ್ವಾತಂತ್ರ್ಯದ ಕಹಿಯನ್ನು ಚಿತ್ರಿಸಿ ಅವಳಿಗೆ ಪಾಠ ಕಲಿಸುತ್ತದೆ.

ಮೊದಲೆರಡು ಕಥೆಗಳ ಗಂಡಂದಿರು ತಮ್ಮ ಹೆಂಡತಿಯರು ನೀಡಿದ ಊಟದ ಬಗ್ಗೆ ಮುನಿಸು, ತಾತ್ಸಾರ ತೋರಿದರೂ ಅವರ ಮೇಲೆ ಕೈ ಎತ್ತದೆ ಅಪ್ಪಿಕೊಳ್ಳುವವರಾಗಿದ್ದರೆ, ಮೂರನೆಯ ಕಥೆಯ ಒಬ್ಬಳ ಇಬ್ಬರು ಗಂಡಂದಿರು ಹೆಂಡತಿಯ ಶೀಲದ ಬಗ್ಗೆ ನಿಷ್ಕರುಣಿಗಳಂತೆ ಬೈದು ಬಡಿಯುವವರಾಗಿದ್ದಾರೆ. ತಪ್ಪಿಸಿಕೊಂಡು ಹೋಗಿದ್ದ ಹಸು ತಾನಾಗಿಯೇ ಮತ್ತೆ ಮನೆಗೆ ಬಂದಾಗ ಹಸುವನ್ನು ನೋಡುವ ಒಡೆಯನಂತೆ, ಮರಳಿ ತನ್ನ ಬಳಿ ಬಂದ 'ಹೆಂಡತಿಯಾಗಿದ್ದವಳನ್ನು' ಬರಮಾಡಿಕೊಳ್ಳುವುದು ಮೊದಲ ಗಂಡನ ಹಿರಿಯ ಗುಣ–ಎಂಬುದು ಸ್ಪಷ್ಟವಾಗುತ್ತದೆ.



೨

ಈ ವಿಭಾಗದ ಕಥೆಗಳನ್ನು 'ತಂತ್ರ' ಕಥೆಗಳೆಂದೇ ವರ್ಗೀಕರಿಸಬಹುದು. ಆದರೆ 'ತಂತ್ರ'ದ ಜೊತೆಯಲ್ಲೇ ಬದುಕಿನಲ್ಲಿ 'ಕುತಂತ್ರ'ವೂ ಹೆಣೆದುಕೊಂಡಿರುವುದರಿಂದ ಎರಡನ್ನೂ ಒಂದೇ ಶೀರ್ಷಿಕೆಯಲ್ಲಿ ಸೇರಿಸಲಾಗಿದೆ.

'ತಂತ್ರ'ದಲ್ಲಿ ಜಾಣ್ಮೆಗೇ ಪ್ರಾಧಾನ್ಯ. ಅಲ್ಲಿ ಅನ್ಯರ ನಷ್ಟಕ್ಕೆ ಅವಕಾಶ ಕಡಿಮೆ. ಕುತಂತ್ರ ಕಥೆಗಳಲ್ಲಿ ದ್ವೇಷದ ನಷ್ಟಗಳೇ ಅಧಿಕ. ತನ್ನ ಸೊಸೆಯರು ತನ್ನನ್ನು ಆಸು ಪಾನ ಮಾಡದಿದ್ದಾಗ ಅತ್ತೆ ತೋರುವ ಉಪಾಯ (೪), ಸೋದರ ಮಾವನ ಮಗಳನ್ನೇ ಕೈಹಿಡಿಯಲು ನಿರ್ಧರಿಸಿದ ಸೋದರ ಅಳಿಯನ ಹುನ್ನಾರ (೬) ಇವು ತಂತ್ರ ಕಥೆಗಳ ಲಕ್ಷಣವನ್ನು ಪಡೆದಿದ್ದರೆ, ಕುತಂತ್ರವನ್ನು (೫) ಕಥನ ಕಲೆಯ ಮೂಲಕ ಪರಿಣಾಮಕಾರಿಯಾಗುವಂತೆ ನಿರೂಪಿಸುತ್ತದೆ.

೩

ಗ್ರಾಮೀಣರ ಬದುಕಿನಲ್ಲಿ ಹಾಸ್ಯಕ್ಕೆ ಹೆಚ್ಚಿನ ಪ್ರಾಮುಖ್ಯವಿದೆ. ನಗೆಯನ್ನು ತಮ್ಮ ಬಾಳಿನ ರಂಜನೆಯ ಮಾಧ್ಯಮವನ್ನಾಗಿ ಸ್ವೀಕರಿಸುವ ಗ್ರಾಮೀಣರು ಕಥೆ ಕಟ್ಟಿ, ಆ ಕಥೆಗೆ ಗಾದೆಯ ಹೆಸರನ್ನು ಕರೆದಂತಿದೆ–ಎಂಬುದಕ್ಕೆ ಈ ವರ್ಗದ ಗಾದೆಗಳು ಉದಾಹರಣೆಯಾಗಿ ನಿಲ್ಲುತ್ತವೆ. ಈ ವರ್ಗದ ಕಥೆಗಳಲ್ಲಿ ಸಂಕಟ ಸಂತಾಪಗಳಿದ್ದರೂ ಹಾಸ್ಯಕ್ಕೇ ಅಗ್ರಪಟ್ಟ–ಎನ್ನುವುದನ್ನು (೭, ೮, ೯, ೧೦, ೧೧)ರ ಗಾದೆಯ ಕಥೆಗಳಲ್ಲಿ ಮನಗಾಣಬಹುದು.

೪

ಈ ವರ್ಗದ ಕಥೆಗಳನ್ನು 'ಕೌಟುಂಬಿಕ' ಕಥೆಗಳೆಂದು ಕರೆಯಬಹುದಾದರೂ, ವೃತ್ತಿ ಪ್ರಧಾನ ಕಥಾ ಪ್ರಸಂಗಗಳ ಪ್ರಾಮುಖ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು 'ವೃತ್ತಿಕಥೆಗಳು' ಎಂದು ವಿಭಜಿಸಲಾಗಿದೆ. ಈ ಕಥೆಗಳಲ್ಲಿ (೧೨, ೧೩, ೧೪, ೧೫, ೧೬) ಕಲ್ಲಂಗಡಿ ಬೇಸಾಯದ ಬುಡೇನ್‌ಸಾಬು, ಬೆಲ್ಲ ಮತ್ತು ತೆಂಗಿನಕಾಯಿ ವ್ಯಾಪಾರಿಗಳು, ಅಗಸ, ರೆಡ್ಡಿ–ಇವರ ವೃತ್ತಿಗೇ ಸಂಬಂಧಿಸಿರುವ ಘಟನೆಗಳಲ್ಲಿ ವ್ಯಕ್ತಿ ಚಿತ್ರಣದ ಅಂಶಗಳೂ ಇದ್ದು ಓದುಗರ ಗಮನವನ್ನು ಸೆಳೆಯಬಲ್ಲವು–ಎಂಬುದನ್ನು ವಿಶೇಷವಾಗಿ ಗಮನಿಸಲಾಗಿದೆ:

೫

"ನೀತಿ ಇಲ್ಲೋನು ಕೋತಿ" "ಜಾತಿಗೆಟ್ಟರೂ ನೀತಿಬಿಡಬೇಡ" ಎಂಬಂಥ ಗಾದೆಗಳು ಮಾನವನ ಬಾಳ್ವೆಗೆ ನೀತಿಯ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ.

"ಅತಿಯಾಸೆ ಗತಿಗೇಡು. ಆಸೆಯೇ ದುಃಖಕ್ಕೆ ಮೂಲಕಾರಣ"–ಎಂಬ ನೀತಿಯನ್ನು (೧೯)ನೆಯ ಗಾದೆಯ ಕಥೆ ತೀವ್ರತರ ಪರಿಣಾಮವಾಗುವಂತೆ ಬೋಧಿಸುತ್ತದೆ. ಕತ್ತೆಯಂಥ ಕತ್ತೆಯ ಕಾಲನ್ನಾದರೂ ಹಿಡಿದು ಕಾರ್ಯವನ್ನು ಸಾಧಿಸಬೇಕು–ಎನ್ನುವ ನೀತಿಯನ್ನು (೧೭, ೧೮) ನೆಯ ಗಾದೆಯ ಕಥೆಗಳು ಪ್ರತಿಪಾದಿಸುತ್ತವೆ. ವಾಸು ದೇವನೂ ಸಹ ಕತ್ತೆಯ ಕಾಲನ್ನು ಹಿಡಿದು ಕಾರ್ಯ ಸಾಧಿಸಿಕೊಂಡ (೧೮) ಎಂಬ ಐತಿಹ್ಯ ಮಹತ್ವಪೂರ್ಣವಾದುದು.

೬

ಒಂದು ಘಟನೆಯ ಮತ್ತು ಸ್ಥಳದ ಐತಿಹ್ಯವನ್ನು ಆಕರ್ಷಣೀಯ ಕಥನಕಲೆಯೊಂದಿಗೆ ಐತಿಹ್ಯ ವರ್ಗದ ಕಥೆಗಳು (೨೦, ೨೧) ಮನಮುಟ್ಟುವಂತೆ ಚಿತ್ರಿಸುತ್ತವೆ. ಸ್ವತಂತ್ರ ಭಾರತದ ಪ್ರಥಮ ಮಹಾ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಾದ ವೈಷಮ್ಯದ ಬಡಿದಾಟ ಮತ್ತು ಕೊಲೆ, ಸುಲಿಗೆ, ಅತ್ಯಾಚಾರದಿಂದ ಹಾಳಾದ ದಾಸರ ಹಟ್ಟಿಯ ನೆನಪುಗಳು ತಲತಲಾಂತರ ಉಳಿದುಕೊಳ್ಳುವಂತಿವೆ. ಒಂದು ಎಚ್ಚರಿಕೆಯ ಘಂಟಾನಾದದಂತಿದ್ದರೆ, ಮತ್ತೊಂದು ಸೇಡಿನ ಅಮಾನುಷ ಶಕ್ತಿ ದಾಸರ ಹಟ್ಟಿಯನ್ನೇ ಹಾಳುಗೆಡವಿದ ಪ್ರಸಂಗ ಭೀತಿಯೊಂದಿಗೆ ನೀತಿಯನ್ನೂ ಬೋಧಿಸುತ್ತದೆ.

೭

ಇಲ್ಲಿನ ಪ್ರಾಣಿವರ್ಗದ ಕಥೆಗಳಲ್ಲಿ ಮೂರು ಶುದ್ಧ ಪ್ರಾಣಿಕಥೆಗಳಾಗಿರುವುದು (೨೨, ೨೩, ೨೫) ಒಂದು ವೈಶಿಷ್ಟ್ಯ ಎನ್ನಬಹುದು. ಇನ್ನೊಂದು (೨೪) ಮಾನವ ಯಜಮಾನನೊಂದಿಗೆ ಸಂಪರ್ಕವನ್ನಿಟ್ಟುಕೊಂಡಿರುವ ಕಥೆ. ಒಂಟೆ ಆಕಾಶವನ್ನೇ ನೋಡುತ್ತಾ ಏಕೆ ನಡೆಯುತ್ತದೆ? ಕುರಿ ನೆಲನೋಡಿಕೊಂಡೇ ಏಕೆ ನಡೆಯುತ್ತದೆ? ಮತ್ತೆ ಹುಟ್ಟುವಾಗಲೇ ಅದರ ಮೈಮೇಲೆ ಸಣ್ಣನೆಯ, ನುಣ್ಣನೆಯ ದಟ್ಟ ಕೂದಲು ಏಕೆ ಬೆಳೆದಿರುತ್ತವೆ?–ಈ ಪ್ರಶ್ನೆಗಳಿಗೆ ಸಂಬುವಂಥ ಉತ್ತರಗಳು (೨೨, ೨೩) ರಲ್ಲಿ ದೊರೆಯುತ್ತವೆ. ಒಂಟೆ ಮತ್ತು ಕುರಿಯ ಸ್ವರೂಪವನ್ನು ಕಂಡು ಈ ಗಾದೆಯ ಕಥೆಗಳು ಹುಟ್ಟಿಕೊಂಡಿರಬಹುದೆ?

ಕತ್ತೆ ದುಡಿತಕ್ಕೆ ಹೇಳಿ ಮಾಡಿಸಿದಂತಿರುವ ಪ್ರಾಣಿ. ಆದರೆ ಇಲ್ಲಿ ಬರುವ ಕತ್ತೆ (೨೪) ಹುಲಿಯ ಮೇಲೆ ಜಯ ಸಾಧಿಸುವ ಪ್ರಸಂಗ ಅಧಿಕಾರಶಾಯಿಯ ಮೇಲೆ ಶೋಷಿತವರ್ಗದ ಶಕ್ತಿ ಪ್ರದರ್ಶನದಂತಿದೆ! ಮತ್ತೊಂದು ಗಾದೆಯ ಕತ್ತೆ (೧೬) ಮೂಕ ಶೋಕದ ಪ್ರತಿಭಟನೆಯನ್ನು ಧ್ವನಿಸುವಂತಿದೆ!



ನರಿ 'ಕುತಂತ್ರ'ದ ಜೀವಂತ ಸಂಕೇತ. ಇಲ್ಲಿ ಬರುವ ನರಿ (೨೪) ನೈಗಳ್ಳ ಪ್ರಾಣಿ. ಮೇಲಾದ ಅಂತಸ್ತನ್ನು ಬಯಸುವ ಅದನ್ನು ಪಡೆಯಲು ಪ್ರಯತ್ನ ಪಡುವ ಇಚ್ಛೆ ಅದರದ್ದು. ಹುಲಿಯ ಸರ್ವಾಧಿಕಾರವನ್ನು ಕಂಡು ತಾನೂ ಅದರಂತಾಗಬೇಕೆಂದು (ನವಿಲನ್ನು ಕಂಡ ಕೆಂಬೂತ ಪುಕ್ಕ ಕಿತ್ತುಕೊಂಡಂತೆ) ದೇವರನ್ನು ಕಂಡು ದೇವರ ಆದೇಶವನ್ನು ಪಾಲಿಸಲು ಹೋಗಿ ಸಾವಿಗೀಡಾಗುತ್ತದೆ. ಈ ದೃಷ್ಟಿಯಲ್ಲಿ ಈ ಕಥೆ ಓದುಗರ ಗಮನವನ್ನು ವಿಶೇಷವಾಗಿ ಆಕರ್ಷಿಸುತ್ತದೆ.

೩

## ಪಾಠಾಂತರ ಮತ್ತು ಸ್ವೀಕರಣ

ಒಂದು ಲಿಖಿತ ಪಾಠಕ್ಕೆ ಭಿನ್ನ ಪಾಠಗಳಿದ್ದರೆ ಸಂಪಾದನಾ ಸ್ವೀಕರಣ ಕಾರ್ಯ ಸಂಪಾದಕನ ಪಾಲಿಗೆ ಸುಲಭಸಾಧ್ಯವಾಗುತ್ತದೆ. ಆದರೆ ಮೌಖಿಕ ದಾಖಲೆಗಳನ್ನೇ ಆಧಾರವಾಗಿಟ್ಟುಕೊಂಡು ಮಾಡಬೇಕಾದ ಸಂದರ್ಭಗಳಲ್ಲಿ ಸಂಪಾದನಾ ಕಾರ್ಯ ಅನೇಕ ಸಂಶಯಗಳನ್ನು ಎದುರಿಸಬೇಕಾಗುತ್ತದೆ. ಆಗ ಸಂಪಾದಕ ಸಮ್ಮತವಾಗುವಂಥ ಪಾಠವನ್ನು ತನ್ನ ವಿಮರ್ಶಾತ್ಮಕ ತರ್ಕದಿಂದ ಸ್ವೀಕರಿಸಬೇಕಾಗುತ್ತದೆ. ಈ ಗ್ರಂಥ ಸಂಪಾದನಾ ತತ್ವದ ಮೇಲೆ ಈ ಗಾದೆಯ ಕಥೆಗಳನ್ನು (೧೬, ೨೧) ಸಂಪಾದಿಸಲಾಗಿದೆ.

ಹೊನ್ನಾಳಿಯ ಅಗಸನು ಹುಣ್ಣಾಗಿದ್ದ ಕತ್ತೆಯ ಬೆನ್ನಿನ ಮೇಲೆ ಸುಣ್ಣವನ್ನು ಹೇರಿ ಸಾಗಿಸುತಿದ್ದ–ಎಂದು ಒಬ್ಬರು ಹೇಳಿದರೆ, ಇನ್ನೊಬ್ಬರು ಉಪ್ಪು ಎಂದು ಹೇಳುತ್ತಾರೆ. ಮತ್ತೊಬ್ಬರು ತೆಂಗಿನಕಾಯಿ–ಎಂದು ಹೇಳುತ್ತಾರೆ. ಹಬ್ಬ ಹರಿದಿನಗಳಲ್ಲಿ ಮಾತ್ರ ಹೆಚ್ಚಾಗಿ ಬಳಕೆಯಾಗುವ ವಸ್ತುಗಳೆಂದರೆ–ಸುಣ್ಣ ಮತ್ತು ತೆಂಗಿನಕಾಯಿ. ನಿತ್ಯೋಪಯೋಗಿಯಾದ ಉಪ್ಪಿಗೆ ಬೇಡಿಕೆ ಹೆಚ್ಚಾಗುತ್ತದೆ. ಅದು ಸೇರುವೆ ಇಲ್ಲದ ಹೊಳೆಯ ಇನ್ನೊಂದು ದಡ ಸೇರಿ ಮಾರಾಟವಾಗಬೇಕು. ಆ ಅಗಸನು ಬಾಡಿಗೆ ಗೊತ್ತುಮಾಡಿಕೊಂಡು ಕತ್ತೆಯ ಮೇಲೆ ಸಾಗಿಸುತ್ತಿದ್ದುದು ಉಪ್ಪೇ ಇರಬೇಕು–ಎಂಬ ಮೌಖಿಕ ದಾಖಲೆಯ ಪಾಠವನ್ನು ಸ್ವೀಕರಿಸಲಾಗಿದೆ.

ಮತ್ತೊಂದು ಗಾದೆಯ ಕಥೆ (೨೧) ದಾಸರ ಹಟ್ಟಿ ಹಾಳಾದ ಐತಿಹ್ಯಕ್ಕೆ ಸಂಬಂಧಿಸಿದ್ದು. ಒಂದು ಮೌಖಿಕ ಪಾಠದ ದಾಖಲೆ ಹೀಗೆ ಹೇಳುತ್ತದೆ–"ದಾಸರ ಹಟ್ಟಿಯ ಯಾರೋ ಇಬ್ಬರು...ತಮ್ಮ ಹಟ್ಟಿಗೆ ಬಂದು ಗುಡಿಯಲ್ಲಿ ಉಳಿದುಕೊಂಡಿದ್ದ ಮುತ್ತಿನ ವ್ಯಾಪಾರಿಗೆ ಕೊಲೆಯ ಬೆದರಿಕೆ ಹಾಕಿ ಅವನಲ್ಲಿದ್ದ ಮುತ್ತನ್ನೆಲ್ಲಾ ಕದ್ದೊಯ್ದರಂತೆ. ಜೀವಭಯದಿಂದ ಆ ರಾತೋರಾತ್ರಿ ಪಲಾಯನ ಮಾಡಿದ ಮುತ್ತಿನ ವ್ಯಾಪಾರಿ ಸೇಡು ತೀರಿಸಿಕೊಳ್ಳಲು ದಾಸರ ಹಟ್ಟಿಗೇ ಮಾಟ ಮಾಡಿಸಿದನಂತೆ!

ಎರಡನೆಯ ಮೌಖಿಕ ದಾಖಲೆಯ ಪಾಠ ಹೀಗೆ ಹೇಳುತ್ತದೆ : "ವ್ಯಾಪಾರ ಮಾಡಿಕೊಂಡು ಬರುತ್ತಿದ್ದ ಗಂಡಹೆಂಡತಿಯರನ್ನು ಕಳ್ಳರು ಹಿಡಿದು, ಬಡಿದು ಸುಲಿಗೆ ಮಾಡಿದ್ದಲ್ಲದೆ, ಆ ವ್ಯಾಪಾರಿಯ ಹೆಂಡತಿಯನ್ನು ಕೆಡಿಸಿ, ಕಡೆಗೆ ಇಬ್ಬರನ್ನೂ ಕೊಲೆ ಮಾಡಿದರು. ಅವರೇ ದೆವ್ವಗಳಾಗಿ ಊರನ್ನು ಹಾಳು ಮಾಡಿದರು.

ಒಂದನೆಯ ಪಾಠದಲ್ಲಿನ ಸಂಶಯಾತ್ಮಕ ಪ್ರಶ್ನೆ ಎಂದರೆ ದಾಸರಹಟ್ಟಿಯಂಥ ಎಂಟೋ ಹತ್ತೋ ಮನೆ ಇರುವ ಬಡ ಹಳ್ಳಿಗೆ ಮುತ್ತು ಮಾರಲು ವ್ಯಾಪಾರಿ ಬರುತ್ತಾನೆಯೇ ? ಇರಲಾರದು ಎರಡನೆಯ ಪಾಠದಲ್ಲಿ ಹೆಣ್ಣು ಹಣದ ಪ್ರಸ್ತಾಪವಿದ್ದು, ಇವುಗಳ ದುರಾಸೆಗೆ ಆ ಊರಿನ ಕಳ್ಳರು ಕೊಲೆಮಾಡಿರಬಹುದು—ಎಂಬ ಸಂಗತಿಯನ್ನು ಸ್ವೀಕರಿಸಲಾಗಿದೆ.

ಹೊನ್ನಾಳಿ ತಾಲ್ಲೂಕಿನಲ್ಲಿ ಕುಂಕುವ ಮತ್ತು ದೊಡ್ಡೆತ್ತಿನಹಳ್ಳಿ, ಈ ಊರುಗಳ ಮಧ್ಯದಲ್ಲಿರುವಂತೆ ಗುಡ್ಡದ ಸೆರಗಿನಲ್ಲಿ ಬರುವ ದಾಸರಹಟ್ಟಿ ಈಗಲೂ ಮನೆ ಇಲ್ಲದ ಊರಾಗಿರುವುದು ಐತಿಹ್ಯ ವಿಶೇಷವಾಗಿದೆ.

೪

## ಗಾದೆಯು ಕಥೆಗಳು ಮತ್ತು ಕಥನಕಲೆ

ಈ ಸಂಗ್ರಹದ ೨೫ ಕಥೆಗಳನ್ನು ಹೇಳಿದವರ ಸಂಖ್ಯೆ : ೧೫. ಇದರಲ್ಲಿ ಅನಕ್ಷರಸ್ಥ ಮೂವರು ಸ್ತ್ರೀಯರು ಹೇಳಿದ ನಾಲ್ಕು ಕಥೆಗಳಿವೆ. ಅನಕ್ಷರಸ್ಥ ಪುರುಷರು ೧೮ ಕಥೆಗಳನ್ನು ಹೇಳಿದ್ದಾರೆ. ನನ್ನ ಪ್ರಾಥಮಿಕ ಶಾಲಾ ಗುರುಗಳಾಗಿದ್ದ ಇಬ್ಬರು ಒಂದೊಂದು ಕಥೆ ಹೇಳಿದ್ದಾರೆ. ಮತ್ತೊಂದು ದಿನಾಂಕ ೨೫–೫–೯೨ರ ಪ್ರಜಾವಾಣಿ ಸಾಪ್ತಾಹಿಕದಲ್ಲಿ ಪ್ರಕಟವಾಗಿರುವ ಕೆ. ಪಿ. ಸತ್ಯನಾರಾಯಣ ಅವರ ಕಥಾ ಬರಹ.

ಸುಮಾರು ಎರಡು ದಶಕಗಳಷ್ಟು ಅಂತರದ ಅವಧಿಯಲ್ಲಿ ಈ ಕಥೆಗಳು ಮೌಖಿಕ ದಾಖಲೆಯಾಗಿರುವ ಕಾರಣ, ಭಾಷಾ ಬಳಕೆಯಲ್ಲಿ, ಕಥನದಲ್ಲಿ ವ್ಯತ್ಯಾಸ ಕಂಡು ಬಂದರೆ, ಅದು ಸಹಜವೇ ಆಗಿದೆ. ಕಥೆ ಹೇಳಿದವರ ಕಥೆ ಹೇಳುವ ದಾಟಿಯಂತೆ ಜಾನಪದ ಸೊಗಡಿನಿಂದ ಬೆರಗುಗೊಳಿಸುವಂತಿದ್ದು ಅದರ ನೈಪುಣ್ಯವನ್ನು ಎತ್ತಿ ತೋರಿಸುತ್ತದೆ; ಕಥೆಗಳಿಗೆ ಅಪೂರ್ವ ಮೆರಗು ಕೊಡುತ್ತದೆ. ಉದಾ : ೨೫ ನೆಯ ಕಥೆಯ ಆರಂಭದ ಎರಡು ಕಲಮುಗಳನ್ನು ಗಮನಿಸಬಹುದು.–

"ಒಂದು ಕಾಡಿನ ನಡ್ವೆ ಒಂದ್ಕೆರೆ ಇತ್ತು. ಅದ್ರಾಗೆ ಒಂದೆಲ್ಡು ವಾರ ಮಿಗ್ವಸ್ಟು ನೀರಿತ್ತು. ಅಲ್ಲಿಗೆ ಒಂದು ಬಡಕ್ಲು ಕತ್ತೆ ನೀರ್ಕುಡಿಯಾನಾಂತ ಜೋತಾಡ್ತಾ ಬಂತು. ಅಲ್ಲೇ ತುಸು ದೂರ್ದಾಗೆ ಒಂದು ಮರದ ಕೆಳಾಗೆ ಪಟ್ಟಾಗಿ ಹೊಟ್ಟೆಪಿಣಿಗರಿಯಂಗೆ



ತಿಂದು ಮಲಗಿದ್ದ ಹುಲಿಗೆ ಆ ಕತ್ತೆ ಕಾಣಿಸ್ತು. ಕಾಣ್ಸಿದ್ದೇ ತಡ, ಕಣ್ಣು ಕೆಂಪಗ್ಮಾಡಿ, ಮೀಸೆ ನಿಗಿರ್ಸಿ, 'ಆ' ಅಂತ ಆಕ್ಳಿಸಿ, ಮೈಮುರ್ದು ಎದ್ದು ನಿಲ್ತು. ಹೊಟ್ಟೆ ತುಂಬಿ ದೋರ್ಗೆ ಹುಗ್ಗಿ ಮುಳ್ಳಂತೆ. ಆ ಬಡಕ್ಲು ಕತ್ತೆ ತಿನ್ನಾಕೆ ಹುಲಿಗೆ ಅವತ್ತು ಮನಸ್ಸಾಗ್ಲಿಲ್ಲ. ಆದ್ರೂ ಕತ್ತೇನ ಒಂದ್ಸಲ ತಡ್ವಿ ತಮಾಸೆ ಮಾಡಾನಾಂತ ಕೆರೆಹತ್ರ ಬಂದೇಬಿಡ್ತು. ಹುಲೀನ್ನ ಕಂಡ ಕತ್ತೆ ಜಲಜಲಾಂತ ಬೆವ್ತು, ಉಚ್ಚೆ ಹೊಯ್ಕಂಡು ಗಡಗಡಾಂತ ನಡುಗಾಕ್ಹತ್ತು. ಅದ್ರ ಹತ್ರಾನೆ ಬಂದ ಹುಲಿ "ಏನ್ಲಾ, ನಾನಿರೊ ಹತ್ರ ಬರಾಕೆ ಅದೇಟಲೆ ಧೈರ್ಯ ನಿನ್ಗೆ ? ಏನ್ ಜೀವ ಬ್ಯಾಡಾಗೈತಾ ? ನಾನ್ಯಾರಂತ ಗೊತ್ತಿಲ್ಲೇನೋ ?" ಅಂತ ಬಾಯ್ಬಿಟ್ಟು ಬೆದರ್ಸಿಕೇಳ್ತು. ಕತ್ತೆಗೆ ಕತ್ತು ಹಿಚಿಗ್ದಂಗಾಗಿ "ಹ್ಞೆ ಹ್ಞೇ ಹ್ಞೀ" ಅಂತ ತೊದಲ್ತಾ ಹಿಂಗೆ ಹೇಳಾಕೆ ಸುರುಮಾಡ್ತು–

"ನೀನು ಇಡೀ ಕಾಡಿನ ದ್ವರೆ ಅಂತ ಯಾರಿಗ್ಗೊತ್ತಿಲ್ಲ ಹುಲಿರಾಯ ? ಬಾಳಿದ್ರೆ ಹುಲಿ ಬಾಳ್ದಂಗೆ ಬಾಳ್ಬೇಕೂಂತ ಮನುಸ್ರೇ ನಿನ್ನ ತಾಕತ್ನ ಹಾಡ್ಕಂದು ಹೊಗಳ್ತಾರೆ. ನಾನ್ನೋಡಿದ್ರೆ ಬಲಇಲ್ದ ಬಡ್ಞೀವಿ. ನನ್ನ ಸಾಕ್ತಿದ್ದ ಸಾವ್ಕಾರ ದುಡಿಸ್ಕಳ್ತಾತಂಕ ದುಡಿಸ್ಕಂದು, ಕಾಯ್ಲೆ ಬರುತ್ಲೂ ಕಣ್ಣೆತ್ತಿ ನೋಡ್ತಿರ್ಲಿಲ್ಲ. ಮೇವುಗೀವ್ನ ಕನಸ್ನಾಗೆ ತಿಂತಿದ್ದೆ. ನನ್ಗೂ ತಲೆಕೆಟ್ಟು ಉಸ್ರಿರೊವರ್ಗೆ ಈ ಕೆರೆ ಹತ್ರ ಸಿಕ್ಕದ್ನ ಮೇದು, ಏನೂ ಸಿಗ್ದಿದ್ರೆ ನೀರ್ನಾದ್ರೂ ಕುಡ್ಕಂದು ಸಾಯಾನಾಂತ ಅವ್ನಿಗೆ ಕೈಕೊಟ್ಟು ಇತ್ಲಾಗೆ ಬಂದೆ. ಇಲ್ಲಿ ನಿನ್ನ ನೋಡೋ ಪುಣ್ಯ ಸಿಗ್ತು. ನೀನೇ ನೋಡ್ದಂಗೆ ನನ್ನ ಮೈಯಾಗೆ ಪಾವು ರೈತಿಲ್ಲ; ಸೇರು ಮಾಸಿಲ್ಲ ! ಬರೀ ಎಲ್ಬೇ ಎಲ್ಬು ! ಅದ್ರಾಗೆ ಬ್ಯಾರೆ ರೋಗದ ಪಾಪಿ ನಾನು ! ಇಂತ ರೋಗಬಡ್ಕನ್ನತಿಂದ್ರೆ ನಿನ್ಗೂ ರೋಗ ಅಂಟಾಕಿಲ್ವಾ ?" ಅಂತ ಹುಲೀನ ಬಾಯ್ತುಂಬ ಹೊಗ್ಳಿ, ತನ್ನ ಪಾಡ್ನ ಕಳ್ಳು 'ಚುರುಕ್' ಅನ್ದಂಗೆ ತೋಡ್ಕಂತು.

ಈ ಕಥೆಯಲ್ಲಿನ ಕತ್ತೆ ಹುಲಿಗಳು ಭೆಟ್ಟಿಯಾದ ಸಂದರ್ಭ ಅವುಗಳ ಪ್ರಶ್ನೋತ್ತರಗಳಲ್ಲಿ ಕಂಡು ಬರುವ ಹುಲಿಯ ದರ್ಪ, ಕತ್ತೆಯ ಹೀನ ದೀನ ಸ್ಥಿತಿ, ಜಾಣ್ಮೆಯ ಮಾತುಗಾರಿಕೆ ತಲೆದೂಗಿಸುವಂತಿವೆ. ಇಂಥ ಕಥನ ಕಲೆಯ ರಮ್ಯ ಪ್ರಸಂಗಗಳು ಈ ಸಂಗ್ರಹದ ಗಾದೆಯ ಕಥೆಗಳ ತುಂಬಾ ಮುತ್ತು ಚೆಲ್ಲಿದಂತೆ ಹರಡಿ ಚಿತ್ತಾಕರ್ಷಕವಾಗಿವೆ. ಕಥೆಗಳನ್ನು ಹೇಳಿದವರು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸಿರುವ ಸುಮಾರು ೬೦ ಗಾದೆಗಳು ಅವರ ಕಥನ ಕಲೆಗೆ 'ಗರಿ' ಇಟ್ಟಂತಿವೆ.

೫

## ಗಾದೆಯ ಕಥೆಗಳಲ್ಲಿ ಭಾಷಾ ಪ್ರಯೋಗ

ಈ ಸಂಗ್ರಹದ ಗಾದೆಯ ಕಥೆಗಳ ಭಾಷೆ ಮುಕ್ಕಾಲು ಪಾಲು ಶಿವಮೊಗ್ಗ ಜಿಲ್ಲೆಯ ಅರ್ಧ ಮಲೆನಾಡು ಅರ್ಧ ಬಯಲು ಸೀಮೆಯ ಸೆರಗಿಗೆ ಸೇರಿಕೊಂಡಿರುವ ಶಿಕಾರಿಪುರ, ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳಲ್ಲಿ ಈಗಲೂ ಬಳಸುತ್ತಿರುವ ದಿನನಿತ್ಯದ ಭಾಷೆಯನ್ನು ಪ್ರತಿನಿಧಿಸುತ್ತದೆ. (ಆಧುನಿಕ ವಿದ್ಯಾಭ್ಯಾಸ, ನಗರ ಸಂಪರ್ಕ ಮತ್ತು ಸಂಬಂಧಗಳು ಮತ್ತು ಇವುಗಳ ಪ್ರಭಾವಗಳು ಜಾನಪದದ 'ಖನಿ' ಯನ್ನು ಹೀರಿಕೊಳ್ಳುತ್ತಿವೆ) ಗ್ರಂಥಸ್ಥ ಭಾಷೆಗೂ ಈ ಪರಿಸರದ ಆಡುಮಾತಿಗೂ ಇರುವ ಕೆಲವು ಪ್ರಮುಖ ವ್ಯತ್ಯಾಸಗಳನ್ನು ಕೆಳಕಂಡಂತೆ ಗುರುತಿಸಲಾಗಿದೆ.

(೧) 'ಏಕೆ' ಎಂಬ ಪ್ರಶ್ನಾರ್ಥಕ ಶಬ್ದದ ಆದಿ 'ಏ'-ಕಾರವು 'ಯಾ' ಕಾರವಾಗುತ್ತದೆ.

ಉದಾ : ಏಕೆ — ಯಾಕೆ

ಮೇಲೆ — ಮ್ಯಾಲೆ

(೨) 'ಏನು' ಎಂಬ ಪ್ರಶ್ನಾರ್ಥಕ ಸರ್ವನಾಮದಲ್ಲಿ ಸಾಮಾನ್ಯವಾಗಿ 'ಯಾ' ಕಾರವಿಲ್ಲ.

(೩) ಶಬ್ದಾದಿಯ 'ಒ' ಕಾರವು 'ವ' ಕಾರವಾಗುತ್ತದೆ.

ಉದಾ : ಒಲ್ಲೆ — ವಲ್ಲೆ

(೪) ಶಬ್ದಾದಿಯ 'ಓ' ಕಾರವು 'ವಾ' ಕಾರವಾಗುತ್ತದೆ.

ಉದಾ : ತೋಟ — ತ್ವಾಟ

(೫) ಮಹಾ ಪ್ರಾಣಾಕ್ಷರಗಳು ಅಲ್ಪ ಪ್ರಾಣಾಕ್ಷರಗಳಾಗುತ್ತವೆ :

ಉದಾ : ಖಂಡುಗ — ಕಂಡುಗ, ಕಂಡ್ಗ

ಕೆಲವು ಸಂದರ್ಭಗಳಲ್ಲಿ ಮಹಾಪ್ರಾಣಾಕ್ಷರಗಳು ಇದ್ದಂತೆಯೇ ಇರುತ್ತವೆ : ಇಂಥ, ಅಂಥ

(೬) 'ಮ' ಕಾರ 'ವ' ಕಾರವಾಗುತ್ತದೆ.

ಉದಾ : ಮೆಲ್ಲಗೆ — ವಲ್ಲಕೆ — ವಲ್ಕೆ

(೭) ಶ, ಷ—ಕಾರಗಳು 'ಸ'ಕಾರವಾಗುತ್ತವೆ :

ಉದಾ : ಶಂಖು — ಸಂಕು

ಸಂತೋಷ — ಸಂತೋಸ



ಶ, ಷ—ಗಳು ಅನಕ್ಷರಸ್ಥ ಗ್ರಾಮೀಣರ ಉಚ್ಚಾರಣೆಗೆ ಒಗ್ಗುವುದಿಲ್ಲವೆಂದು ಕಂಡುಕೊಂಡಿದ್ದ ಕೇಶಿರಾಜನು ಕನ್ನಡದ ಶುದ್ಧತೆಯಿಂದ ಈ ಅಕ್ಷರಗಳನ್ನು ಬಿಟ್ಟಿರಬಹುದೆಂಬ ಹೇಳಿಕೆ ವಿಚಾರಾರ್ಹವಾಗಿದೆ.

೬

ಗ್ರಾಮೀಣರ ಮಾತಿನಲ್ಲಿ ಕೆಲವು ವ್ಯಾಕರಣ ನಿಯಮಗಳು ವಿಶೇಷವಾದ ವ್ಯತ್ಯಾಸವನ್ನು ಪಡೆಯುತ್ತವೆ. ಅವುಗಳಲ್ಲಿ ಮೂರು ನಿಯಮಗಳನ್ನು ಪರಿಶೀಲಿಸುತ್ತೇವೆ.

(೧) ಕ್ರಿಯಾಪದ : ಉದಾ :–ಕುಳಿತುಕೊಂಡನು, ನಿಂತುಕೊಂಡನು—ಇವು ಈಗ ರೂಢಿಯಲ್ಲಿರುವ ಅಕ್ಷರಸ್ಥರು ಪ್ರಯೋಗಿಸುತ್ತಿರುವ ಭೂತಕಾಲದ ಕ್ರಿಯಾಪದಗಳು. ಇವು ಗಾದೆಯ ಕಥೆಗಳಲ್ಲಿ "ಕುಂತ್ಕಂದ" "ನಿಂತ್ಕಂದ"—ಎಂದಾಗುತ್ತವೆ. ಈ ಪ್ರಯೋಗಗಳಲ್ಲಿ ಭೂತಕಾಲದ ಪ್ರತ್ಯಯು "ದ" ಇದ್ದು, ಆಖ್ಯಾತ ಪ್ರತ್ಯಯವಾದ 'ಅನ್' (ಅನು) ಇಲ್ಲವಾಗಿದೆ. ವರ್ತಮಾನ ಕಾಲದ 'ಇದೆ' ಎನ್ನುವುದು 'ಐತೆ' ಎಂದಾಗುತ್ತದೆ.

(೨) ದ್ವಿತೀಯಾ ವಿಭಕ್ತಿ ಪ್ರಯೋಗ: 'ಅನ್ನು' ಅರ್ಥದ ಈ ಪ್ರತ್ಯಯ ಗಾದೆ ಕಥೆಗಳ ಮಾತಿನಲ್ಲಿ 'ಅನ್ನ' ಎಂದಾಗುತ್ತದೆ. ಉದಾ : ಅವನನ್ನ ಅಥವಾ ಅವನ್ನ. ಕೆಲವು ಕಡೆ ಪ್ರಕೃತಿಯೇ ದೀರ್ಘವಾಗಿ ದ್ವಿತೀಯ ವಿಭಕ್ತಿಯ ಅರ್ಥವನ್ನೇ ಕೊಡುತ್ತದೆ. ಉದಾ : ಕದಾ (ಕದವನ್ನು) ತಗಿ.

(೩) ಸಪ್ತಮಿ ವಿಭಕ್ತಿ : 'ಒಳಗೆ, ಅಲ್ಲಿ' ಎಂಬರ್ಥ ಕೊಡುವ ಈ ನಾಮ ವಿಭಕ್ತಿ ಪ್ರತ್ಯಯಗಳು ಗಾದೆಯ ಕಥೆಗಳಲ್ಲಿ 'ಆಗೆ' ಎಂಬ ರೂಪವನ್ನು ಪಡೆದುಕೊಳ್ಳುತ್ತದೆ.

ಉದಾ : ಊರು + ಆಗೆ — ಊರಾಗೆ ಅಥವಾ ಊರ್ನಾಗೆ

೭

## ಗಾದೆಯ ಕಥೆಗಳನ್ನು ಕುರಿತು

ಜಾನಪದ ಸಾಹಿತ್ಯದ ಪ್ರಕಾರಗಳಲ್ಲಿ ಗಾದೆಗಳದ್ದೇ ಒಂದು ವೈವಿಧ್ಯಮಯವಾದ ವೈಶಿಷ್ಟ್ಯ. ಅಂತೆಯೇ ಕಥೆಗಳನ್ನು ಗರ್ಭೀಕರಿಸಿಕೊಂಡಿರುವ ಗಾದೆಗಳು ಬೇಕಷ್ಟಿವೆ—ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಗಾದೆಗಳಿಂದಲೇ ಲಭ್ಯವಾಗುತ್ತವೆ.

ಆದರೆ ಈ ಕ್ಷೇತ್ರದಲ್ಲಿ ಆಗಿರುವ ಪ್ರಗತಿ ಅತ್ಯಲ್ಪವೇ ಎಂದು ಹೇಳಬೇಕಾಗುತ್ತದೆ. ಇದೊಂದು ಪ್ರತ್ಯೇಕ ಹಾಗೂ ಶ್ರೀಮಂತ ಪ್ರಕಾರವನ್ನಾಗಿ ಬೆಳೆಸಲು ಎಲ್ಲ ಜಿಲ್ಲೆಯ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾಹಿತ್ಯಾಸಕ್ತರು ಸಂಗ್ರಹಕಾರ್ಯವನ್ನು ಕೈಗೊಂಡರೆ ಲಭ್ಯವಾಗುವ ಕಥಾರಾಶಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಒಂದು ಬೃಹತ್ತಾದ "ಗಾದೆ ಕಥೆಗಳ ಕೋಶ"ವನ್ನೇ ಬೆಳಕಿಗೆತರಬಹುದು. ಈ ಕ್ಷೇತ್ರದಲ್ಲಿ ಎಲ್ಲಾ ಜಾನಪದ ಸಾಹಿತ್ಯಾಸಕ್ತರು ಪ್ರಯತ್ನಶೀಲರಾಗೋಣ–ಎಂಬುದೇ ನನ್ನ ಕಳಕಳಿ; ಆಶಯ.

ಕನ್ನಡ ವಿಭಾಗ, ಪ್ರೊ. ಬಿ. ಕೃಷ್ಣಪ್ಪ ರೆಡ್ಡಿ
ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

## ದಾಂಪತ್ಯ ಕಥೆಗಳು

# ಅದೇ ಉಂಡೇನು ಕದಾ ತೆಗಿ

ಸಿವಯ್ಯ ಸಿದ್ದಯ್ಯ ಅನ್ನೋ ಇಬ್ರು ಗೆಣೆಕಾರರಿದ್ರು. ಗಂಡ್ಬೇರುಂಡ ಇದ್ಹಂಗೆ ಅವ್ರ ಗೆಣ್ತಾನ. ಇಬ್ರದ್ದೂ ಒಂದೇ ಮನ್ಸು; ಒಂದೇ ಮಾತು. ಒಬ್ರಮಾತ್ನ ಒಬ್ರು ಎಂದೂ ತಗ್ದು ಹಾಕ್ತಿರ್ಲಿಲ್ಲ. ಮಲ್ಲೂರು ಅನ್ನೋ ಊರಾಗೆ ಇಬ್ರೂ ಮದ್ವಿ ಆಗಿದ್ರು.

ಒಂದಿನ. ರಾತ್ರಿ ಉಣ್ಣೋ ಹೊತ್ತು ಆಗಿತ್ತು. ಸಿವಯ್ಯ ಕೈ ಕಾಲು ತೊಳ್ಕಂದು ಇನ್ನೇನು ಉಣ್ಣಾಕೆ ಕುಂತ್ಕಳ್ಳೋನಿದ್ದ. ಅಸ್ರಾಗೇ ಸಿದ್ದಯ್ಯ ಬಂದವ್ನೇ "ಸಿವಣ್ಣಾ, ಇವತ್ತು ಎಸ್ಟೊತ್ತಾದ್ರೂ ಸೈ ಮಲ್ಲೂರ್ಗೆ ಹೋಗ್ಬೇಕೂಂತ ಮನ್ಸಾಗೈತ್ಕಣೊ. ಇಲ್ಲಿ ಉಣ್ಣೋದು ದಿನಾ ಇದ್ದೇ ಐತಲ್ಲ. ಅಲ್ಲೇ ಉಣ್ಣಾನಂತೆ, ಹೊಂಡುಗಡಾ" ಅಂತ ಅವಸ್ರ ಮಾಡಿ ಕರ್ದ. ಕರ್ದದ್ದೇ ತಡ, ಹೆಂಡ್ತೀನೇ ಕರ್ದಂಗಾಗಿ ಅಡ್ಕಿ ಕಡಿಯೊದ್ರೊಳಗೇ ಸಿವಯ್ಯ ನೀಟಾಗಿ ಬಟ್ಟೆ ಹಾಕ್ಕಂದು ಸಿದ್ದಾದ. ಅವ್ನ ಅವ್ವ "ಕತ್ಲೂಂದ್ರೆ ಕತ್ಲು ಕಣ್ರಪಾ, ಕೈಯ್ಯಾಗೆ ಲಾಟೇನ್ನಾದ್ರೂ ತಗಂದ್ಹೋಗ್ರಿ" ಅಂದ್ಲು. ಲಾಟೇನು ಹಿಡ್ಕಂದು ಹೆಂಡ್ತೀರ ಸಂಗ್ತೀನಾ ಮಾತಾಡ್ತಾ ನಗಾಡ್ತಾ ಮಲ್ಲೂರು ಮುಟ್ಟಿದ್ರು.

ಕೇರ್ಯಾಗೆ, ಮದ್ಲು ಸಿಗೋದೆ ಸಿವಣ್ಣನ ಹೆಂಡ್ತಿ ಮನೆ. ತನ್ನ ಹೆಂಡ್ತಿ ಮನ್ಗೆ ಕತ್ಲಾಗೇ ಸಲ್ಪ ದೂರ ಹೋಗೋದು ಇದ್ದದ್ರಿಂದ ಸಿವಯ್ಯ ಕೈಯ್ಯಾಗ್ನ ಲಾಟೇನ್ನ ಸಿದ್ದಯ್ಯ ಇಸ್ಕಂದ್ಹೋದ.

ಸಿವಯ್ಯ ಮಾವನ ಮನೆ ಅಂಗ್ಳಕ್ಕೆ ಬಂದಾಗ, ಹೆಂಡ್ತಿ ಪಾರವ್ವ ಎಲಡ್ಕಿ ಮೋಜು ಮಾಡ್ಕಂದು, ಮುಂದ್ಲ್ಮನಿ ಮುದ್ಕಿ ಜತೆ ಅದೂ್ನ ಇದೂ್ನ ಮಾತಾಡ್ತಿದ್ಲು.ಸಿವಯ್ನನ್ನ ನೋಡ್ದ ಮುದ್ಕಿ "ಅಗಾ, ನಿನ್ನ ಯಜಮಾನ್ರೇ ಬಂದ್ರಲ್ಲವ್ವಾ. ಬಾ ದ್ವರೆ, ಇವತ್ಯಾಕೆ ಈಟೊತ್ನಾಗೆ ? ನಿಮ್ಮತ್ತೆ ಮಾವ ನಮ್ಮ ಈರನ ಮದ್ವಿ ನಿಚ್ಚಯ್ಕೆಂತ ಜೆಂಡೆಕಟ್ಟೆಗೆ ಹೋದ್ರು. ನಿನ್ಹೆಣ್ತಿ ಜತೆ ಈ ರಾತ್ರಿ ಇರು ಅಂತ ಹೇಳಿದ್ರು, ಅದ್ಕೇ ಬಂದಿದ್ದೆ. ನಿನ್ಹೆಣ್ತಿ ಜತೆ ಈ ರಾತ್ರ್ಯಾಗೆ ಈ ಮುದಿಗೊಡ್ಡಿಂದೇನು ? ಹೇಳಿ ಕಳ್ಸಿದ್ಹಂಗೆ ನೀನೇ ಬಂದ್ಯಲಾ" ಅಂತ ಚ್ಯಾಸ್ಟಿಮಾಡಿ "ಹೋಗವ್ವಾ, ಹೊತ್ತಾಗ್ಯೆತೆ ಉಣ್ಣಾಕ್ನೀಡು ಯಜಮಾನ್ಗೆ" ಅಂತಂದ ಮುದ್ಕಿ ತನ್ನ ಮನಿಗೋದ್ಲು.

ಒಳಾಗೆ ಬರ್ತಾಲೇ ಸಿವಯ್ಯ "ಏನು ಅಡ್ಗಿ ಮಾಡಿದ್ದೀ ? ಊರಾಗೆ ಉಂಡೇ ಬಂದಿಲ್ಲ" ಅಂತ ಕೈ ಕಾಲು ಮಕ ತೊಳ್ಕಂದು ಬಂದು ಉಣ್ಣಾಕೆ ಕುಂತ್ಕಂದ. ಆಗ ಪಾರವ್ವ "ರೊಟ್ಟಿ ಅದಾವೆ, ಅನ್ನಾನೂ ಐತಿ. ಕುಂತ್ಕಳ್ರಿ" ಅಂದ್ಲು. "ಹೂಂ, ಉಂಡು ಉಳ್ದದ್ದು ಅಂದಂಗಾತು. ಇರ್ಲಿ ಬಿಡು, ಒಂದೆಲ್ಡು ತತ್ತಿ ದ್ವಾಸಿಸಾದ್ರೂ ಹೊಯ್ಕೊಡು ಮತೆ" ಅಂತ ಕೇಳ್ದ. ಅದ್ಕೆ ಪಾರವ್ವ "ದ್ವಾಸಿ ಹೊಯ್ಯಾಕೆ ತತ್ತಿಲ್ಲ. ಕೋಳಿ ಕಾವಿಗೆ ಕುಂತಾವೆ. ಇದ್ದ ತತ್ತೀನೆಲ್ಲಾ ಕಾವಿಗೆ ಇಟ್ಟದ್ದೀವಿ" ಅಂದ್ಲು. "ಯಾರ್ಮನಿಗಾದ್ರೂ ಹೋಗಿ ಎಲ್ಡು ಕಡ ಇಸ್ಕಂದ್ಬಾ" ಅಂದ. "ಇಸ್ಟೊತ್ನಾಗೆ ತತ್ತೀನ ಯಾರು ಕಡ ಕೊಡ್ತಾರೆ? ಇವತ್ತು ತಿನ್ದಿದ್ರೆ ಮುಗ್ಲು ಹರ್ಕಂದು ಬೀಳ್ತೈತಾ? ಒಂದು ಮಳಿಗೆ ಒಂದು ಕಂಬ್ಳಿ ಹರಿಯಲ್ಲ" ಅಂತ ನಗ್ತಾ ಅಂದ ಪಾರವ್ವ ಮಣೆಹಾಕಿ ಗಂಗಾಳ ತಂದಿಟ್ಲು.

ಸಿವಯ್ಗೆ ಹೆಂಡ್ತಿ ಮಾತು ಚೂಜ್ಯಾಗೆ ಚುಂಚಿದಂಗಾತು. ಹೆಂಡ್ತಿ ಆದೋಳು ಹಿಂಗೆ ಮಾತಾಡೋದಾ?–ಅಂತ ಸಿಟ್ಬಂತು. ಚಟಕ್ಕಂತ ಎದ್ದು, ಹೊರಗ್ಬಂದು, ಕಟ್ಟೆಮ್ಯಾಗೆ ಕುಂತ್ಕಂದು ಬೀಡಿ ಹಚ್ಕಂದ.

ಗಂಡ್ನ ಹಿಂದೇ ಬಂದ ಪಾರವ್ವ, ಪಕ್ದಾಗೇ ಕುತ್ಕಂದು ವಲ್ಕೆ "ನಾನೇನು ಅನ್ನಬಾರ್ದು ಅಂದೆ? ಹಿಂಗೆ ಸಿಟ್ಮಾಡಾಕೇ ಬಂದ್ರ್ಯಾ? ಹೂಂ ಬರ್ರಿ, ಬರೆ ಹೊಟ್ಯಾಗೆ ಮಕ್ಕಬಾರ್ದಂತೆ" ಅಂತ ಜುಲ್ಮಿ ಮಾಡಿದ್ಲು. ಸಿವಯ್ಯ ಮೈಟ್ಮಾಡ್ಲಿಲ್ಲ.ಸೇದೋ ಬೀಡಿನ ನೆಲಕ್ತಿಕ್ಕಿ 'ಪಟ್‌ಪಟ್' ಅಂತ ತುವಾಲ್ನ ಕೊಡ್ವಿ, ಅದ್ನ ಕಟ್ಟೆಮ್ಯಾಗೆ ಹಾಸ್ಕಂದು, ಬಲಗೈಮ್ಯಾಗೆ ತಲೆ ಇಟ್ಕಂದು ಮಗ್ಲಾದ.

"ನಂದೇನ್ತಪ್ಪಿಲ್ಲ" ಅಂತ ಮನಸ್ನಾಗೇ ಅಂದ್ಕಂದ ಪಾರವ್ವ ಉಣ್ಣಾಕೆ ಬಡ್ಸಿದ್ದ ಗಂಗಾಳಾನ ಒಂದ್ಕಡೆ ತಗ್ದಿಟ್ಟು, ಹಾಸ್ಗಿ ಕೊಡ್ವಿ ಹಾಸಿದ್ಲು. ಕದಾಹಾಕಿ, ಅಗ್ಲಿ ಹಾಕ್ಕಂದು ಅಕಿನೂ ಮಗ್ಲಾದ್ಲು.

ಹೆಂಡ್ತಿ ಕದಾ ಹಾಕ್ಕಂದದ್ದು ಸಿವಯ್ಗೆ ಚ್ಯಾಟ್ಯಾಗೆ ಹೊಡ್ದಂಗಾತು. "ಅಣ್ಣಿಲ್ಲ



ತಮ್ಮಿಲ್ಲ. ಒಬ್ಳೇ ಮಗ್ಳು ಅಂತ ಇಕಿ ಸೊಕ್ಕಿ ಬೆಳೆದ್ವಾಳೆ. ಇವ್ಳ ಅಪ್ಪನ ಆಸ್ತಿಗೆ ಯಾವನು ಬಾಯ್ತೆರ್ಕಂಡಿದ್ದಾನೆ? ಇವ್ಳ ಸೊಕ್ಕ್ನ ಇಳಿಸ್ದಿದ್ರೆ ನನ್ಹೆಸ್ರು ಸಿವಯ್ನೇ ಅಲ್ಲ" ಅಂತ ಹಲ್ಹಲ್ಲು ಮಸಿಯಾಕ್ಹತ್ತಿದ. ಸಿದ್ದಯ್ನ ಮಾವನ ಮನೆಗಾದ್ರೂ ಹೋಗಾನಾಂತ ಮನಸ್ಸಾತು. "ಇಸ್ಟೊತ್ನಾಗೆ, ಹೆಂಡ್ತಿ ಮನೆ ಬಿಟ್ಟು ಅಲ್ಲಿಗೆ ಹೋದದ್ದು ಯಾರಿಗಾದ್ರೂ ಗೊತ್ತಾಗ್ಬಟ್ರೆ ? ಕಡ್ಡೀನ ಗುಡ್ಡ ಮಾಡ್ದಂಗೆ ಯಂತಂತಾ ಸುದ್ದಿ ಹಬ್ಬಾಕಿಲ್ಲ" ಅಂತ ಯೋಚ್ಣೆ ಮಾಡಿ ಸುಮ್ನಾದ. ನೊರ್ಜನ ಕಡ್ತಕೆ, ಮಕ ಮೈನ ಪರಪರಾಂತ ಕೆರ್ಕಳ್ಳಾಕೆ ಹತ್ತಿದ. ಹಸ್ದ ಹೊಟ್ಟೆ ಬ್ಯಾರೆ ತಾಳ ಹಾಕಾಕ್ಹತ್ತು.

ಹೇಳಪಾ, ಪಾರವ್ವಗೂ ನಿದ್ದೆ ಹೆಂಗೆ ಬಂದೀತು? ಅಕಿನೂ ಹಿಂಗೇ ಚಿಂತ್ಯಾಗೆ ಒದ್ದಾಡ್ತಿದ್ಲು. "ಒಳ್ಗಾದ್ರೂ ಬಂದು ಮಕ್ಕಳ್ಲಿ" ಅಂತ ಎದ್ದು, ಕದಾ ತಗ್ದು, ಗಂಡ್ನ ಕಾಲ್ಬದೀಗೇ ಕುಂತ್ಕಂದು "ಮಾರಾಯಾ ಉಂಡಾರ ಉಣ್ರಿ, ಬಿಟ್ಟಾರ ಬಿಡ್ರಿ.ಒಳಗ್ಬಂದು ಮಕ್ಕಳ್ರಿ" ಅಂತ ವಲ್ಕೆ ಕರೆದ್ಲು "ಹೂಂ ಹೆಣ್ಹೆಂಗ್ಸು ಸೋಲ್ದೆ ಇರ್ತದಾ" ಅಂತಂದ್ಕಂದ ಸಿವಯ್ಯ ಇನ್ನೂ ಬಿಗಿಯಾಗಿ "ನನ್ಗೆ ಎಲ್ಲಾದ್ರೂ ನಿದ್ದೆ ಬರ್ತೈತಿ. ಸುಮ್ನೆ ಒಳಗ್ಹೋಗಿ ಬೆಚ್ಗೆ ಮಕ್ಕಾ" ಅಂತ ಮಗ್ಲು ತಿರುಗಿಸ್ದ. ಪಾರವ್ವ ಮದ್ಲಿನಂತೆ ಸುಮ್ನೇ ಹೋಗ್ಲಿಲ್ಲ. ಗಂಡ್ನ ಕಾಲ ಮ್ಯಾಲೆ ಕೈಇಟ್ಟು "ಈ ಕೇರ್ಯಾಗೆ ಹಾಡಾಹಗ್ಲೇ ಹಾವು ಅಡ್ತಾಡ್ತಾವೆ. ಕಳ್ದ ಬುದ್ವಾರ ಜೈಗ್ನಾಗೆ ಒಂದು ನಾಗ್ರಾವು ಬಂದ್ಬಿಡ್ತು. ಹುಡುಗ್ರು ಸೇರ್ಕಂದು ಹೊಡ್ದಾಕಿದ್ರು. ಅದ್ನ ನೆನಸ್ಕಂಡ್ರೆ..........." ಅಂತ ಮುಂದೆ ಹೇಳ್ತಿದ್ದ ಹೆಂಡ್ತಿ ಕೈಯ್ನ ತಳ್ಳಾಕ್ದ ಸಿವಯ್ಯ. ಗಪ್‌ಚುಪ್ಪಾದ ಪಾರವ್ವಗೂ ಒಳೊಳ್ಗೇ ಸಿಟ್ಟೇರ್ತು. ಎದ್ದೋಳೆ, ಕದಾ ಹಾಕ್ಕಂದು ಅಗ್ಣಿ ಜಡ್ಕಂದು ಮಕ್ಕಂದ್ಲು.

ಹೆಂಡ್ತಿ ಮತ್ತೆ ಕದಾ ಹಾಕ್ಕಂದದ್ದು ಸಿವಯ್ಗೆ ಗುದ್ದಿದಂಗಾತು ಅಸ್ಟ್ರಾಗೇ, ಕರಿ ಹಂಚಿನ ಸಂದ್ಯಾಗೆ "ಕಿಚಿಕಿಚೀಕಿಚೀ" ಅಂತ ಇಲಿ ಓಟಕಿತ್ತು। "ಇಲಿ ಅಂದ್ರೆ ಹಾವ್ಗೆ ಪ್ರಾಣಂತೆ. ಹಾವೆ ಅಟ್ಟಿಸ್ಕಂದು ಬಂದಿರ್ಬೋದು! ಹಾವೂಂದ್ರೆ ಹರನೂ ನಡುಗಿದ್ನಂತೆ! ಅಯ್ಯೋಯ್ಯೋ...........ಎಂತಾ ಕೆಲ್ಸ ಮಾಡ್ಕಂದ್ಬಿಟ್ಟೆ" ಅಂತ ಸಿವಯ್ಯ ಜಲ್ಜಲ ಬೆವ್ತ. ಅದೇ ಹೊತ್ಗೆ, ಹಂಚ್ನಾಗೆ ಸಿಕ್ಕಂದಿದ್ದ ಒಂದು ಹಳೇ ಹಗ್ದ ತುಂಡು ಅವ್ನ ಮ್ಯಾಲೇ ಬಿತ್ತು. "ಅಯ್ಯಪ್ಪೋ" ಅಂತ ಬೆದ್ರಿ, ಕಟ್ಟೆ ಮ್ಯಾಗ್ನಿಂದ ಜಿಗ್ದು, ಬಾಗ್ಲ ಹತ್ರ ಬಂದು" ಏ, ಪಾರೋತಿ, ಪಾರೋತಿ, ಗಡಾ ಕದಾ ತಗಿಯೇ........ಇನ್ ಉಣ್ಣಾಕೆ ಹಿಂಗೆ ಸಿಟ್ಮಾಡ್ಕಳ್ಳಲ್ಲ. ನೀನ್ನೀಡಿದ್ನೇ ಉಣ್ತೇನಿ ಕಣೇ. ಮದ್ಲು ಕದಾ ತಗಿಯೇ ಕದಾ.." ಅಂತ ಕದಾ ತಟ್ತಾ ಗೋಗರ್ದ. ಸಟ್ನೆ ಎಂದ್ಬಂದ ಪಾರವ್ವ ಕದಾ ತಗ್ದು ಗಂಡನ್ನ ಒಳಾಗೆ ಕರ್ಕಂದ್ಲು. ಮಣೆ ಹಾಕಿದ್ಲು. ಬಡ್ಸಿದ್ದು ಗಂಗಾಳ್ದಾಗೇ ಇತ್ತಲ್ಲ, ಅದ್ನ ಗಂಡ್ನ ಮುಂದಿಟ್ಲು. ದೆವ್ವ ತಿಂದ್ಹಂಗೆ ಗಬಗಬಾಂತ ಉಂಡು ಮುಗ್ಸಿದ ಸಿವಯ್ಯ. ಗಂಡ ಹೆಂಡ್ತಿ ಎಲ್ಲಾ ಮರ್ತು, ಆ ರಾತ್ರೀನ್ನೂ ಉಂಡ್ರು !

## ವಲ್ಲೊಲ್ಲೆ ಅಂದೋನು ಒಳ್ಕಲ್ಲು ನೆಕ್ದ

ಚೀಲೂರು, ಸೂಗೂರು, ಹತ್ತೂರು ಅಂದ್ಹಂಗೆ ಬೇಗೂರು ಅನ್ನೋ ಒಂದೂರು. ಅಲ್ಲಿ ದಾನೇಗೌಡ್ರು ಅನ್ನೋರು ಬಾಳ ದೊಡ್ಕುಳ. ಲಕ್ಷ್ಮಿ ಕಾಲ್ಮುರಿಕಂದು ಬಿದ್ಹಂಗೆ ಸಾವ್ಕಾರ್ಕಿ. ಅವರ ಮಗ ಬಸಣ್ಣಿ. ಮೀಸೆ ಮೂಡಿ, ಹರೇವು ಬಡ್ಕಂದು ಬಂದ್ಹಂಗೆ ಮದ್ವಿಗೆ ಬಂದ ವಯಸ್ನೋನು. ಒಳ್ಳೆ ಜಟ್ಟಿ ಇದ್ಹಂಗೆ ಇದ್ದ. ಅವ್ನಿಗೆ ಹೆಣ್ಣು ಕೊಡಾಕೆ ಹೆಣ್ಣೆತ್ತೋರು ಒಂಟ್ಗಾಲಿನವ್ಯಾಲೆ ತಪಸ್ಮಾಡ್ಹಂಗೆ ಕಾಯ್ತಿದ್ರು. ಬಸಣ್ಣಿ ಯಾರ್ನೂ ಮನಸ್ಮಾಡಿರ್ಲಿಲ್ಲ.

ಬೇಗೂರ್ಗೆ ಮೂರ್ನಾಕು ಮೈಲಿ ದೂರ್ದಾಗೆ ಇರೋದೆ ಚನ್ನಳ್ಳಿ. ಅಲ್ಲಿ ರಂಗೇಗೌಡ ಅನ್ನೋ ಸಣ್ಣ ರೈತಿದ್ದ. ಎಣ್ಣೆ ಬತ್ತಿಗೆ ನ್ಯಾರ ಅಂತಾರಲ್ಲ ಹಂಗೆ, ಹೊಟ್ಟೆ ಬಟ್ಟೆ ಹರ್ಕತ್ತಿಲ್ದೆ ಮರ್ವ್ಯಾದಿಗೆ ಅಂಜ್ಕಂಡಿದ್ದೋನು. ಅವ್ನಿಗೆ ಒಬ್ಳೇ ಒಬ್ಳು ಮಗ್ಳು ಹೆಸ್ರು ಚನ್ನವ್ವ ಅಂತ ಇಟ್ಕ. ಅಕಿ ಗಿಣಿ ಕಚ್ಕಂದು ಹೋಗ್ಹಂಗಿದ್ಲು. ಬಾಳ ಚೆಲ್ವಿ. ಅಸ್ಟೇ ಗುಣ್ವಂತಿ. ಚ್ಕಕ್ಕ ಚಿನ್ನ ಇದ್ಹಂಗೆ ಆಗ್ದೋರೂ ಹಾಡಿ ಹರಸ್ತಿದ್ರು.

'ಹಣೆಯಾಗ ಬರ್ದದ್ದು' ಅಂತೆ ಇದ್ಕೇ ಅಂತಾರ್ನೋಡು. ದಾನೇಗೌಡ್ರು ಎಲ್ಲಿ? ರಂಗೇಗೌಡ ಎಲ್ಲಿ? ಬಾಸಿಂಗ್ಬಲ ಕೂಡ್ಬಂದು, ಚನ್ನವ್ವ ಬಸಣ್ಣಿಯ ಹೆಂಡ್ತಿ ಆದ್ಲು.

ಒಂದಿನ ರಾತ್ರಿ ಬಸಣ್ಣಿ ದಿನ್ತಪ್ಪಿ ಮಾವ್ನ ಮನೆಗೆ ಬಂದ. ಚನ್ನವ್ಗೆ ಅದೇನು ಅಯ್ಸಿರಿ ಅಂತ? ಯೆಳ್ಳುಂಡೆ ಮಾಡಾಕೆ ಮದ್ಲೇ ಅಣಿ ಮಾಡ್ಕಂದಿದ್ಲು. ಹುರ್ದ ಆ ಯೆಳ್ಳಿಗೇ ಬೆಲ್ಲ ಹಾಕಿ, ಒಳ್ಕಲ್ಲಿಗೆ ತುಪ್ಪ ಸವ್ರಿ ಗಮಗಮಾ ಅನ್ಹಂಗೆ ಚಿಗ್ಣಿ ಮಾಡಿದ್ಲು. ಮದ್ಲೇ ಹೇಳ್ತಾರಲ್ಲ–ಬಡವ್ರಮನೆ ಊಟ ಚೆಂದಾಂತ.

ಚನ್ನವ್ವ ರಾಟ್ವಳ್ಳಿಯಂಗೆ ಎಲ್ಲಾ ಅಡ್ಗಿ ಕೆಲ್ಸ ಮಾಡಿ, ಹಪ್ಳ ಸುಟ್ಟು, ಗಂಡ್ನ ಕೈಕಾಲ್ಗೆ ನೀರ್ಕೊಟ್ಟು ಉಣ್ಣಾಕೆ ಕರೆದ್ಲು. ಕುಂತ್ಕಳ್ಳಾಕೆ ಮಣೆ ಹಾಕಿ, ಗಂಗಾಳ ಇಟ್ಟು, ಯೆಳ್ಳು ಚಿಗ್ಣೀನ ನೀಡಿದ್ಲು. ಆ ಚಿಗ್ಣಿ ಬಣ್ಣ ನೋಡ್ದ ಬಸಣ್ಣಿ ವಾಕ್ರಿಕೆ ಬಂದ್ಹಂಗೆ "ವಲ್ಲೊಲ್ಲೆ, ತಗದ್ಬಿಡು ಇದ್ನಾ"ಅಂದ. ಚನ್ನವ್ವನ ಮನ್ಸು ಇಸ್ಟುಸಣ್ಗಾತು. "ಇದ್ನ ನನ್ನ ಹೆಂಡ್ತಿ ಮಾಡಿದ್ಲು ಅನ್ನಾಕಾದ್ರೂ ಸಲ್ಪ ಉಣ್ರಿ" ಅಂತ ಗಂಗಾಳ್ದಾಗಿಂದ ಅರ್ಧ ಚಿಗ್ಣಿ ತಗಂಡ್ಹೋದ್ಲು. ಬಸಣ್ಣಿ ಒಂದ್ಬೆಳ್ನಾಗೆ ಅದ್ನ ಒಂಚೂರು ತಗಂಡು ನಾಲ್ಗೆ ಮ್ಯಾಲಿಟ್ಕಂದ. ರುಚಿ ನೆತ್ತಿಗೆ ಹೊಡೀತು "ಅಲೆಲೆಲೆಲೇ ಕೈಯ್ಗೆ ಬಂದದ್ದು ಬಾಯ್ಗೆ ಬರ್ದಂಗಾತು. ಯಂತ ಕೆಟ್ಟ ಕೆಲ್ಸ ಮಾಡ್ಕಂದ್ಬಿಟ್ಟೆ! ದ್ವಡ್ಮನೆ ಗಂಡ್ಸಾಗಿ, ಮದ್ಲು ವಲ್ಲೊಲ್ಲೆ ಅಂದೋನು ಮತ್ತೆ ಕೇಳಿದ್ರೆ ಮರ್ವ್ಯಾದಿ ಬಂದೀತಾ?" ಅಂತ ಸುಮ್ನಾದ. ನೆಲ್ಲಕ್ಕಿ ಅನ್ನ ಉಂಡದ್ದು ಉಂಡ್ಹಂಗೆ ಆಗ್ಲಿಲ್ಲ.ಗಂಡ ಹೆಂಡ್ತಿ ಅಡ್ಗಿಕ್ವಾಣ್ಯಾಗೇ ಮಲಗಿದ್ರು.

ಊರು ಸದ್ದುಹೊಡ್ದು ಮಲ್ಗಿತ್ತು. ಬಸಣ್ಣಿಗೆ ಯೆಳ್ನ ಚಿಗ್ಣಿ ರುಚಿ ಕಾಡ್ತಿತ್ತು. ನಿದ್ದೀನೇ ಬರ್ಲಿಲ್ಲ. ಹಂಗೇ ವಲ್ಕೆ ಎದ್ದು ಕುಂತ್ಕಂದ.

ತುಸು ಹೊತ್ನಾಗೇ 'ಢಣಾರಂತ' ಹಿತ್ತಾಳಿ ಮುಚ್ಳ ಬಿದ್ದ ಸಬ್ದಾತು. ಚನ್ನವ್ಗೆ 'ಪಕ್ಕಂತ' ಎಚ್ರಾಗಿ ದೀಪ ಮುಡ್ಸಿದ್ಲು. ಒಳ್ಕಲ್ಲು ನೆಕ್ತಿದ್ದ ಬಸಣ್ಣಿ ಚಟಕ್ನೆ ಎದ್ದು "ನೀರು ನೀರು, ನೀರ್ಕೊಡೇ...." ಅಂದ. "ಅಯ್, ಇಲ್ಲೇ ತುಂಬ್ದ ಚೆಂಬಿತ್ತಲ್ಲ ! ಒಳ್ಕಲ್ಲತ್ರ ನೀರು ಹೆಂಗ್ಬರ್ತಾವೆ? ತಗಳ್ರಿ" ಅಂತ ಚೆಂಬ್ಕೊಟ್ಲು. ಗಟಗಟಾಂತ ನೀರ್ಕುಡ್ದ ಬಸಣ್ಣಿ "ಹೆಂಡ್ತಿಗೆಲ್ಲಾ ಗೊತ್ತಾಗ್ಬಿಡ್ತು" ಅಂತ ನಾಚ್ನೀರಾಗಿ, ಹಾಸ್ಗ್ಯೆಗೆಮುದಿರ್ಕಂದ. ಚನ್ನವ್ವ ದೀಪ ಆರ್ಸಿ ಮಗ್ಲಿಗೆ ಬಂದಾಗ ಅಕಿ ಕೈಯ್ನ ಹಿಡ್ಕಂದ ಬಸಣ್ಣಿ ಪಿಸ್ಗುಟ್ದ " ಏ, ಏ ಚನ್ನೀ, ದೇವ್ರ ಸತ್ಯವಾಗ್ಲೂ ಇದ್ನ ಯಾರ್ಗೂ ಹೇಳ್ಬ್ಯಾಡೆ" ಅಂತ ಸಣ್ಣ ಮಕ್ಳಂಗೆ ಗೋಗರ್ದು ಕೇಳ್ಕಂದ. ಅಕಿಗೂ ನಾಚ್ಕೆ ಆದ್ಹಂಗಾಗಿ ಒಳೊಳ್ಗೇ ನಗ್ತಾ 'ದೇವ್ರಾಣೆ ಐತಿ' ಅಂತ ಬಾಸೆಕೊಟ್ಲು.

ಗುಟ್ಟು ಗುಟ್ಟೂಂತ ಇಟ್ಕಂದದ್ದು ಬೆಟ್ಟದ್ಹಂಗೆ ಬೆಳೀತಂತ ಹಂಗೇ ಇದೂ ಯಾರ್‍ಯಾರ ಹೆಸರ್ನಾಗೋ ಒಂದ್ಕತೆಯಾಗ್ಯೆತಿ.

## ಹಳೆಗಂಡ್ನ ಪಾದ್ವೆಗತಿ

ಗಡಿಕಟ್ಟಿ ಅನ್ನೋ ಊರಾಗೆ ಚನ್ನ ಲಕ್ಕಿ ಅನ್ನೋ ಗಂಡ ಹೆಂಡ್ತಿ ಇದ್ರು. ಕೂಲಿ ನಾಲಿನೇ ಅವ್ರ ಅನ್ನ. ಕುಡಿಯೋದ್ನ ಒಂದ್ಬಿಟ್ರೆ, ಚನ್ನ, ಬಾಳ ಸಂಬೈತ. ಲಕ್ಕಿ ಅವ್ನ ಇರುದ್ದ! ಚೈನ್ಬಾಜಿ ಹೆಣ್ಣು. ಚನ್ಗೆ ಗತಿ ಇದ್ದಿಲ್ಲ, ಲಕ್ಕಿಗೆ ಮತಿ ಇದ್ದಿಲ್ಲ. ಇಂತೋರು ಅದ್ಹೆಂಗೋ ಗಂಡ ಹೆಂಡ್ತಿ ಅಂತ ಆದ್ರು.

ಮದ್ಮೆದ್ಲು ಆ ಗಂಡ ಹೆಂಡ್ತಿ ಬಲು ಚೆಂದಾಗೆ ಇದ್ರು. ಇಬ್ರೂ ಕಳೆ ಕೊಯ್ಲು ಅಂತ ಒಟ್ಟೊಟ್ಗೇ ಹೋಗ್ತಿದ್ರು; ಬರ್ತಿದ್ರು. ಬರ್ಬರ್ತಾ ಲಕ್ಕಿ ತನ್ನೂರು, ಚನ್ನನ್ನ ಬಿಟ್ಟು ಕೆಂಗಟ್ಟೆ ಅನ್ನೋ ಊರ್ಗೆ ಕಳೆ ಕೊಯ್ಲು ಅಂತ ಬ್ಯಾರೆ ಹೆಂಗಸ್ರಜತೆ ಹೋಗಿಬರ್ತಾ ಕತ್ತಿದ್ಲು.

ಕೆಂಗಟ್ಯಾಗೆ ಒಬ್ಬ ಉಂಡಾಡಿ ಇದ್ದ. ಅವ್ನ ಹೆಸ್ರು ಗಂಗಾಂತ. ಹಿಂದು ಮುಂದಿಲ್ಲ ಪರ್ದೇಸಿ. ಇದ್ರೆ ಈ ಊರು ಎದ್ರೆ ಮುಂದ್ಲೂರು ಅನ್ನೋ ಮನ್ಸಿಕರಾಯ. ಅವನ್ದೂ ಚನ್ನನ ಜ್ಯಾತೀನೆ. ಅವ್ನ ಜೀವ್ನಾನೂ ಕೂಲಿಮ್ಯಾಲೇ.

ಗಂಗ ಒಳ್ಳೆಚೆಲ್ವ. ಯಾವಾಗ್ಲೂ ಬಿಳೀಬಟ್ಟೆ ಹಾಕ್ಕಂದು, ಕರಾಪು ತಿದ್ಕಂದು, ಎಲಡ್ಕೆ ಹಾಕ್ಕಂದು 'ಬಿಳೀಬೀಡಿ' ಸೇಯ್ತಾ ಕೂಲಿ ಮಾಡ್ತಿದ್ದ. ಅವ್ನ ಮೋಜಿಗೆ ಲಕ್ಕಿ ಮಳ್ಳಾದ್ಲು. ಗಡಗಡಾ ಮನಿಗ್ಬಂದು ಅಡ್ಗಿ ಮಾಡೋದ್ನೇ ಮರತ್ಲು. ಗಂಗನ ಸಂಗ್ಡ ರಾಜಾರೋಸು ಮಾತಾಡಾಕೂ ಸುರುಮಾಡಿದ್ಲು. ಅವನ ಗುಂಗಿನಾಗೇ ಚನ್ನನ್ನ ಮರಿಯಾಕ್ಹತ್ತಿದ್ಲು.

ಗಂಗ ಲಕ್ಕೇರ ಸಂಗ್ತಿ, ಗಡಿಕಟ್ಟಿ ಅಲ್ದೆ ಕೆಂಗಟ್ಯಾಗೂ ಗುಸುಗುಸೂಂತ ಹುಟ್ಟಿ, ಹೊಗ್ಯಾಗಿ ಸುತ್ಕಳ್ತು. ಇದ್ನ ಕೇಳ್ದ ಚನ್ನ 'ನರನರಾಂತ ಹಲ್ಲುಕಡ್ದ, ಕೊತಕೊತ ಕುದ್ದ. ಏನ್ಮಾಡ್ತಿ, ಹೊಟ್ಯಾಗಳ ಸಿಟ್ಟು ರಟ್ಯಾಗಿರ್ಲಿಲ್ಲ ಅವನ್ಗೆ. ಹಿಂಗೇ ಒಂದಿನ ಲಕ್ಕಿ ಹೊತ್ಮಾಡ್ಕಂದು ಮಳ್ಳಿಯಂಗೆ ಮನೆಗ್ಬಂದಾಗ, ಚನ್ನನ ಸಿಟ್ಟೆ ಕಟ್ಟೊಡಿತು. "ಏ ಲಕ್ಕೀ ನಾನು ಕಟ್ದ ತಾಳಿ ನಿನ್ನ ಕೊಳ್ಳಾಗಿದ್ರೂ ಒಂದೆ ಇಲ್ದಿದ್ರೂ ಒಂದೇ. ನಿನ್ಗೆ ಯಾರ್ಬೇಕೋ ಅವನ್ನ ಕಟ್ಕಾ ಹೋಗೇ ಹಾದ್ರಗಿತ್ತಿ...." ಅಂತಂದು, ಹಿಂದೂ ಮುಂದೂ ನೋಡ್ದೆ, ತಾಳಿ ಕಿತ್ಕಂದು ಹೊರಗ್ದಬ್ಬಿಟ್ಟ. ಬಯ್ಸಿದ್ದೇ ಬಾಯಾಗ್ಬಿದ್ದಂಗಾತು ಲಕ್ಕಿಗೆ. ಸೀದಾ ಗಂಗನ ಹತ್ರ ಹೋಗಿ, ಇಲ್ಲದ್ದೂ ಸಲ್ಲದ್ದೂ ಹೇಳಿ ಅವ್ನಿಂದೆ ಸೀರೆ ಉಡಿಸ್ಕಂದು ಕರಿ ಮಣಿ ಕಟ್ಟಿಸ್ಕಂಬಿಟ್ಲು.

ಹೊಸದ್ರಲ್ಲಿ ನನ್ಗಂಡ ಕಸ್ಮರ್ಗಿ ತಗಂದ, ಬರ್ಬರ್ತಾ ಬರ್ಲು ಗಡ್ಯಾಗೆ ಬಾರ್ಸಾಕ್ಹತ್ತಿದ ಅಂತಾರಲ್ಲ ಹಂಗೆ, ಒಂದೆಲ್ಡು ತಿಂಗ್ಳಾಗೇ ಲಕ್ಕಿಯ ನೊಣಬುದ್ಧಿ ಗಂಗಗ್ಗೊತ್ತಾಗಿ ಹೊತ್ತು ಕಾಯ್ತಿದ್ದ. ಆದ್ಯಾರೊ ಗಂಡಸ್ರಹತ್ರ ಲಕ್ಕಿ ಲಕಲಕಾಂ ನಗ್ತಾ ಮಾತಾಡದ್ನ ಕಂಡ ಗಂಗ ಕೆಂಡಾಗಿ, ಆ ರಾತ್ರಿ ಲಕ್ಕಿ ಮನ್ಗೆ ಬಂದ್ಕೂಡ್ಲೇ "ಹೇ ಹಡ್ಬಿಲೌಡೀ....ಊರ್ಸೂಳೇ, ಅಂತ ಚೀರಿ ಮಕಕ್ಕೆ ಕ್ಯಾಕರ್ಸಿ ಉಗ್ದ. ಮಾತಿಗ್ಮಾತು ಬೆಳ್ದು ಗಂಗ ಹಾವ್ನ ಮ್ಯಾಲೆ ಮುಂಗ್ಸಿ ಬಿದ್ದಂಗೆ ಆಕಿ ಜಡೆ ಹಿಡ್ಕಂದು, ಮಕ ಮಾರಿ ನೋಡ್ದೆ "ಹ್ಷುಂಯ್ ಹ್ಷುಂಯ್" ಅಂತ ನಾಕಾರುಬಿಗ್ದ. ಅದು ಗಂಡ್ಸುಗ್ದಲ್ಲ, ಮಿಂಡ್ಸುಗ್ದು. ಹಲ್ಕಚ್ಕಂದ ಲಕ್ಕೀನೂ ಚಂಡಿ ಆದ್ಲು. ಚಟ್ಟಂತ ಕೊಳ್ಳಿಂದ ಕರಿಮಣಿ ಸರಾನ ಕಿತ್ತೆಸ್ದು ಮುಚ್ಯಂಜ್ಯಾಗೆ ಸೀದಾ ಗಡಿಕಟ್ಟಿ ದಾರಿ ಹಿಡಿದ್ಲು.

ಲಕ್ಕಿ ಗಡಿಕಟ್ಟಿ ಹೊಕ್ಕಾಗ ರಾತ್ರಿ ಉಣ್ಣೊಹೊತ್ತು. ಚನ್ನನ ಮನೆಗೆ ಬಂದ್ಲು. ಬಾಗ್ಲು ಹಾಕಿತ್ತು. ಲಕ್ಕಿ ಯಾವ ಬಾಯ್ನಾಗೆ ಚನ್ನನ ಕರೀಬೇಕು ? ಕದಕ್ಕೆ ಹಣೆ ಇಟ್ಟು "ದಡ್‌ದಡ್ಡಂತ" ಬಡಿಯಾಕ್ಹತ್ತಿದ್ಲು. ಅಡ್ಗಿ ಮನೆಯಾಗ್ನಿಂದ ಸರ್ರಂತ ಬಂದ ಚನ್ನ ಅಗ್ಣಿ ತಗ್ದ. ನೋಡ್ತಾನೆ—ಲಕ್ಕೀನೆ! ಬಿಕ್ಸೆ ಬೇಡೋಳಂಗೆ, ಮೂಗು ಕಣ್ಣು ಒರಸ್ಕಳ್ತಾ, ಮುಸುಮುಸು ಅಳ್ತಾ ಎದ್ರು ನಿಂತವ್ಳೆ. ಚನ್ನನೂ ಆಕೀನ ಬೆರ್ಗಾಗಿ ನೋಡಾಕ್ಹತ್ತಿದ. ಆಗ, ಲಕ್ಕಿ ಜೋಲಿ ತಪ್ಪಿ ಬಿದ್ದೋಳಂಗೆ ಬಿದ್ದು ಚನ್ನನ ಕಾಲ್ನ ಹಿಡ್ಕಂದ್ಲು. ಬಿಕ್ಬಿಕ್ಕಿ ಅಳ್ತಾ ಎಲ್ಲಾ ಹೇಳಿದ್ಲು. ಚನ್ನನ ಕಳ್ಳು ಚುರುಕ್ ಅಂತು. ಅವ್ಳ ಕೈ ಹಿಡ್ದೆತ್ತಿ ಒಳಾಕೆ ಕರ್ಕಂಡೋದ. ಲಕ್ಕಿ ತಲಿಮ್ಯಾಲೆ ನೀರು ಸಿವ್ಸಿ, ಆಕಿ ಕೊಳ್ಳಿಂದ ಕಿತ್ತೆಸ್ದು ಹೋಗಿದ್ದಲ್ಲ ಆ ತಾಳೀನ ದೇವರ ಗೂಡ್ನಾಗೆ ಇಟ್ಟಿದ್ದ ಚನ್ನ. ಅದ್ನ ತಗಂದು ದೇವ್ರಿಗೆ ಕೈಮುಗ್ದು ಮತ್ತೆ ಲಕ್ಕಿ ಕೊಳ್ಗೆಕಟ್ದ !

# ತಂತ್ರ, ಕುತಂತ್ರ ಕಥೆಗಳು

## ಆಸೆ ಬುರ್ಕಿ ಸೊಸೇರ್ಗೆ ಹಂಚ್ಕ ಬುರ್ಕಿನೇ ಸೋಬ್ತಿ

ಒಂದೂರ್ನಾಗೆ ಗಂಡ್ಸತ್ತ ಒಬ್ಬ ಮುದಿಕ್ಕಿ ಇದ್ಲು ಅಕಿಗೆ ಇಬ್ರು ಮಕ್ಳು. ಇಬ್ರೂ ಗಂಡ್ಮಕ್ಳೇ. ಒಬ್ನಿಗೆ ಒಂದ್ಕಣ್ಣು ಒರ್ಚು. ಇನ್ನೊಬ್ನಿಗೆ ಒಂದ್ಕಾಲು 'ಅದುವು'. ಇವ್ರು ಹಿಂಗಿದ್ರೂ ಇವ್ರಪ್ಪ ಮಾಡಿಟ್ಟಿದ್ದ ಆಸ್ತಿ ನೋಡ್ಕಂಡು ಹೆಣ್ಕೊಡೋರು ನಾ ಮುಂದು ತಾ ಮುಂದು ಅಂತ ಬಂದು ದುಂಬಾಲು ಬಿದ್ರು. 'ದೇವ್ರು', ದೋಸಿಗರ್ನ ಕೇಳ್ಸಿದ ಮುದ್ಕಿ ಮಕ್ಳ ಮದ್ವೇನ ಮಾಡಿ ಮುಗ್ಸಿದ್ಲು. ನಕ್ಷತ್ರದಂತೆ ಹುಡ್ಗೀರು ಸೊಸ್ಯೇರಾಗಿ, ಮುಳಿ ಬಡಿಸ್ಕಂಡು ಮನೆದುಂಬಿದ್ರು.

ಮನೆಯ್ಯಜ್ಮಾನ್ಕೀನ ಹಿರೀ ಸೊಸೇನ್ಗೇ ನಡ್ಸಾಕ್ಹತ್ತಿದ್ಲು. ಕಿರಿ ಸೊಸ್ಗೆ ಒಳೊಳ್ಗೇ ಮುಚ್ರ ಬೆಳಿಯಾಕ್ಹತ್ತು. ಗಂಡ್ನ ಹತ್ರ "ವಾರ್ಗಿತ್ತಿ ಹಂಗೆ ಹಿಂಗೆ, ತನ್ದೇ ಆಗ್ಬೇಕು. ನಾನ್ಹೇಳ್ದ ಒಂದ್ಮಾತ್ನೂ ಕೇಳ್ಳಂಗಿಲ್ಲ. ನಾನೂ ಈ ಮನ್ಗೆ 'ಮುಳಿ ಬಡಿಸ್ಕಂಡು' ಬಂದಿಲ್ವಾ?" ಅಂತ ಸೆರಗ್ನಾಗೆ ಕಣ್ಣೊರಸ್ಕಂತಾ ಕೇಳಿದ್ಲು. "ಅಣ್ಣಾಂದ್ರೆ ಅಪ್ಪನ ಸಮ" ಅಂತ ತಿಳ್ಕಂದಿದ್ದ ಗಂಡ "ಸುಮ್ನಿರಾಕೆ ನೀನೇನು ತಗಂತೀ? ನಿನ್ಗೂ ಬೀಗ್ದ ಕೈ ಕಟ್ಕಳ್ಳೋಕಾಲ ಬರ್ದೆ ಇರ್ತದಾ?" ಅಂತ್ಹೇಳಿ ಸುಮ್ಕಿರ್ಸಿದ್ದ. ಗಂಡ ಹಿಂಗೆ ಆಸೆ ಮಾತೇಳಿದ್ರೂ ಆ ವಾರ್ಗಿತ್ತೀರ ನಡ್ವೆ ಮುಚ್ರದ ಹುತ್ತ ಬೆಳ್ಕಂದ್ಬಿಟ್ತು.

ಸೊಸೇರು ತಮ್ಮ ತಮ್ಮ ಜಿಧ್ನಾಗೆ ಅತ್ತೇನೇ ಮರ್ತುಬಿಟ್ರು. "ನೀನೇನ್ಸತ್ತಿದ್ದೀಯಾ ? ಬದ್ಕಿದ್ದೀಯಾ ? ಅಂತ ಕೇಳೋರೆ ದಿಕ್ಕಿಲ್ಲಿಲ್ಲ. ಹೊಲ ತ್ವಾಟಾಂತ ಮನೆ

ಬಿಟ್ಟು ಹೊಂಟ್ಹೋಗ್ತಿದ್ದ ಮಕ್ಳು ಬರ್ತಿದ್ದು ರಾತ್ರೀಕೇ. ಹೆಂಡ್ರು, ಅವ್ನನ್ನ ಚೆನ್ನಾಗಿ ಆಸ್ಪಾನ ಮಾಡ್ತಾರೆ ಅಂತ ತಿಳ್ಕಂದಿದ್ದ ಅವ್ರು ಏನ್ನೂ ಕೇಳ್ತಿರ್ಲಿಲ್ಲ. ಸೊಸೇರು ಹಿಂಗೇಂತ ಮಕ್ಳಿಗೆ ಹೇಳಿದ್ರೆ "ಎಲ್ಲಿ ಅಗರ್ಣ ಆದಾತೋ" ಅಂತ ತಿಳ್ಕಂದ ಮುದ್ಕಿ ತುಟಿ ಎಲ್ಡು ಮಾಡಿರ್ಲಿಲ್ಲ. ಹಿಂಗಾಗಿ, ಮುದ್ಕಿ ಪಾಡು ದಿಕ್ಕಿಲ್ದಂಗಾತು.

ಇದ್ರಿಂದ ಮುದ್ಕಿಗೆ "ಇನ್ನಿರ್ಾಬರ್ದಪ್ಪಾ" ಅನ್ನಿ "ದೇವ್ರೇ ಗಡಾ ಕಣ್ಮುಚ್ಚಿಸಿ ಕರ್ಕಂದು ಬಿಡಪ್ಪಾ" ಅಂತ ನಳ್ತಿತ್ತು. ದುಡ್ಕಂದದ್ದನ್ನ ಉಣ್ತಿಯೊ? ಪಡ್ಕಂದು ಬಂದದ್ನ ಉಣ್ತಿಯೊ ? ಹಣೆಯಾಗೆ ಏನ್ನರ್ದೈತೊ ಅದ್ನ ಅನ್ಬೋಗಿಸ್ಬೇಕಲ್ಲ ?

ಒಂದ್ರಾತ್ರಿ ಸರ್ಪತ್ನಾಗ ಮುದ್ಕಿ 'ಜಣ್ ಟಣ್ ಟೊಕ್' ಅಂತ ಒಂದೇ ಸಮ ರೊಕ್ಕ ಎಣಿಸ್ದಂಗಾತು. ಇದು ಕಿರಿ ಸೊಸೆ ಕಿವಿಗೆ ಕೇಳಿಸ್ತು ಬೆಳಿಗ್ಗೆ ಎದ್ದು ಕೂಡ್ಲೇ ಕಸ ಹೊಡಿಯಾಕ್ಹೋದ ಆಕಿಗೆ ಒಂದು ಬೆಳ್ಳಿ ರೂಪಾಯಿ ಸಿಗ್ತು ! ಅನ್ನ ಅತ್ತೆ ಹತ್ರ ತಗಂಡ್ಹೋಗಿ "ಇದು ನೀನ್ಮಕ್ಕಂದ ಕ್ವಾಣ್ಯಾಗೆ ಸಿಗ್ತು ಅತ್ತೆ. ನಿಂದಾದ್ರೆ ತಗಾ ಇದ್ನಾ" ಅಂತ ಕೊಡಾಕ್ಹೋದ್ಲು. ಆಗ ಕೈಸೊನ್ನೆಮಾಡಿ ಸೊಸೇನ್ನ ಪಕ್ಕಾಗೇ ಕುಂದ್ರಿಸ್ಕಂದ ಅತ್ತೆ, ಆಕಿ ತಲೆಮ್ಯಾಲೆ ಕೈ ಹಾಕಿ ಸವರ್ತಾ "ನೀನೇ ಇಟ್ಕಳ್ಳವ್ವಾ....ನನ್ಗೇನು ಕಾಡು ಸನೇವು ಊರ್ಹೋರ ಆಗೈತಿ. ನನ್ನ ಸಂದಕ್ಾಗೆ ಇನ್ನೂ ನೂರು ಬೆಳ್ಳಿ ರುಪಾಯಿ ಅದಾವೆ. ನನಿಗ್ಗೊತ್ತಿಲ್ಲಾ ಯಾರನ್ನ ನ್ಯೆನಾಗಿ ನೋಡ್ಕಳ್ಳಾದು ಅಂತ. ಕಿರಿ ಮಗ ಕಟ್ಟಾಣಿ ಅಲ್ಲಾ? ಅನ್ನ ಹೆಂಡ್ತಿ ಆದೋಳು ಹಂಗೇ ! ಆ ರುಪಾಯಿಯೆಲ್ಲಾ ನಿನ್ಗೇ" ಅಂತ ಉಬ್ಬಿ ಕಳ್ಸಿದ್ಲು.

ಅವತ್ನಿಂದ ಕಿರಿಸೊಸೆ ಅತ್ತೆನ್ಮ್ಯಾಲೆ ಹಳ್ಳಾಗಿ ಹರಿಯಾಕ್ಹತ್ತು. ಈ ಸುಳ್ವು ಅದ್ಹೆಂಗೋ ಹಿರಿ ಸೊಸ್ಗು ಗೊತಾಗ್ಬಿಡ್ತು. ಅಕಿನೂ ಇನ್ನೂ ಜೋರಾಗಿ ಆಸ್ನಾನ ಮಾಡಾಕ್ಹತ್ತಿದ್ಲು. ಹಿಂಗೆ, ಕದ್ದು ಮುಚ್ಚಿ ಮಾಡ್ತಿದ್ದ ಆಸ್ಪಾನ ಯಾವ್ಮಟ್ಟಕ್ಹೋತು ಅಂದ್ರೆ–ಆ ಮುದ್ಕಿ ಬಚ್ಚುಬಾಯ್ಗೆ ಏನೇನು ಹಿತಾನೋ ಅನ್ನೆಲ್ಲಾ ತುಂಬಾಕ್ಹತ್ತಿದ್ರು. ಒಂದೆಲ್ಡು ತಿಂಗ್ಳಾಗೆ ಮೈಕೈ ಸುಕ್ಕು ಮಾಯ್ವಾಗಿ ತುಂಬಿ ತುಳ್ಕಂಗೆ ತುಂಬ್ಕಂತು. ಅದೇನಾತೋ ಏನೋ, ಒಂದ್ರಾತ್ರಿ ಹಾಸ್ಗಿಮ್ಯಾಲೇ ದೇವ್ರಪಾದ ಸೇರ್ಬಿಡ್ತು ಮುದ್ಕಿ!

ಅಕ್ಕಪಕ್ದೋರ್ನೆಲ್ಲಾ ಸೇರ್ಸಿದ ಮಕ್ಳು, ಅವ್ವ ಹೆಣಾ ಸುಡಾಕೆ ಹೊತ್ಕಂಡ್ಹೋದ್ರು. ಇತ್ಲಾಗೆ, ಮನೆಯಾಗಿದ್ದ ಸೊಸೇರ್ಗೆ ಜಟಾಪಿಟಿ ಹಿಂಗೆ ಹತ್ಕಂತು–"ಸಂದಕ್ಾಗಿನ ರುಪಾಯೆಲ್ಲಾ ನನ್ಗೇ ಸೇರ್ಬೇಕು. ಅತ್ತೆ ಸಾಕಾಕೆ ಅಂಗ್ಡ್ಯಾಗೆ ಮಾಡ್ದ ಸಾಲಾನ ತೀರಿಸ್ಬೇಕು" ಅಂತ ಕಿರೇ ಸೊಸೆ ಅಂದ್ರೆ "ಹಿರೇಳಾದ ನನ್ಗೇ ಸೇರ್ಬೇಕು. ನಾನು ಅಂಗ್ಡ್ಯಾಗೆ ಸಾಲ ಮಾಡಿ ಅತ್ತೇನ ಸಾಕಿದೇನಿ" ಅಂತ ಹಿರೇ ಸೊಸೆ. ಕಡೆಗೆ ಇಬ್ರೂ ಸರ್ಪಾಲು ತಗಳಾನಾಂತ ಒಪ್ಕಂದು ಸಂದ್ಕ ತಕ್ಕಂದ್ರು ಬೀಗ್ದ ಕೈಯೇ ಇಲ್ಲ ! ಬೀಗ ಮುರುದ್ರು. ನೋಡ್ತಾರೆ–ಸಂದ್ಕದ ತುಂಬೆಲ್ಲಾ ಹಂಚ್ನ ಬುರ್ಕಿನೋ ಹಂಚ್ನ ಬುರ್ಕಿ !



## ಉಂಡೂ ಹೋದ ಕೊಂಡೂ ಹೋದ

ಕೆಂಚಿಕೊಪ್ಪ ಹೊಸ್ಗಪ್ಪ ಅಂದ್ಹಂಗೆ ಬಾಗಿನಕೊಪ್ಪ ಅನ್ನೋ ಒಂದೂರು. ಆ ಊರ್ನಾಗೆ ಒಬ್ಬ ಗೌಡ್ರು. ಗೌಡ್ರೂಂದ್ರೆ ಸುತ್ತು ಮುತ್ಲ ಇಪ್ಪತ್ತ್ಹಳ್ಳಿಗೇ ದೊಡ್ಕಳ. ಚಪ್ಲಿ 'ಏದೆಬಾರಿಗೆ' ಮುತ್ತು ಬಿಗಿಸ್ಕಂದಿದ್ರೂ ಅಂದ್ರೆ ? ಅಂಥಾ ಸಾವ್ಕಾರು ! ತಮ್ಮ ಲೇವಾದೇವಿ ನೋಡ್ಕಳ್ಳಾಕೇ ಒಬ್ಬನ್ನ ಇಟ್ಕಂದಿದ್ರು. ಅವ್ರಿಗೆ ಒಬ್ಬ ಮಗ.

ಎಕ್ನಹಳ್ಳಿ, ಬೆನಕ್ನಳ್ಳಿ ಅಂದ್ಹಂಗೆ ಎತ್ತಿನಹಳ್ಳಿ ಅನ್ನೋ ಇನ್ನೊಂದೂರು. ಆ ಊರ್ನಾಗೂ ಒಬ್ಬಗೌಡ್ರು. ಅವ್ರೂ ದೊಡ್ಕಳಾನೇ. ತುಂಬಿದ್ಕೊಡ್ದಂತ ಮನಸ್ರು. ಅವ್ರಿಗಿದ್ದದ್ದು ಒಬ್ಳೇ ಒಬ್ಳು ಮಗ್ಳು.

ಒಂದಿನ ಬಾಗಿನಕೊಪ್ಪಿಂದ ಎತ್ತಿನಹಳ್ಳಿಗೌಡ್ರ ಮನೆ ಹುಡಿಕ್ಕಂದು ಒಬ್ನುಬಂದ. ಬಂದೋನು ನಡೋ ವಯಸ್ನೋನು ನೋಡ್ದೋರ್ಗೆ ಗೌರ್ವ ಮೂಡ್ಹಂಗೆ ಡೌಲಾಗಿದ್ದ. ಅವ್ನಿಗೆ ಕಾಲ್ತೊಳ್ಕಳ್ಳಾಕೆ ನೀರ್ಕೊಡ್ಸಿ, ಒಳಾಕೆ ಕರ್ಕಂದ್ರು ಗೌಡ್ರು. ಬಂದೋನು ಕುಂತ್ಕಂದು "ನಾನು ಬಾಗಿನಕೊಪ್ಪೋನು. ನಮ್ಮ ಗೌಡ್ರು ನಿಮ್ಮ ಕಂಡು ಒಂದ್ವಿಷ್ಯ ತಿಳ್ಸಾಕೆ ಕಳ್ಸಿಕೊಟ್ಟಿದ್ದಾರೆ. ಅವ್ರ ಲೇವಾದೇವಿ ನೋಡ್ಕಳ್ತಿರೊ ನನ್ಹೆಸ್ರು ಸೂರಪ್ಪ" ಅಂದ

ಸೂರಪ್ನ ಮಾತ್ನ ಕೇಳ್ದ ಗೌಡ್ರಿಗೆ ಸಂತೋಸ, ಆಚ್ಚರ್ಯ ಎಲ್ಡೂ ಆದ್ವು. "ಬಾಗಿನಕೊಪ್ದ ಗೌಡ್ರು ತನ್ನ ಮಗಳ್ನ ತಮ್ಮ ಮಗನ್ಗೆ ತಂದ್ಕೊಳ್ಳೋ ಸುದ್ದೀನ ಹೇಳಿ ಕಳ್ಸಿರ್ಬೋದಾ? " ಅಂತ ಸಂತೋಸಾದ್ರೆ "ಅಷ್ಟು ದೊಡ್ಡಸಾವ್ಕಾರ್ರು ತನ್ನ ಮಗಳ್ನ

ಸೊಸೆಯಾಗಿ ಮಾಡ್ಕಂದಾರಾ?" ಅಂತ ಆಚ್ಚರ್ಯ. ಗೌಡ್ರ ಮನ್ಸಿಗೆ ಸಂತೋಸ್ದ ರೆಕ್ಕೆ ಮೂಡ್ದಂಗಾತು. ಎಲ್ಡು ಕೋಳಿ ಕೊಯ್ಸಿ, ಭರ್ಜರಿ ಬೀಗ್ರ ಊಟಾನ್ನೇ ಸೂರಪ್ಗೆ ಉಣ್ಸಿದ್ರು. ಕುತ್ಗಿಗೆಬರ್ದಂಗೆ ಉಂಡು ತೇಗ್ದಾಕ್ದ ಸೂರಪ್ಪ ಎಲಡ್ಕೆ ಜಗೀತಾ–"ನೋಡ್ರಿ ಗೌಡ್ರೇ, ನಾನು ತಿಳ್ಕೊಸಿ ವಿಷ್ಯಾ ಕೇಳಿ, ನೀವು ಒಂದೇ ಮಾತ್ಗೆ ಹೂಂ ಆಗ್ಲಿ" ಅಂತೀರಿ. ನಮ್ಮ ಗೌಡ್ರು ಸುತ್ತ ಮುತ್ಗ ಇಪ್ಪತ್ತೂಳ್ಳಿಗೇ ಹೆಸ್ರುವಾಸಿ. ಅವ್ರ ಸೊಸೆ ಯಾಗೋಳ್ಗೆ ಅಂದ್ರೆ ನಿಮ್ಮಗಳ್ಗೆ, ಹಿಂದೆ ಯಾರೂ ಕೊಟ್ಟಿರ್ಬಾರ್ದು ಮುಂದೆನೂ ಯಾರೂ ಕೊಡ್ಲಾರು ಅನ್ನಂಗೆ ತೆರಕೊಡ್ತಾರೆ. ಒಂದಿಪ್ಪತ್ತು ಮಣ ಬೆಲ್ಲ, ಒಂದ್ಹತ್ತು ಮಣ ಸಕ್ರಿ, ನಾಕಾರ್ಚೀಲ ಅಕ್ಕಿಗೋಧಿ, ಮೂರ್ನಾಕು ಡಬ್ಬ ಒಳ್ಳೆಣ್ಣೆ ತುಪ್ಪ ಹತ್ತು ತ್ವಲ ಬಂಗಾರ, ಒಂದಿಪ್ಪತ್ತು ತ್ವಲ ಬೆಳ್ಳಿ....ಕೇಳ್ದ ಜನ ಮೂಗಿನ್ಮ್ಯಾಲೆ ಬೆಳ್ಳಿಟ್ಕಾಬೇಕು–ಹಂಗೆ ಕೊಡ್ತಂಗಿದ್ದಾರೆ. ಇದೂ ಕಹಚ್ಗೆ ಬೇಕೂಂದ್ರೆ ನಾನ್ಹೇಳಿ ಕೊಡಿಸ್ತೇನಿ. ನನ್ನ ಮಾತ್ನ ಅವ್ರು ತಗ್ದು ಹಾಕಲ್ಲ. ನೀವು "ಹೂಂ" ಅಂದ್ರೆ ಸಾಕು, ಲಗ್ನದ ಮಾತು ಕತೆ ದಿವ್ಸಾನ ಗೊತ್ತು ಮಾಡ್ಕಂದೇ ಬಿಡಾನ ಅಂತ, ಮದ್ವೆ ಮುಗ್ದೇ ಹೋತೇನೋ ಅನ್ನಂಗೆ ಮಾತಾಡ್ದ. ಇಂಥಾ ಬೀಗ್ತನಾನ ಗೌಡ್ರು ಒಪ್ದೆ ಬಿಡ್ತಾರ ?

ಆಗ ಚಳಿ ಹಿಡ್ಕಂದಿದ್ದ ಕಾಲ. ಗೌಡ್ರು ತಮ್ಮ ಮಂಚ್ದ ಜತ್ಯಾಗಿದ್ದ ಹೆಂಡ್ತಿ ಮಂಚಾನ ಒಂದ್ಕಡೆ ಸರ್ಸಿ, ಸೂರಪ್ಗೆ ಸುಪ್ಪತ್ಗೆ ಹಾಸ್ಕೊಟ್ರು. ಆ ಮಾತು ಈ ಮಾತು ಮಳೆಬೆಳೇಂತ ಮಾತ್ಡಾತ್ತಿದ್ದಂಗೆ ಸೂರಪ್ಪ "ಗೊರ್ರೊರ್ರೋ" ಅಂತ ಗೊರ್ಕೆ ಕೊರೆಯಾಕ್ಹತ್ತಿದ.

"ಇವತ್ತೇನಪಾ, ಇಸ್ಟೊಂದು ಹಾಳ್ನಿದ್ದೆ" ಅಂತ ಎಂದ್ಗಿಂತ ತಡ್ವಾಗಿ ಎದ್ದ ಗೌಡ್ರು, ಮದ್ಲು ಅಂಗೈ ನೋಡ್ಕಂದು, ಸೂರಪ್ನ ಮಂಚದ್ಕಡೆ ನೋಡಿದ್ರು. ಅರೆ, ಸೂರಪ್ನೇ ಇಲ್ಲ! ದಿಗ್ನೆದ್ದು ದೇವ್ರ ಕ್ವಾಣೆಗೆ ಓಡಿದ್ರು. ದೇವ್ರ ಮುಂದ್ಲ "ಮುಡ್ಪಿನ" ಪೆಟ್ಗೆನೇ ಇಲ್ಲ! ಎದೆ ಧಸಕ್ಕೆಂದ ಗೌಡ್ರು ಅಲ್ಲಿಂದ ಪಿಟಾರಿಇಟ್ಟಿದ್ದ ಕ್ವಾಣೆಗೆ ಓಡಿದ್ರು. ಪಿಟಾರಿ ಬಾಗ್ಲು ತೆರ್ದಿತ್ತು. ಅದ್ರಾಗೆ ಜ್ವಾಪಾನವಾಗಿಟ್ಟಿದ್ದ ವಡ್ವೆ, ವಸ್ತ್ರಗೋಳ್ನೆಲ್ಲಾ ದೋಚ್ಕಂದು ಪರಾರಿ ಆಗಿದ್ದ ಸೂರಪ್ಪ ! ಗೌಡ್ರ ಹೆಂಡ್ತಿ, ಮಗ್ಳು, ಇನ್ನೂ ಅಡ್ಗಿ ಕ್ವಾಣ್ಯಾಗೇ ಮಲಗಿದ್ರಂತೆ. ರಾತ್ರಿ ಮನೆಯಾಗಿದ್ದ ಎಲ್ರಿಗೂ 'ಮತ್ತು' ಬರ್ಸೋ 'ಬಸ್ಮ' ಹಾಕಿಬ್ಟೋದು–ಅಂತ ಜನ ತಿಳ್ದಂಗೆ ಅಂದ್ಕಂದ್ರು.



## ಹೆಣ್ಣೂ ಕೆಡವ್ಕೊಂಡು ಹೆಣ್ಣೂ ಹೊಡ್ಕಂಡ್ಹಂಗೆ

ಹರಳ್ಳಿ ಅಂತ ಒಂದೂರ್ನಾಗೆ ರುದ್ರಾಚ್ಚಾರಿ ಅನ್ನೋ ಒಬ್ಬ ಬಡಿಗ್ಯಪ್ಪ ಇದ್ದ. ಅವ್ನಿಗೆ ಒಬ್ಳೆ ಮಗ್ಳು. ಹೆಸ್ರು ಮಾದೇವಿ ಅಂತ ಇಟ್ಕ. ರುದ್ರಾಚಾರಿಗೆ ಒಂದರ್ಧ ಎಕ್ರೆ ತ್ವಾಟಾನು ಇತ್ತು. ತ್ವಾಟದವ್ಯಾಗಿನ ಅವ್ನ ಕಾಳ್ಜಿ ಬಡ್ಗಿ ಕೆಲ್ಸಾನ್ನೂ ಮರ್ಸಿತ್ತು.

ಆ, ರುದ್ರಾಚಾರಿಗೆ ತಂಗಿ ತಮ್ಮ ಯಾರೂ ಇರ್ಲಿಲ್ಲ. ಇದ್ದೊಬ್ಬ ಅಕ್ಕನ್ನ ಅವ್ನ ಅಪ್ಪ ಬದ್ಕಿದ್ದಾಗ ದಿಬ್ಬದ ಹಳ್ಳಿಗೆ ಕೊಟ್ಟು ಮದ್ವೆ ಮಾಡಿದ್ದ. ಎಲ್ಡು ವರ್ಸ ಆಗಿರ್ಲಿಲ್ಲ, ಅಕ್ನ ಗಂಡ ಹಾವು ಕಡ್ದು ಸತ್ಹೋದ. ಆಗ ಅಕ್ಕಿಗೆ ಒಂಬತ್ತು ತಿಂಗ್ಳು ತುಂಬ್ದ ಗಂಡ್ಮಗ ಇತ್ತು. ಹೆಸ್ರು ಮೋನಾಚ್ಚಾರಿ ಅಂತ. ಈಗ ಅವ್ನಿಗೆ ಇಪ್ಪತ್ತೋ ಇಪ್ಪತ್ತೆಲ್ಡೋ ವರ್ಸಿರ್ಬೇಕು.

ಹರೇವ್ಕೆ ಬಂದ ಮೋನಾಚಾರಿ, ಬಲೇ ಕಿಸಾಣಿ. ಅವ್ನ ಅಂದ್ರೆ ರುದ್ರಾಚಾರಿಗೆ ಅಸ್ಟಕಸ್ಟೇ–ಬಾಳಾ ತಾತ್ಸಾರ. ಒಂದ್ನೇದಂದ್ರೆ–ಹುಟ್ದ ಒಂಬತ್ತು ತಿಂಗ್ಳಾಗೇ ಅಪ್ಪನ್ನ ತಿಂದ್ಕಂದ ಅನ್ನೋದು. ಎಲ್ಡ್ನೇದು–ಹೊಲ ಇದ್ರೂ ತನ್ನ ಕಣ್ಣಿಗ್ಕಾಣ್ದಂಗೆ ತನ್ನೂರ್ಗೇ ಕೂಲಿ ಕೆಲ್ಸಕ್ಕೇಂತ ಬರ್ತಾ ಇದ್ದದ್ದು. ಸ್ವಾಡ್ರ ಅಳಿಯ ಹಿಂಗಾದ್ರೆ ಯಾವ ಸ್ವಾದ್ರ ಮಾವ ಹಿಂಗಾಗಾಕಿಲ್ಲ?

ಮೋನಾಚಾರಿ ಹರಳ್ಳಿಗೆ ಬರೋ ದಾರ್ಯಾಗೇ ರುದ್ರಾಚಾರಿಯ ತ್ವಾಟ ಇತ್ತು. ಆ ತ್ವಾಟ್ದಾಗೆ ಕಾಯ್ಬಿಟ್ಟ ಮೂರು ಅಕ್ತಂಗೇರ ಮರ ಇದ್ವು. ಆಗಾಗ ಮಿಂಚ್ನಂಗೆ

ಮಾವ್ನ ಮಗ್ಳು, ಮಾದೇವಿ ಕಾಣಿಸ್ತಿದ್ಲು. ಇವು ಮೋನಾಚಾರಿಯ ಕಣ್ಣು ಕುಕ್ತಿದ್ವು.

ಅಕ್ತುಂಗೇರ ಕಾಯಿ ಹಣ್ಣಾಗಾಕೆ ದಿನ್ದಿನ್ಕೆ ಕೆಂಪು ಮೂಡಾಕ್ಹತ್ತಿದ್ವು. ಮೋನಾಚಾರಿಯ ಜೀವ ನೀರಾಡ್ಹಾಕತ್ತು. ಒಂದಿನ ಭಂಡ ಧೈರ್ಯ ತಂದ್ಕಂದು ತ್ವಾಟ್ದ ಬಾಗ್ಲ ಹತ್ರಾನೇ ಬಂದು–" ಮಾವಾ, ಓಮಾವಾಂತ" ಕೂಗ್ದ. "ಯಾರೂ" ಅಂತ ಬಾಗ್ಲ ಹತ್ರ ಬಂದ ರುದ್ರಾಚಾರಿ " ಓಹೋ, ಅಳಿಮಯ್ಯ ! ಏನಪಾ ಮಾರಾಜ ?" ಅಂತ ತಿವಿದ್ಹಂಗೆ ಕೇಳ್ದ. "ಅಕ್ತುಂಗೇರ ಹಣ್ಣು ತಿನ್ನಂಗಾಗೇತಿ. ಮಾವ್ನೆ ಕರ್ದು ಕೊಟ್ಟಾಂತ ಅವ್ವನ್ಹತ್ರ ಹೇಳ್ತೀನಿ. ಒಂದೆಲ್ಡು ಕೆಡವ್ಕೊಳ್ಲಾ ?" ಅಂತ ಕೇಳ್ದ–"ಇನ್ನೂ ಪೂರ್ತಾ ಹಣ್ಣಾಗಿಲ್ಲಕಣೋ. ಅಲ್ಲಾ ತಿನ್ನಂಗಾಗೈತಿ ಅಂತ ಹೇಳ್ತಿಯಲ್ಲಾ ನೀನೇನು ಬವ್ಕಿ ಕಾಡೋ ಬಸ್ರಿ ಹೆಂಗ್ಸಾ? ಹೂಂ, ಹಣ್ಣಾದಾಗ ನಾನೇ ಕರೀತೇನಿ ಈಗೇನು ತಿನ್ನಾಕ್ಬರ್ತಾವ ಅವು?" ಅಂತ ಹೇಳಿ ಕಳ್ಸಿದ.

ಸರಿ ಅಂದ್ನಿಂದ ಮೋನಾಚಾರಿ ಮಾವ್ನ ಊರಿಗೆ ದಿನಾ ಬರಾಕ್ಹತ್ತಿದ. ದೇವ್ರ ಮ್ಯಾಗ್ಳ ಹೊತಪ್ಪಿದ್ರೂ ಅವ್ನು ತಪ್ಪಿರ್ಲಿಲ್ಲ. ಬಂದಾಗ್ಲೆಲ್ಲಾ ಉಗ್ಳು ನುಂಗ್ತಾ ಅಕ್ತುಂಗೇರ ಹಣ್ಣು ಕೇಳ್ತಿದ್ದ. ರುದ್ರಾಚಾರಿನೂ ಮದ್ಲಿನಂತೇ ಹೇಳ್ತಾ ಅವ್ನ ಸಾಗು ಹಾಕ್ತಿದ್ದ.

ಈ ಸಬೂಬು ಮೋನಾಚಾರಿಗೆ ರೊಚ್ಚಿಗೇಳಿಸ್ತು. ಯಂತಂತದೋ ಸಂಚು ಹೂಡಾಕ್ಹತ್ತಿದ. ಮತ್ತೆ ಅಕ್ತುಂಗೇರ ಹಣ್ಣು ಬೇಡಾಕೂ ಹೋಗ್ಲಿಲ್ಲ; ದಿನಾ ಬರೋದ್ನೂ ನಿಲ್ಲಿಸ್ಲಿಲ್ಲ.

ಒಂದಿನ ತ್ವಾಟ್ದ ಮೆಳೆಯಾಗೆ ಜಪ್ಪುಹಾಕಿ ಕುಂತ್ಕಂದ. ತ್ವಾಟ್ದ ಒಂದು ಮೂಲ್ಯಾಗಿ ಮಾವ ಏನ್ನೋ ಬಗೀತಿದ್ದ. ಮಾದೇವಿ ಒಂದು ಅಕ್ತುಂಗೇರ ಮರ್ದ ಬುಡ್ದಾಗೇ, ಮೂಡ್ಲುಕಡೆ ಮುಕ ಮಾಡ್ಕಂದು ಗಿಡ್ಕೆ ಗುಣಿ ಮಾಡ್ತಾ ಕುಂತಿದ್ಲು. ಆಗ ಸಿಳ್ಳು ಸಾಯಂಗೆ ಬಂದ ಮೋನಾಚಾರಿ, ಮಂಗಹತ್ತಿದ್ಹಂಗೆ ಒಂದು ಅಕ್ತುಂಗೇರ ಮರಹತ್ತಿ 'ದಪ್ ದಪ್' ಅಂತ ಎಲ್ಡು ಹಣ್ಣು ಕೆಡ್ವಿ, ಆಕಾಸ್ದಿಂದ ಇಳ್ದು ಬಂದ್ಹಂಗೆ ಮಾದೇವಿ ಮುಂದೆ ನಿಂತ್ಬಿಟ್ಟ. ಮಾದೇವ್ಗೆ ಸುಂಟ್ರು ಗಾಳ್ಯಾಗೆ ಸಿಕ್ಹಂಡಂಗಾತು. ಚಟ್ನೆ ಎದ್ದು ತರತರ ನಡುಗ್ತಾ ತತ್ರಿಬಿತ್ರಿಯಾಗಿ ನಿಂತ್ಬಿಟ್ಲು. ಮೋನ ಸರ್ನೆ ಬಕಾಣ್ದಿಂದೊಂದು ಸಣ್ಣ ಸೀಸ ತಗ್ದು ಅದ್ರ ಮುಚ್ಚ ತಗ್ದ. ಅದ್ರಾಗಿದ್ದ ಬಣ್ಣಾನ ಕೈಯ್ಗೆ ಸುರ್ಕಂದು, ಗಸಗಸಾಂತ ಉಜ್ಕಂದು "ಅಯ್ಯಯ್ಯಪ್ಪಾ. ಇದೇನೇ ಮಾದೇವಿ ? ನಿನ್ನ ಎದೆ ಮುಸ್ಕಿನ ಮ್ಯಾಲೆ ಚೇಳೈತಲ್ಲೇ" ಅಂತ ಚೀರ್ಕಂದ. ಮೋನ ಹಿಂಗೆ ಚೀರ್ಕಂದದ್ದೇ ತಡ, ಆ ಹುಡ್ಗಿ ಚಟ್ನೆ ಚೀರ್ಕಂದು ಸೆರಗ್ನ ಜಾಡ್ಸಿ "ಅಯ್ಯಯ್ಯಪ್ಪೋ" ಅಂತ ಕುಸ್ದು ಬಿದ್ಲು. ಹಿಂಗೆ ಹೆದರ್ಕಂದು ಮಾದೇವಿ ಬಿದ್ದದ್ದೇ ತಡ, ಸೀರೆ ಸೆರಗ್ನ ಜಾಡ್ಸಿದ್ದಲ್ಲ ಅದ್ರಮ್ಯಾಲೆ,



ಮೋನ ಬಣ್ಣ ಹಚ್ಕಂದಿದ್ದ ತನ್ನ ಎಲ್ಡೂ ಕೈ ಒತ್ತಿ ಗುರ್ತು ಮಾಡಿ, ಆಕೀನ ಮೇಲೆತ್ತಾಕೂ "ಏನತಪಾ ಮಗ್ಳಿಗೇ" ಅಂತ ಹೆದರ್ಕಂದು ಮಾವ ಬರಾಕೂ ಸರಿಹೋತು.

ಏನ್ನೋ ಗೆದ್ಕಂಡ್ಹಗೆ ನಿಂತಿದ್ದ ಅಳಿಯನ್ನೋಡಿ, ಬೆಂಕಿ ತಿಂದ್ಹಂಗೆ ಉರುರಿ ಆಗ ನೊರನೊರ ಹಲ್ಕಡ್ದು "ಲೇ ಬಾಡ್ಕಾವ್, ದರ್ವೇಸಿ, ಯಾರ್ನ ಕೇಳಿ ತ್ವಾಟ್ದ ಒಳಾಗ್ಬಂದ್ಯೋ ? ನಿಮ್ಮಪ್ಪಂದೇನೋ ತ್ವಾಟಾ ?" ಅಂತ ಅಬ್ಬರಿಸಿದ. ಸೇರಿಗ್ಸೇರು ಸವಾಸೇರು ಅಂದ್ಹಂಗೆ ಅಳಿಯ್ನೂ ಹಿಂಗೆ ಸವಾಲು ಹಾಕ್ದ–"ನಮ್ಮಪ್ಪಂದ್ಯಾಕೆ ಆದೀತ್ಯಾವ ತ್ವಾಟ ? ನಮ್ಮ ಅವ್ವ ಅಣ್ಣಂದು ! ನನ್ನ ಸ್ವಾದ್ರ ಮಾವಂದು !! ಮಗ್ಳುಕೊಡು, ಮದ್ವಿ ಆಗ್ತೇನಿ ಅಂತ ನಾನೇನ್ನಿನ್ನ ಕೇಳಿದ್ನ್ಯಾ ? ಆ ನರಸತ್ತೋನ್ಗೆ ಸತ್ರೂ ಮಗಳ್ನ ಕೊಟ್ಟೇನಾ ? ಅವ್ನಿಗೆ ಮಗ್ಳ ಕಾಲ್ನೂ ತೋರ್ಸಾಕಿಲ್ಲ ಅಂತ ಅವ್ವಿವ್ರ ಸಂಗ್ಡ ಹೇಳ್ತಿರ್ತೀಯಂತೇ. ಕಾಲ್ಯಾಕೆ, ಇಕಿ ಎದೀ ಮ್ಯಾಲೆ ಕೈ ಇಟ್ಟೇದೇನಿ ಇವತ್ತು. ನೋಡ್ಕ್ಯಾಳಿ ಗುರ್ತೂ ಅದಾವೆ ! ಹೂಂ, ಮರ್ವಾದಿ ಉಳಿಸ್ಕಾಬೇಕೂಂದ್ರೆ ಸುಮ್ನೆ ಮಾದೇವಿಕೊಟ್ಟು ಮದ್ವಿಮಾಡು. ಇಲ್ಲಾಂದ್ರೆ, ಊರೂರಾಗೆಲ್ಲ ಗುಲ್ಲು ಹಬ್ಬಿಸ್ಬಿಡ್ತೇನಿ !" ಅಂತ ಬಾಣ ಬಿಟ್ಟ. ಆಗ, ಅದೆಲ್ಲಿದ್ರೋ ಏನೋ, ದನಾ ಕಾಯೋ ಮೂವರು ಅಲ್ಲಿಗೆ ಬಂದ್ಬಿಟ್ರು. ಅದ್ರಾಗೆ ಗೊಡ್ಡೀರಜ್ಜ ಅಂತ ಒಬ್ಬ ಹಿರೇನಿದ್ದ. ಅವ್ನು "ರುದ್ರಪ್ಪಾ, ಏನಾತೋ ಅದ್ನೆಲ್ಲಾ ನಾವು ನೋಡಿದ್ವಿ. ಆದದ್ದು ಆತು ಹರ್ದದ್ದನ್ನ ಹಾಸ್ಗ್ಯಾಗೇ ಸುತ್ತಿಡ್ಬೇಕಂತೆ ಸಿವರಾತ್ರಿ ಆದ್ಮ್ಯಾಲೆ ಒಳ್ಳೆ ಮೋರ್ತ ಅದಾವಂತೆ. ಎಲ್ಲಾ ಮರ್ತು, ಸುಮ್ನೆ ಮದ್ವಿ ಮಾಡ್ಬಿಡ್ರಿ. ಸ್ವಾದ್ರ ಅಳಿಯ ಬ್ಯಾರೆ. ಇನ್ನೇನು ಕುಲ್ಡನಾ ? ಕುಂಟ್ನಾ ತಂದಿಲ್ದ ಪರ್ದೇಸಿ. ಹೆಂಗೂ, ನಿಮ್ಗೂ ಗಂಡ್ಮಕ್ಳಿಲ್ಲ. ರೊಟ್ಟಿ ಜಾರಿ ತುಪ್ದಾಗೇ ಬಿದ್ಹಂಗಾಗ್ತದೆ" ಅಂತ ಬುದ್ಧಿ ಮಾತ್ಹೇಳ್ದ. ಆಗ ರುದ್ರಾಚಾರಿ ಬಾಯ್ಗೆ, ಬಾಕುಕ್ಕಿ ಕಟ್ದಂಗ್ಹಾತು !

# ಹಾಸ್ಯ ಕಥೆಗಳು

# ಅಯ್ಯಪ್ಪಗೆ ಆದದ್ದು ದಾಸಪ್ಪಗ್ಗೂ ಆಗ್ತೈತಿ

ಒಂದೂರು. ಆ ಊರ್ನಾಗೆ ಅಯ್ಯಪ್ಪ ದಾಸಪ್ಪ ಅಂತ ಇಬ್ರಿದ್ರು. ಅಯ್ಯಪ್ಪಂದು ಶಿವನ ಒಕ್ಲು. ದಾಸಪ್ಪಂದು ತಿಮ್ಮಪ್ಪನ ಒಕ್ಲು. ಬಸವನ ಹಿಂದೆ ಬಾಲ ಅಂದ್ಹಂಗೆ ಅಯ್ಯಪ್ಪನ ಹಿಂದೆ ದಾಸಪ್ಪ. ತವ್ತವ್ಮ ದೇವ್ರು ಹೆಸರ್ನಾಗೆ ಭಿಕ್ಷೆ ಎತ್ಕಂದು ಒಟ್ಗೊಟ್ಗೆ ಊರಿಗೆ ಬರ್ತಿದ್ರು. ಹಿಂಗೇ ಬಾಳ ದಿನ ಕಳೀತು.

ಅಯ್ಯಪ್ಪನ ಜತೆಜತೆಯಾಗೇ ದಾಸಪ್ಪ ಇರ್ತಿರೋದು ಅಯ್ಯಪ್ಪನ ಮತದೋರ್ಗೆ ಹಿಡಿಸ್ಲಿಲ್ಲ. ಒಂದಿನ ಅಯ್ಯಪ್ಪನ್ನ ಕರ್ದು ಹಿಂಗೆ ಕಟ್ಟಗೆ ಹೇಳಿದ್ರು–"ಅಯ್ನೋರೇ, ದಾಸಪ್ಪನ ಸಂಗಮಾಡಿ ನಮ್ಮ ಧರ್ಮಕ್ಕೇ ವಂಚನೆ ಮಾಡಿದ್ದೀರಿ. ನಮ್ಮ ದೇವ್ರ ಮುಂದೆ ಅವನ್ದು ಯಾವ ದೇವ್ರು ? ಅವ್ನ ಸಾವಾಸ ಬಿಡೋ ತಂಕ ಯಾರ್ಮನಿಗೂ ಕಾಲಿಡ್ಬಾರ್ದು ! ಗೊತ್ತಾತಾ?" ಈ ಮಾತ್ಕೇಳಿ ಅಯ್ಯಪ್ಪ ಗಡ ಗಡಾಂತ ನಡುಗ್ದ ; ಜಲಜಲಾಂತ ಬೆವ್ತ. ತವ್ಮ ಜನ್ದ ಇರುದ್ದ ಕಟ್ಕಂಡ್ರೆ ಬದ್ಕಾಕಾದೀತ ? ಆ ಕೂಡ್ಲೇ ಅಯ್ಯಪ್ಪ ಕಲ್ಡಿಗೆ ಹಿಡ್ಕಂದು ಪ್ರಮಾಣಮಾಡ್ದ–"ಈ ಶಿವ್ನಾಣೆ! ಇವತ್ತೇ ದಾಸಪ್ಪನ ಜತೆ ಬಿಟ್ಟೆ!"

ಮಾರ್ನೆದಿನ, ದಾಸಪ್ಪನ ಕಣ್ಣಿಗೆ ಕಾಣ್ಬಂಗೆ ಭಿಕ್ಷೆಗೆ ಹೋಗ್ಬೇಕೂಂತ ಹೊಂಟ್ರೆ, ಮಾಯ್ನಾಗೆ ಬಂದ್ಹಂಗೆ ದಾಸಪ್ಪನೂ ಹಿಂದೆಹಾಜರು. ಅಯ್ಯಪ್ಪಗೆ ಸಿಟ್ಟು ನೆತ್ತಿಗೇರ್ತು. ಹಿಂದೇನೇ, ತವ್ಮ ಜನ್ರ ಮುಂದೆ ಪ್ರಮಾಣ ಮಾಡಿದ್ದೂ ನೆಂಪಿಗೆ ಬಂದು "ಯಾರಾದ್ರೂ ನೋಡ್ಬಿಟ್ರೆ ? ನೋಡ್ದೋರು ಹೇಳ್ಬಿಟ್ರೆ ? ಅನ್ನೋ" ಹೆದರ್ಕೆ ಹಿಂದೆ

ಮುಂದೆ ಹೋಗ್ತಂಗೆ ಹುಟ್ತು. "ದಾಸಪ್ಪ ತನ್ನನ್ನು ಸೇರ್ರಾಕಬಾರ್ದು" ಅಂತ ಅಯ್ಯಪ್ಪ ಒಂದೇ ಸವ್ನೆ ಓಟಬಿದ್ದ. ಯಾಕೇಂತ ತಿಳೀದ ದಾಸಪ್ಪನೂ ಓಟಬಿದ್ದು, ಒಂದು ಹಳ್ಳದ್ಹತ್ರ ಅಯ್ಯಪ್ಪನ್ನ ಸೇರ್ಕಂದು "ಹಿಂಗ್ಯಾಕೆ ಹಾವು ಬೆನ್ಹತ್ತಿರೋರ್ಹಂಗೆ ಓಡ್ಬಂದ್ರಿ ಸ್ವಾಮೇರೆ?" ಅಂತ ಕೇಳ್ದ. ಅದ್ಕೆ ದಾಸಪ್ಪ ಹಿಂದಿನ್ದಿನ ನೆಡ್ದಿದ್ನೆಲ್ಲಾ ಹೇಳ್ದಾಗ ದಾಸಪ್ಪಗೆ ಹುಳ ಕಡ್ದಂಗಾತು. ದೈನಾಸಬಿದ್ದು "ಸ್ವಾಮೇರೇ, ನಾನೇನು ನಿಮ್ಮ ಜಾತಿಗೋತ್ರಾನ ಕೆಡ್ಸಿದೇನಾ ? ನೀವೇನು ನನ್ನ ಹೊತ್ಕಂದು ತಿರುಗ್ತೀರಾ ? ನಿಮ್ಮ ಜನ್ರದ್ನ ಕಳ್ವು ಮಾಡಿದ್ನಂಟಾ ? ಆದೇನೋ, ನೀವು ಹೋದ್ಹತ್ರ ಹೋದ್ರೆ, ಬಂದ್ಹತ್ರ ಬಂದ್ರೆ, ನಿಮ್ಮ ಜೋಳ್ಗಿ ತುಂಬಿದ್ಹಂಗೆ ನನ್ನ ಬವನಾಸಿನೂ ತುಂಬ್ತೈತಿ. ಇದಕ್ಯಾತ್ರ ಕಲ್ಲಾಽಕ ಬ್ಯಾಡ್ರಿ ಸ್ವಾಮೇರೇ–" ಅಂತ ಗೋಗರ್ದ.

ದಾಸಪ್ಪನ ಕಣ್ಣಾಗ್ನ ನೀರ್ಕಂಡು ಅಯ್ಯಪ್ಪನ ಕಳ್ಳು, ಚುರುಕ್ ಅಂತು. ಆದ್ರೂ "ನೋಡು ದಾಸಪ್ಪ, ಈ ಜೀವ್ದಾಗೆ ಇದು ಇಷ್ಟಕ್ಕೇ ಮುಗೀಲಿ. ಮುಂದಿನ ಜೀವ್ದಾಗೆ ಇಬ್ರೂ ಒಂದೇ ಜ್ಯಾತ್ಯಾಗೇ ಹುಟ್ಟನ ! ನಾನು ಕಲ್ಡಿಗೆ ಹಿಡ್ದು ಪ್ರಮಾಣ ಮಾಡಿದ್ದೇನೆ. ನನ್ನ ಜತಿಗೆ ನೀನು ಇನ್ ಬರೋದು ಬ್ಯಾಡ್ವೇ ಬ್ಯಾಡ" ಅಂತಂದ ಅಯ್ಯಪ್ಪ ಭರ್ಭರ್ನೆ ಹೋಗ್ಬಿಟ್ಟ. ಅಯ್ಯಪ್ಪ ಬಿಟ್ರೂ ದಾಸಪ್ಪ ಮಾತ್ರ ಬಿಡ್ಲಿಲ್ಲ. ಅವ್ನಿದ್ಹತ್ರ ಇವ್ನು. ಒಂದಿನ ಒಂದೂರ್ನಾಗೆ ಏನಾತು ಅಂತೀಯಾ ?.

ಆ ದಿವ್ಸ ಅಯ್ಯಪ್ಪ "ಶಿವ ಶಿವಾ ಕ್ವಾರಾನ್ನ ಭಿಕ್ಷ" ಅಂತ ಅಗ್ಸೆ ಬಾಗ್ಲ ಮದ್ಲ ಮನೆ ಹೊಕ್ಕ. ಆ ಮನೆಯಾಗಿದ್ದೋರು ಗಂಡ ಹೆಂಡ್ತಿ ಇಬ್ರೇ. ಯಾತ್ಯಾತ್ರ ಮಾತ್ನಾಗೊ, ಗಂಡಹೆಂಡ್ತಿಗೆ ಜಗ್ಳ ಹತ್ತಿ, ಹೆಂಡ್ತಿನ್ನ ಹಿಡ್ಕಂಡು ನಾಕು ಬಿಗ್ದಿದ್ದಗಂಡ. ಹೆಂಡ್ತಿ ಅಡ್ಗಿ ಮನೆ ಮೂಲೆ ಹಿಡ್ದು ಮುಸು ಮುಸು ಅಳ್ತಿದ್ಲು. ಗಂಡ ನಡ್ಮನೆಯಾಗೇ ಕುಂತಿದ್ದ. ಮುಕ ಬಿಕ್ಕಂಡಿತ್ತು. ಮಾತಿಲ್ಲ ಕತಿಲ್ಲ. ಅಯ್ಯಪ್ಪ ಮತ್ತೆ "ಶಿವ ಶಿವಾ ಕ್ವಾರಾನ ಭಿಕ್ಷ" ಅಂತ ರಾಗ ಎಳ್ದಾಗ "ಮುಂದ್ಹೋಗ್ರಿ ಅಯ್ನೋರೆ" ಅಂತ ಗದರಿಸ್ಕಂದೇ ಹೇಳ್ದ ಆ ಮನೆ ಯಜ್ಮಾನ. ಅದ್ಕೆ "ಯಜ್ಮಾನ್ರೇ ನಿಮ್ದೇ ಮದ್ಲ ಮನೆ. ಇಲ್ಲೇ ಇಲ್ಲಾಂದ್ರೆ ಹೆಂಗೆ ? ನೀಡಾಕ್ಹೇಳ್ರಿ, ದೇವ್ರೇನು ಕೆಟ್ಟದ್ದು ಮಾಡಲ್ಲ. ನೀಡಿದ ಕೈ ನಿಗಿನಿಗಿಯಂತೆ" ಅಂತ ಉಪ್ದೇಸ ಹೇಳ್ದ. ಯಜ್ಮಾನ್ಗೆ ಸಿಟ್ಟು ಏರಾಕ್ಹತ್ತು. "ಅಯ್ನೋರೆ, ಒಳ್ಳೆ ಮಾತ್ನಾಗೇ ಹೇಳ್ತೀನಿ, ಹೋಗ್ರಿ ಅಂದ್ರೆ ಸುಮ್ನೇ ಹೊಂಟ್ಹೋಗ್ಬೇಕು" ಅಂತ ಏರಿದ ಸಿಟ್ನಾಗೇ ಹೇಳ್ದ. ಆಗ್ಲೂ ಅಯ್ಯಪ್ಪ ಕೇಳ್ಲಿಲ್ಲ. "ನಿಮ್ದೇ ಮದ್ಲ ಮನೆ ಯಜ್ಮಾನ್ರೇ. ನೀವು ಏನಾರ ನೀಡ್ರಿ, ಹಂಗೇ ನಾನು ಹೋಗಲ್ಲ" ಅಂತ ಮಕ್ಳು ಹಟ ಹಿಡ್ದಂಗೇ ಅಂದ. ಆಗ ಯಜ್ಮಾನ್ಗೆ ಎಷ್ಟು ಸಿಟ್ಬಂತೂ ಅಂದ್ರೆ–ಕದದ ಮೂಲ್ಯಾಗಿದ್ದ ಬಾರ್ಕೋಲು ಎಳ್ಕಂದು ಮುಕ ಮಾರಿ ನೋಡ್ದಂಗೆ ಬಾರ್ಸಾಕ್ಹತ್ತಿದ. ಅಯ್ಯಪ್ಪ "ಅಯ್ಯಯ್ಯಪ್ಪಾ, ಅಯ್ಯಯ್ಯೋ ಅಯ್ಯಯ್ಯೋ....ಬ್ಯಾಡ್ರಿ....ಬ್ಯಾಡ್ರೀ....ನಿಮ್ಮ ಭಿಕ್ಷೆ ಬ್ಯಾಡ್ರೀೀ"



ಅಂದ್ರೂ ಬಿಡ್ಲಿಲ್ಲ. ಹೊಡ್ದೂ ಹೊಡ್ದೂ ಸಾಕಾಗಿ ಬಾರ್ಕೋಲ್ನ ಎಸ್ದಾಗ, ಬಲೆಯಾಗ್ಬಿದ್ದಿದ್ದ ಮಲ ತಪ್ಪಿಸ್ಕಂದು ಓಟ ಬಿದ್ಹಂಗೆ ಅಯ್ಯಪ್ಪ ಓಡ್ದ. ಓಡೇ ಓಡ್ದ ಊರ್ಮುಂದೇ ಇದ್ದ ಕೆರೆತಂಕ ಉಸುರ್ಗಟ್ಟಿ ಓಡ್ದ. ಗಟಗಟಾಂತ ಹತ್ತಾರು ಬಗ್ಸೆ ನೀರು ಕುಡ್ದ "ಹುಸ್" ಅಂತ ಉಸ್ರೆಳ್ದ. ಮೈಕೈಯನ್ನ ನೀವ್ಕಳ್ಳಾಕ್ಹತ್ತಿದ.

ಅಲ್ಲೇ ಕೆರೆ ಮುಂದ್ಲ ಆಲ್ದ ಮರ್ದ ಕೆಳಾಗೆ ಸುಡುಗಾಡು ಸಿದ್ರು ಅಡ್ಗಿ ಮಾಡ್ತಿದ್ರು ಸೀದಾ ಅಲ್ಲಿಗೆ ಬಂದ ಅಯ್ಯಪ್ಪ, ಒಲೆಯಾಗ್ನ ಆರ್ದ ಬೂದಿ ಇಸ್ಕಂದು, ಮರೆಗ್ಹೋಗಿ ಹಣೆಗೆ ಕೊಳ್ಗೆ ಹಚ್ಕಂದು ಊರಹೊರಗ್ನ ದೇವ್ರ ಗುಡಿ ಕಡೆ ಹೊಂಟಾಗ ಗುಡಿಯಾಗೆ ಸಂಕು ಜಾಗ್ಟಿ ದನಿ ಆದದ್ದು ಕೇಳ್ತು.

ಅಯ್ಯಪ್ಪ ಗುಡಿಗೆ ಬಂದಾಗ ಊರಾಡಲು ಹೊಂಟಿದ್ದ ದಾಸಪ್ಪ "ಓಹೋ, ಇಬತ್ತಿ ಕಟ್ಟು ನೋಡಿದ್ರೆ ಇವತ್ತು ಸ್ವಾಮೇರ್ದು ಭರ್ಜರಿ ಊಟಾಂತ ಕಾಣ್ತೈತಿ. ಆರೆ, ಜೋಳಿಗ್ಯಾಗೆ ಭಿಕ್ಷೇನೆ ಇಲ್ಲ" ಅಂತ ಬೆರ್ಗಾಗಿ ಕೇಳ್ದ. ದಾಸಪ್ಪನ ಮಾತು ಹುಣ್ಣಿನ ಮ್ಯಾಲೆ ಉಪ್ಪಿನ ನೀರು ಬಿಟ್ಟಂಗಾತು ಅಯ್ಯಪ್ಪಗೆ. ಯಾವುದ್ನೂ ತೋರಿಸ್ಕಳ್ಳದ ಅಯ್ಯಪ್ಪ ಕೆರೆ ನೀರ್ನ ತೇಗ್ತಾ ಕಿ " ಜೋಳ್ಗೀದು ಇರ್ಲೋ ದಾಸಪ್ಪಾ, ಇವತ್ತೆದ್ದು ಯಾರ್ಮುಕ ನೋಡಿದ್ನೋ ಏನೋ ? ಅಗ್ಸೆ ಬಾಗ್ಲ ಮದ್ಲ ಮನೆಯಾಗೇ ಇವತ್ತು ಎಂಥಾ ಹೋಳ್ಗಿ ಊಟಾಂತೀ ? ಆದೇನು ತುಪ್ಪಾಂತೀ ? ಇಂಥಾ ಊಟಾನ್ನ ಇದ್ವರ್ಗೂ ಉಂಡಿರ್ಲಿಲ್ಲ. ಮುಂದೆ ಕಾಣ್ತೇನೋ ಇಲ್ಲೋ !" ಎಂದು ಹೇಳ್ತಿದ್ದಾಗ ದಾಸಪ್ಪನ ಬಾಯಾಗೆ ನೀರೊಡ್ದು, ಹೋಳ್ಗಿ ತುಪ್ಪ ವಾಸ್ನಿ ಮೂಗಿಗೇ ಅಡರ್ತು. ನ್ಯಾಲ್ಗಿ ಸವರ್ಕಂದು, ಉಗ್ಳು ನುಂಗ್ದ ದಾಸಪ್ಪ. "ಸ್ವಾಮೇರೇ, ಹೋದ್ರೆ ನನ್ಗೂ ಸಿಕ್ಕೀತಾ ?" ಅಂತ ಕೇಳ್ದಾಗ "ಓಹೋ ಇವತ್ತು ಎಲ್ರಿಗೂ ಅಂಥ ಊಟ ಹಾಕ್ತಾರಂತ ಆ ಮನೇರು. ಯಜ್ಮಾನ್ರು ಬಲು ಸಿಟ್ನೋರ್ಹಂಗೆ ಕಂಡ್ರೂ ಬಾಳ ಒಳ್ಳೇರು, ಮದ್ಮದ್ಲು "ಇಲ್ಲ ಸುಮ್ನೆ ಹೋಗ್ರಿ" ಅಂತ ಗದರಿಸ್ಕಳ್ತಾರೆ. ಅಷ್ಟ್ರಾಗೇ ಯಜ್ಮಾನ್ರ ಹೆಂಡ್ತಿ ಬಂದು, ಗಂಡನ್ನ ಸುಮ್ನಿರ್ಸಿ ದೇವ್ರ ಕ್ವಾಣೆಗೆ ಕರ್ಕಂದ್ಹೋಗಿ, ಪಾದಪೂಜೆಮಾಡಿ ಬಡಿಸ್ತಾರೆ. ಹೆಂಡ್ತಿ ಅಂದ್ರೆ ಹಂಗಿರ್ಬೇಕು ನೋಡು ದಾಸಪ್ಪ. ಗಜ್ಗಾರಿ ಅಂದ್ರೇ ಗಜ್ಗಾರೀನೆ. ಉಂಡ್ಹೊಟ್ಟೆ ಹೊತ್ಕಂದು ಭಿಕ್ಷೆಗ್ಹೋಗುದ ಹೆಂಗೆ ? ಹಂಗೆ ಸ್ವಲ್ಪ ಅಡ್ಡಾಗಿ, ಸಂಜೆ ಕಡೆ ಊರಾಡಕೆ ಹೋದ್ರಾತು ಅಂತ ಹಂಗೇ ಬಂದೆ!" ಎಂದು ದಾಸಪ್ಪನ ಆಸೇನ ಬೂದು ಕುಂಬ್ಳಕಾಯ್ನಂಗೆ ಬೆಳ್ಸಿದ. ದಾಸಪ್ಪ ಹೊಂಟೇಬಿಟ್ಟ.

ಅಯ್ಯಪ್ಪ ಹೇಳ್ದ ಮನೆಗೇ ಸೀದಾ ಬಂದ ದಾಸಪ್ಪ ಜಾಗ್ಟಿ ಬಾರ್ಸಿ, ಸಂಕ್ಹಿಡ್ದು "ಯಂಕಟ್ರಮಣ ಗೋವಿಂದ ಗೋವಿಂದ" ಎಂದು ಹಾಡ್ದ. ಯಜ್ಮಾನ ಇನ್ನೂ ನಡ್ಮನೆಯಾಗೇ ಕುಂತಿದ್ದ. ಅಯ್ಯಪ್ಪಗೆ ಅಂದ್ಹಂಗೇ "ಮುಂದ್ಹೋಗು ದಾಸಪ್ಪ" ಅಂದ

ಅದ್ಕೆ ದಾಸಪ್ಪ "ಇವತ್ತು ಎಲ್ರಿಗೂ ಊಟಹಾಕ್ತೀರಂತೆ. ನಾನೇನು ಹೊಟ್ಟೆಮ್ಯಾಲೆ ಚೀಲ ಕಟ್ಕಂದು ಬಂದಿದೇನಾ ಯಜ್ಮಾನ್ರೆ?" ಅಂತ ಕೇಳಿ, ಅಡ್ಗಿ ಕ್ವಾಣಿ ಕಡೆ ನೋಡ್ದ ಯಜ್ಮಾನ್ರಗ ಇಳೀತಿದ್ದ ಸಿಟ್ಟಿನ ಹೆಂಡ ಮತ್ತೆ ಏರಾಕ್ಹತ್ತು. "ದಾಸಪ್ಪ ಒಳ್ಳೆ ಮಾತ್ನಾಗೆ ಹೇಳ್ತೀನಿ ಸುಮ್ನೆ ಹೋಗೂಂದ್ರೆ ಹೋಗ್ಬೇಕ್ನೋಡು" ಅಂತ ಗದರಿಸ್ದ. ದಾಸಪ್ಪ ಹೆದರ್ಲಿಲ್ಲ. ಅಡ್ಗಿ ಕ್ವಾಣಿ ಕಡ್ಗೇ ನೋಡ್ತಾ "ಅಲ್ರಿ ಯಜ್ಮಾನ್ರೆ ಈಗ ಅಯ್ನೋರ್ಗೆ ಗಡದ್ದಾಗಿ ಊಟ ಹಾಕಿ ಕಳ್ಸಿದೀರಿ. ಎಲ್ಲಾ ಅವ್ರೇ ಹೇಳಿದ್ರು. ನಿಮ್ಮ ಹೆಂಡ್ತೀನ ಬಾಯ್ತುಂಬ ಹೊಗ್ಳಿದ್ರು! ಅಯ್ನೋರ ಪಾದಪೂಜೆ ಮಾಡಿ, ಹೋಳ್ಗಿ ಊಟಾ ಉಣ್ಸಿ ಕಳ್ಸಿದ್ರಂತೆ. ನನ್ಗೆ ಯಾವ ಪೂಜೇನೂ ಬ್ಯಾಡ. ಊಟಾ ಹಾಕ್ರಿ ಸಾಕು" ಅಂತ್ಹೇಳಿ ಮತ್ತೆ ಜಾಗ್ಟೆ ಬಾರ್ಸಿ, ಸಂಕ್ಹಿಡ್ದು "ಯಂಕಟ್ರಮಣ ಗೋವಿಂದ ಗೋವಿಂದಾ..." ಅಂತ ರಾಗ ಎಳ್ದ. ಯಜ್ಮಾನ್ಗೆ ಹೆಂಡೇರ್ತು "ಅಯ್ಯಪ್ಪಗೆ ಬಡ್ಸಿದ್ದು ಎಲ್ಲಾ ಬಳ್ದೋತೊ ದಾಸ, ಸುಮ್ನೆ ಮುಚ್ಕಂದು ಹೋಗ್ತೀಯೋ ಇಲ್ಲೋ" ಅಂತಜೋರಾಗಿ ಬೆದರಿಸ್ದ. ಆಗ್ಲೂ ದಾಸಪ್ಪ ಹೆದರ್ಲಿಲ್ಲ. "ನಿಮ್ಮ ಯಜ್ಮಾನೀನ ಸಲ್ಪ ಕರೀರಿ ಯಜ್ಮಾನ್ರೆ, ಅವ್ರು ಇಲ್ಲಾಂದ್ರೆ ಹೊಂಟ್ಹೋಗ್ತೀನಿ" ಅಂತ ಹೇಳ್ದ ದಾಸಪ್ಪ ಮತ್ತೆ ಕಿವಿ ಕೆಪ್ಪಾಗ್ಹಂಗೆ ಸಂಕ್ಹಿಡ್ದ. ಯಜ್ಮಾನನ ತಲೆ ಎಷ್ಟು ಬಿಸಿ ಆತೂಂದ್ರೆ "ನೀನು ಹಂಗೇ ಹೋಗ್ಹಂಗೆ ಕಾಣ್ಸಾದಿಲ್ಲ" ಅಂತ ಮನಸ್ನಾಗೆ ಅಂದ್ಕಂದು "ಹೂಂ ಒಳಗ್ಬಾ" ಅಂತಕರ್ದು, ಬಾಗ್ಲ ಹಾಕ್ಕಂದು, ಕದದ ಮೂಲ್ಯಾಗಿದ್ದ ಬಾರ್ಕೋಲ್ನ ತಗಂದು, ಮಕ ಮಾರಿ ನೋಡ್ದಂಗೆ "ಛಟ್ ಛಟಲ್ ಛಟ್ ಛಟಲ್" ಅಂತ ಬಾರ್ಸಾಕ್ಹತ್ತಿದ. ದಾಸಪ್ಪ "ಅಯ್ಯಯ್ಯೋ, ಅಯ್ಯಯ್ಯೋ...ಬ್ಯಾಡ್ರೀ...ನಿಮ್ಗೊಟಬ್ಯಾಡ್ರೀ...ಹೊಡಿ ಬ್ಯಾಡ್ರೀ... ಬಿಟ್ಬಿಡ್ರೀ ಬಿಟ್ಬಿಡ್ರೀ ಅಯ್ಯಯ್ಯೋ..." ಅಂತ ನಡ್ಮನೆ ತುಂಬಾ ಕುಣ್ದಾಡಾಕ್ಹತ್ತಿದ. ಸಂಕು ಜಾಗ್ಟೆ ಎಲ್ಲೋ ಬಿದ್ಹೋಗಿದ್ವು. ಸುಸ್ತಸ್ತ್ತಿ ಹೊಡ್ದು, ಸಾಕಾಗಿ ಕಡೆಗೆ ಕದಾ ತಗ್ದ ಯಜ್ಮಾನ. ಕದಾ ತಗ್ದದ್ದೇ ತಡ "ಅಯ್ಯಯ್ಯೋ... ಯಂಕಟ್ರಮಣಾ...ಯಂಕಟ್ರಮಣಾ ಗೋವಿಂದ... ಗೋವಿಂದಾ" ಅಂತ ಮೈಕೈ ತಡವರಿಸ್ಕಂತ ಗುಡಿ ಬೀಳೋವರ್ಗೂ ಓಡೇ ಓಡ್ದ ಓಡೇ ಓಡ್ದ ದಾಸಪ್ಪ. ನೋಡ್ತಾನೆ ಅಲ್ಲಿದ್ದ ಅಯ್ನೋರೇ ಇಲ್ಲ !



## ಅಳಿಯನ ಎಮ್ಮೆ ಮಾವ್ನ ಕಲ್ಲೋಣ್ದ ಮೇದ್ಹಂಗೆ

ಅವತ್ತು ನೆತ್ತಿ ಸುಡಂಗೆ ಹೊತ್ತೇರ್ತು. ಬ್ಯಾಸಾಯ ಬಿಟ್ಕಂದು ಯಂಕ ಮನಿಗ್ಬಂದ. ಹಕ್ಯಾಗೆ ಎತ್ತು ಕಟ್ಟೆ, ನೀರ್ಕುಡ್ಸಿ, ಮೇವ್ಹಾಕಿ, ಆ ಮ್ಯಾಲೆ ಬಾವಿ ಹತ್ರ ಬಂದು, ನೀರ್ಸೇದ್ಕಂದು ಮೈತೊಳ್ಕಂದ. ಅಡ್ಗಿ ಮನ್ಗೆ ಬಂದೋನೇ ಉಣ್ಣಾಕುಂತ, ಹೆಂಡ್ತಿ ರಂಗವ್ವ ಬಿಸಿ ಬಿಸಿ ಮುದ್ದೆ ನೀಡಿ, ಹುಳ್ಳಿಕಾಳ್ನ ಅಂಬ್ರ ಹಾಕಿದ್ಲು. ಗಂಡ ಮುದ್ದೆಉಂಡ್ನಂತ್ರ ಸಾವಕ್ಕಿ ಅನ್ನ ನೀಡಿದ್ಲು.ಅದ್ನೂ ಉಂಡಾದ್ಮ್ಯಾಲೆ ಯಂಕ "ಮಜ್ಗಿ ಕೊಡೆ" ಅಂತ ಕೇಳ್ದ. ಆಗ್ಲೇ ಹುಟ್ಕಂತ್ನೋಡು ಒಂದು ಸಣ್ಣ ಜಗ್ಳ. "ದಿನಾ ಮಜ್ಗಿ ಕೇಳಾಕೆ ನಿಮ್ಮ ಗೊಡ್ಡೆಮ್ಮೆ ಮನಿಯಾಗೆ ಕರೀತಾವಾ? ದಿನಾಸಾಯೋರ್ಗೆ ಯಾರಳ್ತಾರೆ? ಇವತ್ತು ಚಂದಕ್ಕ "ನಿನ್ನೆ ಎಮ್ಮೆ ಒದ್ಕಂತು. ಮಜ್ಗಿಲ್ಲ ಅಂದ್ಲು ಬಸಕ್ಕಬ್ಯಾರೆ" ಅಲ್ಲೇ ರಂಗೀ, ಮೂರ್ನೂ ಗೊಡ್ಡೆಮ್ಮೆ ಕಟ್ಕಂದು ನಿನ್ಗಂಡ ಏನ್ಮಾಡ್ತಾನಂತೆ ? ಅವ್ನ ಕಟುಂಗರಿಗಾದ್ರೂ ಮಾರಿ ಒಂದು ಕರಿಯೋ ಎಮ್ಮೇನ ತರಬಾರ್ದಾ ? ತಾನು ಗಂಡ್ಸಾಗಿ ನೀರು ಮಜ್ಗಿಗೇ ಗತಿಲ್ಲಾಂದ್ರೆ ? ನೀನೂ 'ಕಟ್ಟಿಗೆ' ಹೇಳಂಗಿಲ್ಲ ಈ ಬ್ಯಾಸ್ಗಿ ದಿನ್ದಾಗೆ ಹಾಲ್ಕೊಡೊ ಮನೆ ಎಮ್ಮೆಗಾದ್ರೂ ಮಜ್ಗಿ ಕುಡ್ಸಿದ್ರೆ ಒಂದರ್ಧ ಪಾವು ಹಾಲ್ನ ಹೆಚ್ಚಾದ್ರೂ ಕೊಡ್ತಾವೆ. ಎಲ್ಲಾ ಮುಸ್ರಿ ಬಾನಿಗೆ ಹೊಯ್ಯಿ. ಇನ್ಮುಂದೆ ಯಾರ್ಗೂ ಮಜ್ಗಿ ಕೊಡೋದು ಬ್ಯಾಡಾಂತ–ಯಜ್ಮಾನ್ರು ಗದರ್ಸಿ ಬಿಟ್ಟಿದ್ದಾರೆ. ಇಲ್ಲವ್ವ ಮಜ್ಗಿ" ಅಂತ ಮಕಕ್ಕೆ ಮಂಗ್ಳಾರ್ತಿ ಎತ್ತಿದ್ಹಂಗೆ ಅಂದ್ಬಿಟ್ಲು" ಅಂತ ರಂಗವ್ವ ಸಣ್ಣಕ್ಕೆ ಅಳ್ತಾ ಕಣ್ಣೊರಸ್ಕಂದ್ಲು.

## ಅಳಿಯನ ಕುಲ್ಡು ಬೆಳ್ಗಾಗೊ ತಂಕ

ಮಬ್ಗತ್ಲ ಕವ್ಕಳ್ಳೊ ಹೊತ್ನಾಗೆ ಮಲ್ಲ ಅನ್ನೋನು ಹೆಂಡ್ತಿ ಊರಿಗ್ಬಂದ· ಹೆಂಡ್ತಿ ಮನ್ಗೆ ಬರ್ತಾ ಎತ್ಲಾಗೆ ನೋಡ್ತಾ ಬಂದ್ನೋ ಏನೋ ? ಮನೆ ಮುಂದ್ಲ ಹಗೇವ್ನ ಹೊಸ ಜ್ವಾಳ ತುಂಬಾಕೆ ತಗ್ದಿದ್ರು. ಅದ್ರಾಗೆ 'ದಢಮ್ಮಂತ' ಬಿದ್ಬಿಟ್ಟ. "ಅಯ್ಯಪ್ಪೋ, ಯಾರದಿರ್ರೋ? ಒಂದೇಣಿ ತಂಬರ್ರ್ಯೋ" ಅಂತ ಕೂಗಾಡಾಕ್ಹತ್ತಿದ. ಅಸ್ಟೊತ್ತಿಗೆ ನೀರು ತರಾಕೆ ಬಾವಿಗೆ ಹೋಗಿದ್ದ ಹೆಂಡ್ತಿ ಗಿರ್ಜವ್ವ, ಕ್ವಡಾನ ಹೊತ್ಕಂದು ಬರ್ತಿದ್ಲು. ಹಗೇವ್ದಾಗಿನ ಗಂಡ್ನ ಕೂಗಾಟಕೇಳಿ, ಸರ್ನೆ ಕ್ವಡ್ವಾನ ಇಳ್ಸಿ "ಯಾಕೆ ? ಏನಾತು ?" ಅಂತ ಗಡಗಡಾ ನಡುಗ್ತಾ ಕೇಳಿದ್ಲು. "ಏನಿಲ್ಲಕಣೇ, ಇಂತದ್ದೇ ಒಂದು ಹಗೇವ್ನ ತೋಡ್ಸಾನಾಂತ ಅಳ್ತಿ ಮಾಡ್ಕಳ್ಳಾಕೆ ಇಳ್ದೆ. ಅಳ್ತೀನೋ ಆತು. ಹತ್ತಾಕೇ ಬರಂಗಿಲ್ಲ. ಗಡಾ ಏಣಿ ತಗಂಬಾ" ಅಂತ ಹೇಳ್ದ. ಹೌದೇನೋ ಅದ್ಕಂದ ಗಿರ್ಜವ್ವ ಸಟ್ನೆ ಒಳಗ್ಹೋಗಿ ಭರ್ನೆ ಏಣಿತಂದು ಹಗೇವ್ದಾಗೆ ಇಳಿಬಿಟ್ಲು. ಹತ್ಬಂದ ಮಲ್ಲ ಹೆಂಡ್ತಿ ತಂದ್ಕೊಟ್ಟ ಚೆಂಬ್ನ ಇಸ್ಕಂದು ಕೈ ಕಾಲು ಮಕ ತೊಳ್ಕಂದು ಕ್ವಾಣಿ ಸೇರ್ಕಂದ. ಮಬ್ಗತ್ಲ ರೊಟ್ಟಿ ಸುಡೊ ಹಂಚಂಗಾತು.

ರಾತ್ರಿ ಉಣ್ಣೋ ಹೊತ್ತಾತು. ಅಳಿಯ ಬಂದದ್ರಿಂದ ಅತ್ತೆ ಸ್ಯಾವ್ಗಿ ಬಸ್ಸಿದ್ಲು. ಸ್ಯಾವ್ಗಿ ನೀಡ್ಕಂದು ಬಂದ ಗಿರಜವ್ವ ಗಂಡನ·ಮುಂದೆ ಗಂಗಾಳ ಇಟ್ಟು ಹಾಲು ಬೆಲ್ಲ ಹಾಕಿ, ತುಪ್ಪ ತರಾಕೆ ಅಡ್ಗಿ ಮನ್ಗೆ ಹೋಗ್ತಿದ್ಲು. ಆಕಿಗೆ ತಲೆ ಬೌಳಿ ಬಂದ್ಹಂಗಾಗಿ "ವಾಂಯ್ಕಂತ" ತಿರಿಸ್ಕಳ್ಳಂಗಾತು. ಹಂಗೇ ಬಚ್ಲು ಮನ್ಗೆ ಓಡಿದ್ಲು. "ಮಗ್ನು ಈ ತಿಂಗ್ಳು, 'ನೀರೆರ್ಕಳ್ಳಾಕಾಗಿಲ್ಲ' ಅಂತ ನೆಂಪು ಬಂದು ಬಾಳ ಕುಸಿಯಾತು ಯಲ್ಲವ್ವ್ಗೆ. ಅದೇ ಕುಸಿಯಾಗೆ ಅಳಿಯನ್ಗೆ ತಾನೇ ತುಪ್ಪ ಹಾಕಾನಾಂತ ತುಪ್ಪದ ಗಿಂಡಿ ತಗಂಡ್ಬಂದು 'ಜೊರ್' ಅನ್ನಂಗೆ ತುಪ್ಪ ಬಿಡಾಕೂ ಗೆಜ್ಜೆ ಕಟ್ಟಿದ ಸಾಕಿದ ಬೆಕ್ಕು 'ಮ್ಯಾಂವಂತು'. ಬೆಕ್ಕೇ ಗಂಗಾಳ ನೆಕ್ಯಾಕೆ ಬಂತೂಂತ ತಿಳ್ಕಂದ ಮಲ್ಲ, ಎಂಜ್ಲು ಕೈಯಾಗೇ ಹೊಡಿಯಾಕೆ ಬೀಸ್ದ. ಹೊಡ್ತ ಬೆಕ್ಕಿಗೆ ಬೀಳ್ಲಿಲ್ಲ.ಅತ್ತೆ ಕೈಯ್ಗೇ 'ರಪ್ಪಂತ' ಬಿತ್ತು. ಅಕಿ ಕೈಯಾಗ್ನ ತುಪ್ಪದ್ಗಿಂಡಿ 'ಟಣ್ಣಂತ' ಬಿದ್ಬಿಡ್ತು. ಯಲ್ಲವ್ವ ದಿಗಿಲ್ಬಿದ್ದು 'ಅವ್ವಾ' ಅಂತ ಸಣ್ಣಗೆ ನಳ್ಳಿದ್ಲು. ಇದ್ನ ನೋಡ್ದ ಗಿರ್ಜವ್ವ ಬಿರ್ನೆ ಗಂಡ್ನ ಹತ್ರ ಬಂದು "ಹಿಂಗ್ಯಾಕೆ ಹೊಡೆದ್ರಿ ಅವ್ನ ಕೈಯ್ಗೆ ?" ಅಂತ ಸಿಟ್ನಿಂದ 'ಕೇಳಿದ್ಲು. ತಪ್ಪು ಮಾಡ್ದೋನಂಗೆ "ಬೆಕ್ಕೂಂತ ತಿಳ್ಕಂದು ಹಿಂಗೆ ಹೊಡ್ದೆ ಕಣೇ" ಅಂದ ಮಲ್ಲ. "ಕುಲ್ಡ್ರು ಹಿಂಗೆ ಮಾಡಾಕಿಲ್ಲ ಬಿಡು" ಅಂತ ಮತ್ತೆ ಹಂಗಿಸಿದ್ಲು. "ಯಾದೋಗ್ಯಾನ್ದಾಗೆ ಉಣ್ತಿದ್ದೆ ಕಣೇ,ತಪ್ಪಾಯ್ತು" ಅಂತ ಒಪ್ಕಂದು, ಹೆಂಡ್ತಿ ನೀಡ್ದ ಅನ್ನಾನ ಸುರ್ಕಂದ್ಹಂಗೆ ಮುಗ್ಸಿದ ಅಸ್ಟಕೇ ಅದು ಮುಗೀತು.

ರಾತ್ರಿ ಒಂದು ಹೊತ್ನಾಗೆ 'ಒಂದಾ' ಮಾಡ್ಹಂಗಾತು ಮಲ್ಲಕೆ ಎದ್ದು ಹೊರ ಗ್ಹೋದ. 'ಒಂದಾ' ಮಾಡಿ, ತಡವರಿಸ್ತಾ ಬಂದು, ಕ್ವಾಣಿಹೊಕ್ಕ ದಪ್ಪಂತ ಬಿದ್ಬಿಟ್ಟ. "ಬಿಮ್ಮಗ್ನಿ ಮಗ್ನೇ, ಕಾಣ್ದೆ ಬಂದು ಬಿದ್ದೊಂತ ತಿಳ್ಕಂದು "ಅಯ್ಯಯ್ಯೋ ಯಾಕೇ, ಏನಾತೇ ಗಿರ್ಜವ್ವ" ಅಂತ ಯಲ್ಲವ್ವ ಕರ್ದದ್ದು ಗಿರ್ಜವ್ಗೆ ಕೇಳ್ಲೇ ಇಲ್ಲ. "ನಾನು ತಡ ವರಿಸ್ತಾ ಬಂದು ಹೊಕ್ಕದ್ದು ಅತ್ತೆ ಕ್ವಾಣಿಗೆ; ಬಿದ್ದದ್ದು ಅತ್ತೆ ಕಾಲಮ್ಯಾಲೆ" ಅಂತ ಗೊತ್ತಾಗಿ "ನಾನತ್ತೆ, ನಾನು ಮಲ್ಲ ನಿನ್ಗೆ ರಾತ್ರಿ ಬೆಕ್ಕೂಂತ ಹೊಡೆದ್ಬಿಟ್ನಿಲ್ಲಾ, ಅದು ತಪ್ಪಾತು ಅಂತ ಕಾಲು ಹಿಡ್ಕಳ್ಳಾಕೆ ಬಂದೆ" ಅಂತ ಪಿಲಾನ್ ಮಾತಾಡ್ದ. "ಅಯ್, ಅದೇನ್ತಪ್ಪಾ ? ತಪ್ಪೂಂತ ನಾನ್ಯಾಕೆ ತಿಳ್ಕಳ್ಲಿ. ಹೋಗಪ್ಪಾ, ಮಲಕ್ಯಾ ಹೋಗು" ಅಂತ ಅತ್ತೆ ಹೇಳಿದ್ಲು. "ಏನ್ನೂ ತಿಳ್ಕಂದಿಲ್ಲಾಂತ ಅನ್ನಾದಾದ್ರೆ, ನನ್ನ ಅಕಿ ಕ್ವಾಣಿಗೆ ಕರ್ಕಂದ್ಹೋಗ್ಮತ್ತೆ!" ಅಂತ ಸಣ್ಣ ·ಹುಡುಗ್ರಂಗೆ ಗ್ವಾಗಾರ್ದ ಮಲ್ಲ. ಮಗ್ಳ ಕ್ವಾಣಿಗೆ ಅಳಿಯನ್ನ ಬಿಟ್ಟು ತನ್ನ ಕ್ವಾಣಿಗೆ ಬಂದ ಯಲ್ಲವ್ವ "ಉಸ್ಸಪ್ಪಾ, ದೇವ್ರೇ" ಅಂತ ತಲೆಮ್ಯಾಲೆ ಕೈಹೊತ್ಕಂದು ಕುಂತ್ಲು. "ಯಲ್ಲವ್ನ ಅಳಿಯ ಕತ್ಲು ಕುಲ್ಡನಂತೆ. ಬೆಳ್ಗಾಗೊತಂಕ ಕಣ್ಣೇ ಕಾಣ್ಸಾದಿಲ್ಲಂತೆ !" ಅಂತ ಅವ್ರಿವ್ರು ಆಡ್ಕಳ್ತಿದ್ದ ಮಾತು ಸತ್ಯಾಂತ ಕಂಡ್ಬಂತು ಯಲ್ಲವ್ವ್ಗೆ ಒಳ್ಳಾಗೆ ತಲೆಹಾಕಿ ಒಣ್ಕೆ ಪೆಟ್ಟಿಗೆ ಹೆದ್ರಿದ್ರೆ ಆಗ್ತಾತ ?" ಅಂತ ಗಟ್ಟಿ ಮನಸ್ಮಾಡ್ಕಂದ್ಲು ಯಲ್ಲವ್ವ.

## ಮೂಳರ ಪಂತ ಮೂರಾಬಟ್ಟೆ

ಒಂದೂರ್ನಾಗೆ ಮೂವರು ಮೂಳ್ರಿದ್ರು. ಒಬ್ನ ಹೆಸ್ರು ಕಜ್ಜಿ ಬುರ್ಕ ಕಾಳ. ಇನ್ನೊಬ್ನ ಹೆಸ್ರು–ಪಿಚ್ಗಣ್ಣಿನ ಪೀರ್ಸಾಬ. ಮತ್ತೊಬ್ನ ಹೆಸ್ರು ಸಿಂಬಳ್ಳ ಬುರ್ಕ ಸಿದ್ನ.

ಪುರ್ಸತ್ತಿಲ್ದಂಗೆ ಪರಪರಾಂತ ಹುರ್ಕು ಹತ್ದ ಮೈಕೈಯ್ನ ಕೆರ್ಕಂತಾ ಇರೋದೇ ಕಾಳ್ನ ಕಸ್ಬು. ಕೆರ್ಕಂದು ಕೆರ್ಕಂದು, ಅವ್ನ ಮೈಕೈ ಹಾವ್ನ ಹಳೆಪರೆಯ್ದಂಗೆ ಕಾಣ್ತಿದ್ವು.

ಪೀರ್ಸಾಬಂದು ಇನ್ನೊಂದ್ತರ. ಅವ್ನ ಎಲ್ಡೂ ಕಣ್ಕುಣಿಗ್ಯಾಗೆ ಗಜ್ಗದ ಗಾತ್ರದ ಪಿಚ್ಚು ಕಟ್ಕಂದಿರೋದು. ಅದ್ಕೆ ದಂಡು ಕಟ್ಕಂದು ಗುಂಗಾರ ಮುತ್ರುತಿದ್ವು. ಎಲ್ಡೂ ಕೈ ಇಂದ ಚಪ್ಪಿಕೆ ಹೊಡ್ಕಂತಾ ಗುಂಗಾರ ಕೊಂದ್ರೇ ಅವನ್ಗೆ ಉಂಡ್ಹಾಂಗಾಗ್ತಿತ್ತು.

ಸಿಂಬ್ಳ ಬುರ್ಕ ಸಿದ್ದಂದು ಮತ್ತೊಂದ್ತರ. ಅವ್ನ ಮೂಗಿನ ಸೊಳ್ಳ್ಯಾಗೆ ಯಾವಾಗ್ಲೂ ಸಿಂಬ್ಳ ಹಣ್ಕಿ ಹಣ್ಕಿ ನೋಡ್ತಿತ್ತು. ಅದ್ನ ಒರಸ್ಕಳ್ಳಾದ್ನ ಮರತ್ರೆ, ಅದು ತುಟಿಹತ್ತಿ ಬಾಯಾಗೇ ಹೊಕ್ಬಿಡ್ತಿತ್ತು. ಅದ್ರಿಂದ ಅವ್ನು ಎಡ್ಗೈಯ್ನ ಬಲ್ಗಡೆಗೂ, ಬಲ್ಗೈಯ್ನ ಎಡ್ಗಡೆಗೂ ಮತ್ಮತ್ತೆ ಒರಸ್ಕಂತಿದ್ದ. ಹಿಂಗಾಗಿ, ಅವ್ನ ಮೂಗಿಸ್ಕಂಬ, ಮೂಗಿನ ಕೆಳಾಗೆ ಯಾವತ್ಲೂ ಸೆಲ್ತಂಗಿರ್ತಿತ್ತು. ಬೂದಿ ಬಣ್ಣದ ಮೀಸೆ ಬರ್ಕಂಡ್ಹಂಗೆ, ಒಣಗ್ದ ಸಿಂಬ್ಳದ ಪಟ್ಟೆ ಕಾಣಿಸ್ತಿದ್ವು. ಮರೀದೇ ಒರಸ್ಕಂತಾ ಇರೋದೇ ಅವ್ನ ದೊಡ್ಡ ಕಸ್ಬು.

ಇಂತವ್ರು ಕೈಯ್ನಾಗೆ ಕೆಲ್ಸ ಮಾಡಿಸ್ಕಳ್ಳಾಕೆ ಮನೆಯವ್ರೇ ಹೇಸ್ಗಿ ಪಟ್ಕಂದು ಯಾವ ಕೆಲ್ಸಾನೂ ಹೇಳ್ತಿರ್ಲಿಲ್ಲ. ಈ ಸವ್ಲತ್ತು ತೂಗಡ್ಕಿ ಬಂದೋರ್ಗೆ 'ಮಲಗ್ರಿ' ಅಂತ ಹಾಸ್ಕಿ ಹಾಸ್ಕೊಟ್ಟಂಗಾತು. ಹಿಂಗಾದ್ರಿಂದ ಅವ್ರು ಉಂಡಾಡಿ ಗುಂಡ್ರಾದ್ರು.

ಇಂತೋರು ಒಂದ್ಸಾರಿ ಒಂದ್ಪಂತ ಕಟ್ಕಂದ್ರು. ಅದೇನಪಾ ಅಂದ್ರೆ–ಸಾವ್ರತಂಕ ಎಣ್ಸೋವರ್ಗೂ ಯಾರೂ ಅಲಾಡ್ದೆ ಕಲ್ಲ್ಹಂಗೆ ಕುಂತ್ಕಬೇಕು. ಯಾರು ಮದ್ಲು ಮಿಸ್ಕಾಡ್ತಾನೋ ಅವ್ನು ಸೇರು ಕೊಬ್ರಿ, ಸೇರು ಉತ್ತುತ್ತೀನ ದಂಡಾಂತ ತೆರ್ಬೇಕು. ಸರಿ ಮೂವರೂ ಒಪ್ಕಂದು ಊರ ಮುಂದ್ಲ ಹೊಂಡದ್ಹತ್ರ ಕುಂತ್ರು.

ಅಸ್ಹಂಗಿಲ್ಲ, ಅಸ್ಬೋಸಂಗಿಲ್ಲ. ಇನ್ನೂರು ಎಣ್ಸೋದ್ರಾಗೇ ಮುವರ್ಗೂ ಪೀಕ್ಲಾಟ ತಿಮಿಯಾಕ್ಹತ್ತಿದ್ವು. ಕಜ್ಜಿ ಬುರ್ಕ ಕಾಳ್ಗೆ ಸಂದಿ ಮೂಲ್ಯಾಗೆಲ್ಲಾ ಉಚ್ಚೆ ಹೊಯ್ಕಳ್ಳಂಗೆ ಕೆರ್ತನೋ ಕೆರ್ತ.

ಪಿಚ್ಗಣ್ಣಿನ ಪೀರ್ಸಾಬನ ಪಜೀತೀನೋ, ಅದು ಇನ್ನೊಂದ್ತರ. ಎಲ್ಲಾ ಸೀಪೀ ಒಗ್ದ ಮಾವಿನ ವಾಟೆಮ್ಯಾಲೆ ನೊಣ ಮುತ್ತುತಾವಲ್ಲ ಹಂಗೆ ಅವ್ನ ಎಲ್ಡೂ ಕಣ್ಣಾಗೂ ಗುಂಗಾರ ಕುಂತಿದ್ವಲ್ದೆ ಮೂಗ್ನಾಗೂ ಹೊಕ್ಕು ಬರ್ತಿದ್ವು.

ಸಿಂಬ್ಳ ಬುರ್ಕ ಸಿದ್ದನ ಪಜೀತೀನೊ ? ಹೇಳ್ಬಾರ್ದಪಾ ಅದ್ನ ! ಮೂಗ್ನ ಎಲ್ಡೂ ಸೊಳ್ಳಿಂದ ಗೊಣ್ಣೆ ಹುಳ್ದಂಗೆ ತೆವ್ಳಿ, ತೆವ್ಳಿ ಬಂದ ಸಿಂಬ್ಳ, ಒಡ್ಡಿನ್ಹಂಗೆ ತಡ್ದಿದ್ದ ತುಟೀನ್ನೂ ತುಂಬ್ಕಂದಿತ್ತು. ತುಟಿ ಎಲ್ಡು ಮಾಡಿದ್ರೆ ಸಾಕು, ಬಾಯಾಗೇ ನುಗ್ಗಂಗಿತ್ತು.

ಹಿಂಗಿರ್ಬಾಗ, ಚಟಕ್ನೆ ಎದ್ದ ಕಾಳ ಕುಣ್ದಾಡ್ತಾ "ಹಾ ಎಂಥಾ ನೆಂಪು ! ಆಹಾ ಎಂಥಾ ನೆಂಪು! ನೋಡ್ರೋ ಒಂದ್ಸಲ. ಬಲ್ಮುರಿ ಸಂತಿಗೆ ಹೋಗಿದ್ದೆ. ಅಲ್ಲಿ ಒಂದಾಣಿಗೆ ನಾಕು ಬಾಳೆಹಣ್ಣು. ಇಸ್ಟಿಸ್ಟು ದಪ್ಪ. ಇಸ್ಟಿಸ್ಟು ದಪ್ಪಾ" ಅಂತ ತನ್ನ ಎಲೂ ಮುಂಗೈಯ್ನ , ತೋಳಿನ ಕೆರ್ತಾನ ನಚ್ಚಾಗಂಗೆ ಉಜ್ಕಂದು ನಗಾಕ್ಹತ್ತಿದ. ಪೀರ್ಸಾಬ ಅದೇನೋ ಫಳ್ಳನೆ ಹೊಳ್ದಂಗೆ "ಹೌದ್ಕಣೊ ಹೌದು. ಅಂಥ ಬಾಳೆಹಣ್ಣು ಎಲ್ಲೂ ಸಿಕ್ಕಾಕಿಲ್ಲ. ಅಲೆಲೆಲೇ ಅದೇನ್ರುಚಿ ? ನಾನು ತಿಂದೇನಿ" ಅಂತ 'ಪಟ್ ಪಟ್' ಅಂತ ಎಲ್ಡೂ ಕೈಯ್ಯಾಗೆ ಚಪ್ಪಿಕೆ ಹೊಡ್ದು, ಗುಂಗಾರಾನ ಹೊಸ್ದು ಹಾಕ್ದ.

ಸಿದ್ನೇನು ಕಡ್ಮೆ ಅಂತೀ ? ಅವನ್ನೂ ಒಂದು ಪಿಲಾನು ಹೊಳ್ದು "ಬಲ್ಮುರಿ ಅತ್ಲಾಗೈತೋ ಇತ್ಲಾಗೈತೋ" ಅಂತ ಸಿಂಬ್ಳದ ಕೋಡೀನ್ನ ಎಡ್ಬಲಕ್ಕೆ ಹರಿಸ್ದಂಗೆ ಒರಸ್ಕಂದ. ಒರಸ್ಕಂಡೋನೇ–"ನೀವಿಬ್ರೂ ಸೋತ್ಹಂಗೇ ಕಣ್ರೋ. ಮಾತಾಡ್ದಂಗೆ ದಂಡ ಕಕ್ರೋ" ಅಂದ ಅದ್ಕೆ ಕಾಳ "ನೀನೂ ಸೋತ್ಹಂಗೇ ಅಲ್ಲೇನ್ಲಾ ? ಸಾವ್ರ ಎಣ್ಸೋತಂಕ ಸುಮ್ಕೇ ಕುಂತ್ಕಬೇಕಿತ್ತು ? ನೋಡಪಾ ಈ ಪಂತ ಕಟ್ಕಂದು ಮುವರೂ ಸೋತ್ಹಂಗೇ ಆಗೇತಿ ಅದೇನೋ ಹೇಳ್ತಾರಲ್ಲ–ಹೇಲಾಟ ಹತ್ತಿದೋನು ಹೆಂಡ್ತಿ ಮನ್ಗೆ ಹೋಗ್ಬಾರ್ದಂತ ಹಂಗಾತು ನಂಪಂತ ಹೂಂ,ಬರ್ರ್ಯೋ ಸುಮ್ನೆಮುರ್ಕ್ಯಾ ದಿಂದ ಮನ್ಗೆ ಹೋಗಾನ"ಅಂದ. ಮೂವರೂ ನಗಾಡ್ತಾ ಅವ್ರವ್ರಮನೆ ದಾರಿಹಿಡಿದ್ರು.

# ವೃತ್ತಿ ಕಥೆಗಳು

# ಕಲ್ಲಂಗ್ಡಿ ಕನಸ್ನಾಗೆ ಬುಡೇನ್ ಸಾಬು ಬಡ್ವಾದ

ಒಂದೂರ್ನಾಗೆ ಬುಡೇನ್ಸಾಬು ಅನ್ನೊ ಸಾಬಣ್ಣ ಇದ್ದ. ಕಲ್ಲಂಗ್ಡಿ ಬೀಜ ಊರೋದು, ಬೆಳಿಯೋದು, ಬಂದ್ಧಣ್ಣ ಮಾರೋದು–ಇದೇ ಅವ್ನ ಕಸ್ಬು. ನಾಕಾರ್ತಿಂಗ್ಳು ಹಳ್ಳದ ದಂಡ್ಯಾಗೇ ಅವ್ನ ಸಂಸಾರ. ಉಗಾದಿ ಇಂದ ಉಗಾದಿವರ್ಗೆ, ಕಲ್ಲಂಗ್ಡಿ ಹಣ್ಣಿಂದ ಬಂದ ಲಾಭದಿಂದ್ಲೇ ಅವ್ನು ಮಂತ್ಯಾನ ತೂಗಿಸ್ತಿದ್ದ. ಒಂದೆಲ್ಡು ಚಲೋ ಕಲ್ಲಂಗ್ಡಿ ಬೆಳೆ ಬಂದು ಬುಡೇನ್ಸಾಬನ ಕೈಯಾಗೆ ರೊಕ್ಕ ಓಡಾಡ್ಥಂಗೆ ಮಾಡಿದ್ವು. ಇನ್ನೂ ಪಸಂದಾಗಿ ಕಲ್ಲಂಗ್ಡಿ ಬೆಳ್ದು ರೊಕ್ಕ ಮಾಡೊ ಆಸೆ ಹುಟ್ತು ಬುಡೇನ್ಸಾಬಿಗೆ. ಮುಂದಿನ ಬೆಳೆಗೆ ಇನ್ನೂ ಒಂದೈನೂರು ಗುಣಿ ಹೆಚ್ಚಾಗಿ ಬೀಜ ಊರ್ಬೇಂಕೂಂತ ಯೋಜ್ನೆ ಮಾಡ್ದ.

ಹಿಂಗೆ ಯೋಚ್ನೆ ಮಾಡಿದ್ರೆ ಬೆಳ್ದಂಗಾತ ? ಯೋಚ್ನೆಗೆ ತಕ್ಥಂಗೆ ಹಳ್ಳದ ದಂಡ್ಯಾಗಿನ ಮಳ್ಳನ್ನೆಲ್ಲಾ ಸಮ ಮಾಡ್ಸಿದ. ಗುಣಿ ಮಾಡ್ಸಿ ನಾಕಾರು ಗಾಡಿ ಗೊಬ್ರ ಇಡ್ಸಿದ. ಒಳ್ಳೆ ಜಾತಿ ಬೀಜ ತಂದು ಊರ್ದ. ಹಳೆ ಗುಡಿಸ್ಲು ಕಿತ್ತು ಹೊಸ ಗುಡಿಸ್ಲು ಕಟ್ದ. ಸುತ್ತೂ ಬೇಲಿ ಕಟ್ಸಿದ. ಹಿಂಗಾಗಿ ಕೈಯಾಗ್ನ ಗಂಟೆಲ್ಲಾ ಕರಗ್ತು. ಕಲ್ಲಂಗ್ಡಿ ಬೆಳೆ ಬರೋವರ್ಗೂ ಕಾಲ ತಳ್ಳಾದ್ಥಂಗೆ ಅಂತ ಯೋಚ್ನೆ ಮಾಡ್ಯಾಡಿ ಕಡೆಗೆ ಕೇಳ್ಲೋ ಬ್ಯಾಡ್ಲೋ ಅನ್ನೊ ಅನ್ಮಾನದಿಂದ್ಲೇ ಊರ ಗೌಡನ್ನ ಹತ್ರ ಬಂದು "ಗೌಡ್ರೇ ಕಲ್ಲಂಗ್ಡಿ ಬಂದ್ಮ್ಯಾಕ್ಲೇ ಬಡ್ಡಿ ಸಮೇತ ಕೊಟ್ಬು ಬಿಡ್ತೇನಿ. ಒಂದಿನ್ನೂರು ಸಾಲ ಕೊಡ್ರಿ" ಅಂತ

ಸಾಲ ಕೇಳ್ದ. ಸಾಬಣ್ಣಂತೋರ್ಗೆ ಕೊಡ್ದೆ ಮತ್ತೆಂತೋರ್ಗೆ ಸಾಲ ಕೊಡ್ತಾರೆ ಗೌಡ್ರು ? ಬುಡೇನ್ಸಾಬು ಕೇಳಿದ್ದೇ ತಡ ಸಬೂಬು ಹೇಳ್ದೆ ಆ ಗಳಿಗ್ಯಾಗೇ ಸಾಲಕೊಟ್ರು.

ಕಲ್ಲಂಗ್ಡಿ ಬೀಜ ಊರ್ದ ದಿನ್ದಿಂದ ಹಳ್ಳದ ದಂಡ್ಯಾಗಿನ ಗುಡಿಸ್ಲೆ ಮನೆಯಾತು ಬುಡೇಸ್ಸಾಬುಗೆ. ಉಣ್ಣಾಕೆ ಅಲ್ಗೇ ಬರ್ತಿತ್ತು ಊಟ. ಹಗ್ಲೂ ರಾತ್ರಿ ಕಲ್ಲಂಗ್ಡಿ ಬೆಳೆಯೊ ಚಿಂತೆನೋ ಚಿಂತೆ.

ಕಲ್ಲಂಗ್ಡಿ ಬೀಜ ಯೋಳೆಂಟು ದಿನಕ್ಕೆ ಮಳೆತು ದೊಗ್ಗಾಲ್ಮಂಡಿ ಊರ್ಕಂದು ಮೇಲೆದ್ವು. ಮತ್ತೆಂಟು ದಿನಕ್ಕೆ ಎಲೆ ಬಿಚ್ಚಿದ್ವು. ಮತ್ತೊಂದು ವಾರ್ದಾಗೇ, ಅಂಗೈ ಅಗ್ಲ ಎಲೆಕಿತ್ತು ಕುಡಿ ಚಾಚಿದ್ವು. ಚಲೋ ಗೊಬ್ರ ಇಡ್ಸಿದ್ರಿಂದ ಒಂದ್ವರೆ ತಿಂಗ್ಳೊಳಗೇ ಕಣ್ಣು ಹಸ್ರಾಗಂಗೆ ಬಳ್ಳಿಚಾಪೆ ಹಾಸಿದ್ವು. ಅಲ್ಲಲ್ಲಿ ಹೂವು, ಜತೆ ಜತೆಗೆ ಹೀಚೂ ಕಾಣಿಸ್ಕಂಡಾಗ ಆಕಾಸ್ದಾಗೇ ಹಾರಾಡ್ದಂಗೆ ಸಂತೋಸಾತು ಬುಡೆನ್ಸಾಬುಗೆ. ಇನ್ನಷ್ಟು ದಿನ್ದಾಗೇ ಬಳ್ಳೇ ಕಾಣ್ದಂಗೆ ಸಣ್ಣ ಗಡ್ಗಿ ಕುಂಬದಂಥ ಕಾಯೋ ಕಾಯಿ ! ಸುತ್ತುಮುತ್ತ ಊರೋರೆಲ್ಲಾ ನೋಡಾಕ್ಬಂದು ಕಲ್ಲಂಗ್ಡಿ ಜತೆಗೆ ಸಾಬಣ್ಣನನ್ನು ಹೊಗ್ಳೆದ್ದೇ ಹೊಗ್ಳಿದ್ದು. ಶಿವುಗ್ಗಿ ಇಂದ ಯಾರೋ ಬಂದು ಒಂದು ಬೀಡಿನ ಹಣ್ಣನ್ನು ಎಪ್ಪತ್ತೈದು ರುಪಾಯ್ಗೆ ಕೇಳಿದ್ರಂತೆ ! ಆಗಿನ ಕಾಲ್ದ ಎಪ್ಪತ್ತೈದು ರುಪಾಯಿ ಅಂದ್ರೆ ಈಗ ಇಪ್ಪತ್ತೈದು ಸಾವ್ರಕ್ಕೆ ಸಮ ತಾನೇ–ಶಿವುಗ್ಗಿಗೆ ತಗಂಡ್ಹೋಗಿ ಮಾರ್ತೇನಿ" ಅಂತ ಸಾಬಣ್ಣ ಕೊಡ್ಲಿಲ್ಲ. ಸಾಲ ಕೊಟ್ಟಿದ್ದ ಗೌಡ್ರು ಬಂದು "ಬುಡೇನ್ಸಾಬ್ರೇ, ಮಳೆ ಮಾರಿನ ದಿನ ಬಂದ್ವು. ಅತ್ಲಾಗೆ ಕೊಟ್ಬುಬಿಡ್ಬಾರ್ದಾ" ಅಂತ ಹೇಳಿದ್ರು. "ಗೌಡ್ರೇ ನಾನು ಬೆಳ್ದದ್ದನ್ನ ನಾನೇ ಮಾರ್ಬೇಕೊಂತ ಆಸ್ಯೆತೆ" ಅಂತ ಸಾಬಣ್ಣ ಅಂದ ಗೌಡ್ರು ಸುಮ್ನಾದ್ರು.

ಅವತ್ತು ಆಯತ್ವಾರ. ಮುಂದಿನ ಆಯತ್ವಾರ ಹಣ್ಕೆತ್ತು, ಸ್ವಾಮಾರ ಶಿವುಗ್ಗಿಗೆ ಸಾಗಿಸ್ಬೇಕೊಂತ ಗುಡಿಸ್ಲಾಗೇ ಮಲ್ಗಿದ್ದ ಬುಡೇನ್ಸಾಬು ತೀರ್ಮಾನ ಮಾಡ್ದ. ಕತ್ಲೂ ಅಂದ್ರೆ ಕತ್ಲು. ಏನೇನೋ ಹುಚ್ಚಾಸೆ, ಹುಚ್ಚು ಕನ್ಸು ಸಾಬಣ್ಣಗೆ. ಮದ್ಲು ಗೌಡ್ರ ಸಾಲಾನ ತೀರಿಸ್ಬೇಕು ! ಬೂಬಿಗೆ, ಮಕ್ಳಿಗೆ ಒಳ್ಳೊಳ್ಳೆ ಬಟ್ಟೆ ಬರೆ ತರ್ಬೇಕು. ನಾಕ್ಜನ ಹೌದು ಅನ್ನಂಗೆ ಮನೇನ ಸರಿ ಮಾಡಿಸ್ಬೇಕು. ಕುಂತ್ಕಳ್ಳಾಕೆ ಕುರ್ಚಿ, ಮಲಕ್ಕಳ್ಳಾಕೆ ಮಂಚ... ಹಿಂಗೇ ಯೋಚ್ನೆ ಮಾಡ್ತಾ ಮಾಡ್ತಾ ನಿದ್ದತ್ತು ಬುಡೇನಣ್ಣಗೆ ಎಚ್ರ ಆದದ್ದು, ಮೂಡ್ಗಡೆ ಗುಡುಗು ಗದರಿಸ್ಕಂಡಾಗ್ಲೇ. ಚಟ್ನೆ ಎದ್ದ, ಪಕ್ದಾಗೇ ಮಕ್ಕಂ ದಿದ್ದ ಆಳುಗಳ್ನ ತಟ್ಟಿ ಎಬ್ಬಿಸ್ದ. ಹೊರ್ಗಡೆ ಬಂದು ನೋಡ್ತಾನೆ–ಗೋಲಿಗಾತ್ರದ ಮಳೆ ಹನಿ ಉದುರ್ತಾ ಐತಿ ! ಅರೆ ಅಲ್ಲಾಂತ ಬಾಯ್ಬಾಯಿ, ಎದೆ ಎದೆ ಬಡ್ಕಂದ ಸಾಬಣ್ಣ. ಆಳುಗಳ್ನ ಕರ್ಕಂದು ಕತ್ಲದಾಗೇ ಕೈಸಿಕ್ಕ ದೊಡ್ಡ ದೊಡ್ಡ ಹಣ್ಣುಗಳ್ನ ಕೀಳಾಕ್ಹತ್ತಿದ.



ಮಳೆ ಎಷ್ಟು ಜೋರಾತೂಂದ್ರೆ–ಮುಗ್ಲೇ ಹರ್ಕಂದು ಬಿದ್ದಂಗೆ ಬಾರ್ಸಾಕ್ಹತ್ತು. ಗುಡ್ಗು ಸಿಡ್ಲು ಮಿಂಚು ಬ್ಯಾರೆ. ಭೋರಂತ ಮ್ಯಾಗ್ನಿಂದ ಹಳ್ಳಾನೂ ಬಂತು. ಕಲ್ಲಂಗ್ಡಿ ತ್ವಾಟ ಉಳೀಲಿ ಅಂದ್ರೆ ಹೆಂಗೆ ಉಳ್ದೀತು ? ಪಾಪ, ಸಾಬಣ್ಣನ ಆಸೆ, ಕನ್ಸು, ಎಲ್ಲಾ ಕಲ್ಲಂಗ್ಡಿ ಜತೆಯಾಗೇ ತೇಲಿಹೋದ್ವು.

## ಬೆಲ್ದೋನು ಬಾಯ್ಬಾಯ್ ಬಡ್ಕಂಡ್ರೆ, ತೆಂಗಿನ್ಕಾಯ್ನೋನು ತಲೆ ತಲೆ ಹೊಡ್ಕಂಡ

ಊರೂಂದ್ರೆ ಊರಲ್ಲ, ಪ್ಯಾಟೆ ಅಂದ್ರೆ ಪ್ಯಾಟ್ಯಲ್ಲ. ಅಂಥದ್ದೊಂದು ಊರ್ನಾಗೆ ವಾರಾ ನಡ್ವಂಗೆ ಉಗಾದಿ ಸಂತೆ ಸೇರ್ತು. ಉಗಾದಿ ಸಂತೆ ಅಂದ್ರೆ ಕೇಳ್ಬೇಕಾ ? ಹಿಂದಿನ ಎಲ್ಲಾ ಸಂತ್ಗಿಂತ ಭಾರೀ ದೊಡ್ಡಾಗಿ ಸೇರ್ತು. ನೆಲ್ಲಕ್ಕಿ, ಬೆಲ್ಲ,ಬ್ಯಾಳೆ,ಹಣ್ಣು, ಕಾಯಿ– ಹಿಂಗೇ ಹಬ್ಬಕ್ಕೇನೇನು ಬೇಕೋ ಅವೆಲ್ಲಾ, ನೋಡಾಕೆ ಎಲ್ಡು ಕಣ್ಣು ಸಾಲ್ದು ಅನ್ನಂಗೆ ಸಂತೆಗೆ ಬಂದು ಬಿದ್ದಿದ್ವು. ಜೈಗಾತು ಅಂದ್ಹಂಗೆಲ್ಲಾ, ಸಂತೆಯಾಪಾರ ರಂಗೇರ್ತು. ಎಲ್ಲಿತ್ತೋ ನೋಡು ಮಾಯ್ದ ಮುಂಗಾರ್ಮಳೆ ಸಂತೆ ಮ್ಯಾಲೆ ಮುಗಿ ಬಿದ್ಹಂಗೆ ಹಕ್ಕಂದು ಬಾರ್ಸಾಕ್ಹತ್ತು. ಹಬ್ಬದ ಸಾಮಾನು ಕೊಂಡೋರೆಲ್ಲಾ ಚೀಲ, ಪುಟ್ಟಿ ಹೊತ್ಕಂದು ಮರ್ದ ಕೆಳಾಗೆ, ಮನೆ ಕಟ್ಟೆ ಮ್ಯಾಲೆ, ಮರೆ ಎಲ್ಲೈತೋ ಅಲ್ಲಿ ಬೆದರ್ದ ಕುರಿ ಹಿಂಡು ಸೇರ್ಕಂದ್ಹಂಗೆ ಸೇರ್ಕಂದ್ರು.

ಇತ್ಲಾಗೆ, ಸಂತ್ಯಾಗ್ನ ಅಂಗ್ಡಿ ಸಾವ್ಕಾರ್ರ ಗೋಳೋ ಗೋಳು. ಸುಂಟ್ರಗಾಳಿ ಹೊಡ್ತಕ್ಕೆ ಅಂಗ್ಡಿ ಹಚ್ಡ, ಗಾಳಿ ಪಟ್ದಂಗೆ ಹಾರ್ಕಂದ್ಹೋದ್ವು. ನಾನು ನೀನು ಅನ್ನೋದ್ರಾಗೇ ಸಂತೆ ತುಂಬೆಲ್ಲಾ ನೀರೋ ನೀರು ಒಂದ್ಕಡೆ ಬೆಲ್ದೋನು "ಅಯಯ್ಯೋ ...ಯಾರಾದ್ರೂ ಕಂಬ್ಳಿ ತರ್ರ್ಯಪ್ಪಾ, ಪುಣ್ಯ" ಅಂತ ಬಾಯ್ಬಾಯಿಬಡ್ಕಂತಿದ್ದ. ಇನ್ನೊಂದ್ಕಡೆ ತೆಂಗಿನ್ಕಾಯ್ನೋನು "ಅಯ್ಯಯ್ಯೋ, ನನ ತೆಂಗಿನ್ಕಾಯಿ ತೇಲ್ಹೋಗ್ತಾವಪ್ಪಾ, ಹಿಡ್ಕಳ್ರಪ್ಪಾ" ಅಂತ ತಲೆ ತಲೆ ಹೊಡ್ಕಂತಿದ್ದ. ಯಾರ್ಹೋಗ್ತಾರೆ ? ಯಾರ್ಯಾರ ಎಷ್ಟೆಷ್ಟು ಸೀಸ ಒಡ್ಕಂದಿದ್ವೋ ? ಕೊಂಡ ಸಾಮಾನು ನೆನ್ದಿದ್ವೋ ? ಮಳೆ ಬಾರಿಸ್ತಾನೇ ಇತ್ತು. ಬೆಲ್ದೋನು ಬಾಯ್ಬಾಯಿ ಬಡ್ಕಂತ್ಲೇ ಇದ್ದ. ತೆಂಗಿನ್ಕಾಯ್ನೋನು ತಲೆತಲೆ ಹೊಡ್ಕಂತ್ಲೇ ಇದ್ದ. ಎಲ್ರೂ ಸಂಕ್ಟದಾಗೇ ಇರ್ಬಾಗ, ಅವ್ರವ್ರ ಸಂಕ್ಟದ ಭಾರ ಅವರವ್ರಿಗೇ ಅಂತ ಹೇಳ್ದಂಗಾತು ಆ ಸಂತೆ.

## ನೀರಾಗಿದ್ದ ಅಗ್ಸ ನೀರಡಿಸಿ ಸತ್ತಂಗೆ

ಹಿಂಗೇ, ಬಿಜೇ ಗಟ್ಟಿ, ಗಡೀ ಕಟ್ಟೆ, ಗಂಗನ ಕ್ವಾಟೆ ಅಂದ್ಹಂಗೆ ಒಂದೂರು. ಆ ಊರ್ನಾಗೆ ಒಬ್ಬ ಅಗಸ್ರೋನು ಇದ್ದ. ಹಬ್ಬ ಹುಣ್ಮೆ ಬಂದ್ಬ್ಯಾಂದ್ರೆ, ಮನೆಗೊಂದು ಗಂಟು ಬಟ್ಟೇನ ಒಗ್ದು ಕೊಡ್ತಿದ್ದ. ಯಾವ್ದೋ ಒಂದ್ಹಬ್ಬ ಬಂದಾಗ ಎಲ್ಲಾ ಮನೆ ಬಟ್ಟೆ ಗಂಟುಗಳ್ನ ಕೆರೆಗೆ ಹೊತ್ಕಂದ್ಹೋದ. ಬಟ್ಟೆ ಗಂಟುಗಳ್ನ ನೋಡಿ ಅಗ್ಸಪ್ಪ "ಈ ಸಾರೀನ ಗಂಟ್ಗಳು ಬಾಳ ದೊಡ್ಕಿವೆ. ಇಸ್ಟಾಕಂದು ಬಟ್ಟೇನ ಒಗ್ದು ಒಣ್ಹಾಕೋದು ಹೆಂಗಪ್ಪಾ ?" ಅಂತ ಹೆದರ್ಕಿನೇ ಆತು. ಆದ್ರೂ ರಾಟೆ ತಿರಿವಾಡ್ದಂಗೆ ಒಗೆಯೋದು ಒಣ್ಹಾಕೋದು, ಒಗೆಯೋದು, ಒಣ್ಹಾಕೋದು ಮಾಡ್ತಿದ್ದ. ಕೆರೆಅಂಗ್ಳದ ತುಂಬೆಲ್ಲಾ ಬಟ್ಟೇನೋ ಬಟ್ಟೆ !

ಒಗೆಯೋದು ಅರ್ಧ ಆದ್ಮ್ಯಾಲೆ ಬಾಯಾರಿಸ್ತು. ಆದ್ರೂ ನೀರ್ಕುಡೀಲಿಲ್ಲ. "ಎಲ್ಲಾ ಒಗ್ದೇ ನೀರ್ಕುಡ್ದು ಬೀಡಿ ಸೇದ್ಬೇಕು" ಅಂತ ಪಟ್ಹಿಡ್ದು ಒಗೆಯಾಕ್ಹತ್ತಿದ. ಒಂದೊಂದ್ಬಟ್ಟೆ ಒಗ್ದಂಗೆಲ್ಲಾ ಬಾಯಾರ್ಕೆ ಹೆಚ್ತಾನೇ ಹೋತು. ಬಾಯಿ, ಗಂಟ್ಲು ಒಣಗಿದ್ರೂ ಎಲ್ಲಾ ಮುಗ್ಸೇ ನೀರ್ಕುಡಿಯೋದು" ಅಂತ ಹಟ ತೊಟ್ಟು ಒಗೆಯಾಕ್ಹತ್ತಿದ. ಒಗ್ದಾ ಒಗ್ದಾ ಒಗೀತಾನೇ ಇದ್ದ. ಕಡೆಗೆ ತಲೆ ತಿರ್ಗಿ ದುಢುಮ್ಮಂತ ನೀರಾಗ್ಬಿದ್ದು, ಜೀವಜಂಚ್ಲಾದ್ಹಂಗಾಗಿ ಸತ್ಹೋದ್ನಂತೆ.

## ರಡ್ಡಿ ಅಂದ್ರೆ ಬಂಗಾರ್ದ ಕಡ್ಡೀ ಅಂತ

ಒಬ್ಬ ರಡ್ಡೇರ ಹುಡ್ಗ ಮದ್ವಿ ಮಾಡ್ಕಂದು ಮಾವನ ಮನೆಯಾಗೆ ಹಳ್ಳೂಟು ಉಣ್ತಿದ್ನಂತೆ. ಅವತ್ತು ಮಾವ ಊರಾಗಿರ್ಲಿಲ್ಲ. ಆ ರಾತ್ರಿ ಒಂದು ಹದ್ಮಳೆ ಸುರೀತು. ಬೆಳ್ಗಾದದ್ದೇ ತಡ, ಒಳ್ಳೆ ಉಕ್ಕಿ ಹದಾಂತ ರೈತ್ರೆಲ್ಲಾ ಉಕ್ಕಿ ಹೊಡಿಯಾಕೆ ಹೊಂಟ್ಬಿಟ್ರು. ರೈತ್ನ ಮಗ್ನಾಗಿ ಹುಟ್ದ ರಡ್ಡೇರ ಹುಡ್ಗಗೆ ಸುಮ್ನಿರಾಕಾಗ್ಲಿಲ್ಲ. "ನಾನೂ ಉಕ್ಕಿ ಹೊಡಿಯಾಕ್ಹೋಗ್ತೇನಿ" ಅಂತ ಹೆಂಡ್ತಿಗೆ ಹೇಳಿ, ನೇಗ್ಲು! ನೇಗ್ಲು ಕುಳ, ನೊಗಸುತ್ತು ಮುಂತಾದ 'ಗಳೇವು' ಸಾಮಾನುಗಳ್ನ ಜೋಡ್ಸಾಕ್ಹತ್ತಿದ. ಇದ್ನ ಕಂಡ ಅತ್ತ್ಯವ್ವ ಹೆಂಗೆಂಗೋ ಆಗಿ "ಬ್ಯಾಡಾಂತ ಹೇಳವ್ವಾ, ಜನ ಏನಂದ್ಕಂದಾರು?" ಅಂತ ಮಗ್ಳಿಗೆ ಹೇಳಿ ಕೂಲಿ ಆಳಿಗೆ ಹೇಳಿ ಕಳ್ಸಿದ್ಲು. ಕೂಲಿ ಮ್ಯಾಲೆ ಬ್ಯಾಸಾಯ್ಕೆ ಬರೋರು ಯಾರೂ ಸಿಗ್ಲಿಲ್ಲ. ಊಟ ಮಾಡ್ಕಂದ ಅಳಿಯ ಎತ್ತು ಹೂಡ್ಕಂದು ಹೊಲಕ್ಕೆ ಹೊಂಟೇಬಿಟ್ಟ. ಊರೋರ್ಗೆಲ್ಲಾ ಇದು ಇಚಿತ್ರ ಅನ್ನಿಸಿದ್ರೂ "ಊರಿಗೆ ಅಳಿಯರಾಗಿ ಬರೋರು ಹಿಂಗಿರ್ಬೇಕು ನೋಡಪ್ಪಾ" ಅಂತ ಅಂದ್ಕಂದು ಸಂತೋಸ ಪಟ್ರು.

ಮಾವನ ಹೊಲಕ್ಹೋದ ಅಳೀಮಯ್ಯ ನೇಗ್ಲು ಹೂಡಿ ಒಂದುಬ್ಬ ಉಕ್ತಿ ಹೊಡ್ದ. ಎತ್ಗಳೂ ಒಳ್ಳೆ ಹುರುಪ್ನೋವು. ನೆಲ ಹಣ್ಣಾಗ್ಹಂಗೆ ಸುಗ್ದ ಹದ್ಮಳೆ ಬ್ಯಾರೆ. ಗೆಯ್ಯಾಕೊಂದು ಚೆಂದಾತು ಅಳಿಯನ್ಗೆ. ಎತ್ತುಗಳ್ನ ಓಡ್ಸಾಡಿ ಉಕ್ಕಿ ಹೊಡಿತ್ತಿದ್ದ. ಅಸ್ಟ್ರಾಗೆ ನೇಗ್ಲ ಕಳ 'ಟಣ್' ಅಂತ ಮ್ಯಾಗೆಸಿಡೀತು. ಬ್ಯಾಸಾಯ ನಿಲ್ಸಿ ನೋಡ್ತಾನೆ–

ಜಿಗಣಿನೇ ಕಳಚ್ಕಂದು ಹೋಗೈತಿ! ಎಲ್ಲಿ ಹುಡುಕ್ಲೀ ಅಂತ ಯೋಚ್ನೆ ಮಾಡಿ ನಾಕಾರು ಉಕ್ಕಿ 'ತಿರ'ದ ಮಣ್ಣನ್ನೆಲ್ಲಾ ಸೋಸ್ದಂಗೆ ಹುಡುಕಾಡ್ದ. ಜಿಗಣಿ ಸಿಗ್ಲೇ ಇಲ್ಲ. ಕೂಗಳ್ತೆ ದೂರ್ದಾಗೆ ನಾಕಾರು ಜನ ಉಕ್ಕಿ ಹೊಡಿತಿದ್ರು. ಅವರ್ನ ಕೂಗಿ ಕರಿಯಾಕೆ ನಾಚ್ಕೆ ಬ್ಯಾರೆ. "ಇಂಥ ಊರ್ನ ಹುಡುಗ್ನಂತೆ, ಇಂಥೋರ ಅಳಿಯ್ನಂತೆ. ಹಿಂಗಾತಂತೆ– ಅಂತ ಜನ ಆಡ್ಕಳಾಕಿಲ್ಲಾ ?" ಅನ್ನೋ ಚಿಂತೆ ಹತ್ಕಳ್ತು ಅಳಿಯನ್ಗೆ. 'ಹೆಂಗೆ ಮಾಡ್ಲಪ್ಪಾ' ಅಂತ ಯೋಚ್ನೆ ಮಾಡ್ತಿದ್ದಾಗ ಬಲ ಮುಂಗೈಯ್ಗೆ ಹಾಕ್ಕಂದಿದ್ದ ಬಂಗಾರ್ದ 'ಕಪ್ಪ' ನೆಂಪಿಗೆ ಬಂತು. ನೆಂಪಾದದ್ದೇ ತಡ, ಸರ್ರಂತ ಕಪ್ಪ ತಗ್ದು, ನೇಗ್ಲ ಕುಳಕ್ಕೆ ಜಿಗಿಣಿ ಜೋಡಿಸ್ದಂಗೆ ಜೋಡ್ಸಿ, ಬಿಗಿ ಆಗ್ಹಂಗೆ ಬಡ್ದು "ಚಾ ಬಸ್ವಣ್ಣಾ" ಅಂತ ಉಕ್ಕಿ ಹೊಡಿಯಾಕ್ಹತ್ತಿದ. ಹೊತ್ತು ಮುಳ್ಗೋವರ್ಗೂ ಬಿಡ್ಲಿಲ್ಲ. ಹೊತ್ತೂ ಮುಣುಗ್ತು. ಹೊಲಾನೂ ಮುಗೀತು. ಆಗ ಭೂಮ್ತಾಯಿ ಮೆಚ್ಚಿ ಹಿಂಗಂದ್ಲಂತೆ– "ರಡ್ಡಿ ಅಂದ್ರೆ ಬಂಗಾರ್ದ ಕಡ್ಡೀ ಅಂತ."

## ಹೊನ್ನಾಳಿ ಅಗ್ಸ ಕೆಟ್ಟಂಗೆ

ಈಗ್ಯೆತಲ್ಲ ಹೊನ್ನಾಳಿ ಸೇತ್ರಿ, ಅದ್ನ ಇನ್ನೂ ಕಟ್ಟೆರ್ಲಿಲ್ಲ. ಆವಾಗ ನಡ್ದಿರೋಬೇದು. ಇದು. ಹೊನ್ನಾಳ್ಯಾಗೆ ಒಬ್ಬ ಅಗ್ಸಿದ್ದ. ಅವ್ನ ಹೆಸ್ರು ಹಾಲಣ್ಣಾಂತ ಇರ್ಲಿ. ಹೆಸ್ರು ನೋಡಿದ್ರೆ ಹಾಲಣ್ಣ, ಕುಡಿಯಾಕ್ನೋಡಿದ್ರೆ ನೀರ್ಮಜ್ಜಿಗೂ ಗತಿ ಇದ್ದಿಲ್ಲ ಅವ್ನಿಗೆ. ಅವ್ನ ಮನೇನ ಮನೆ ಅನ್ನೋದ್ಕಿಂತ ಕೋಳಿಗೂಡು ಅನ್ಬೋದಿತ್ತು. ಹಂಗೆ ಅವ್ನಿಗೆ ಪಿತಿ ಪಿತಿ ಗುಟ್ಟಂಗೆ ಮನ್ತುಂಬಾ ಮಕ್ಳು. ಕೆಮ್ಮು, ನೆಗ್ಡಿ, ಚಳಿ, ಜರಾಂತ ನಾಕಾರು ಮಕ್ಳು ಯಾವಾಗ್ಲೂ ಹರ್ಕಂದ ಹಾಸ್ಗ್ಯಾಗೇ ಸುಳ್ಳಿ ಸುತ್ಕಂದು ಮಲ್ಗಿರ್ತಿದ್ವು.

ಅಗಸ್ರು ಕೆಲ್ಸಾಂದ್ರೆ ಗೊತ್ತಲ್ಲ ? ಯಾರ್ದ್ಯಾರ ಮನೆಯಾಗೆ ಯಾರಾದ್ರೂ ಸತ್ತಾಗ, ಹೆಂಗಸ್ರು ಹಡ್ದಾಗ, ಸೂತ್ಕ, ಹಬ್ಬ ಹರ್ದಿನ್ದಾಗೆ ಊರ್ಬಟ್ಟೆ ಒಗ್ದು ಕೊಡ್ತಿದ್ದ. ವರ್ಸ ತುಂಬಿದ್ಮ್ಯಾಲೆ 'ಆಯ' ತಗಂತಿದ್ದ. ಅದ್ರಾಗೇ ಅವ್ನ ಜೀವ್ನ.

ಅವನ್ಹತ್ರ ಒಂದು ಕತ್ತಿತ್ತು. ಅದೋ, ನಾಯಿಬಡಿಯೊ ಕೋಲ್ದಂಗೆ ಬಡಕ್ಲೂ ಅಂದ್ರೆ ಬಡಕ್ಲು. ಅದೆಂದ್ರೆ ಹಾಲಣ್ಗೆ ಬಾಳ ಕಕ್ಕುಲ. ಆದ್ರೇನು, ಅವನ್ಗೇ ಒಪ್ಪತ್ತಿಗಾದ್ರೂ ಹೊಟ್ತುಂಬ ಉಣ್ಣಾಕೆ ಗತಿ ಇರ್ಲಿಲ್ಲ. ಹಿಂಗಿದ್ದಾಗ ಕತ್ತೆಗೆ ಹೊಟ್ತುಂಬಾ ಏನ್ನಹಾಕ್ತಾನೆ ? ಮನ್ಸ್ಮಂದ್ಯೆಲ್ಲಾ ಅರೆಹೊಟ್ಟೆ. ಕತ್ತೆನೂ ಅರೆಹೊಟ್ಟೆ.

ಹಾಲಣ್ಣನ ಸಂಸಾರ ಹಿಂಗೇ ಕುಂಟ್ತಾ ಸಾಗ್ತಿದ್ದಾಗ ಉಪ್ಪಿನ ಯಾಪಾರ ಸುರ್ವಾತು. ಮಂಗ್ಳೂರು ಕಡಿಂದ ತಂದ ಉಪ್ಪಿನ ಮೂಟೆಗಳ್ನ ಹರಿಹರ್ದ ಕಡೆ ದಾಟಿಸ್ಬೇಕು. ಹೊಳಿಯಾಗೆ ಬ್ಯಾರೆ ಗಾಡಿ ಹೋಗಂಗಿದ್ದಿಲ್ಲ. ಉಪ್ಪಿನ ಯವಾರ್ದ್ಯಾರ ಹಾಲಣ್ಣನ್ನ ಕಂಡು ಮೂಟೆಗಳ್ನ ಹರಿಹರ್ದ ಕಡೆ ದಡಕ್ಕೆ ಸೇರ್ಸಾಕೆ ಗುತ್ಗೆ ಮಾಡ್ಕಂದ. ಒಂದು ಮೂಟ್ಗೆ ಬಾಡ್ಗೆ ಒಂದು ದುಡ್ಡು.

ಬಟ್ಟೆ ಒಗೆಯೋ ಕೆಲ್ಸದ ಜತೆಗೇ ಉಪ್ಪಿನ ಮೂಟೇನ ಕತ್ತೆ ಮ್ಯಾಲೆ ಹೇರಿ ಈ ದಡ್ಡಿಂದ ಆ ದಡ್ಕೆ ಸಾಗಿಸ್ತಿದ್ದ ಹಾಲಣ್ಣ. ಸ್ವಲ್ಪ ದಿನ್ದಾಗೇ ಕತ್ತೆ ಬೆನ್ನಿನಮ್ಯಾಲೆ ಒಂದು ಗಾಯಾತು. ಅದು ದಿನ್ದಿನಕ್ಕೆ ದೊಡ್ಡಾತು. ಕಾಗೆ ಬಂದು ಕುಕ್ಕಿ ಕುಕ್ಕಿ ತಿನ್ನಾಕ್ಹತ್ತಿದ್ವು. ರಕ್ತ ಬಳಬಳಾಂತ ಸೋರಾಕ್ಹತ್ತಿದ್ರೂ ದುಡ್ಡಿನ ಆಸ್ಗೆ ಬಾಯ್ತೆರ್ಕಂದಿದ್ದ ಹಾಲಣ್ಣ ಅದ್ಕೆ ಇರಾವಮಾನೂ ಕೊಡ್ಲಿಲ್ಲ ; ಔಸ್ದಿಗಿವುಸ್ತಿನೂ ಮಾಡಿಸ್ಲಿಲ್ಲ. ಗಾಯ್ದ ಮ್ಯಾಲೆ ಉಪ್ಪಿನ ಉರ್ತ ಬ್ಯಾರೆ. ಸಾಯಂಗೆ ಸಂಕ್ಟ ಆಗ್ತಿದ್ರೂ ಸಾಕ್ದೋನು ಹೇರಿದ್ದನ್ನ ಹೊತ್ಕಂದು ಹೋಗಿ ಬಂದು ಮಾಡ್ತಿತ್ತು. ಔಸ್ದಿಮಾಡ್ಸಿ, ಒಂದಸ್ಟು ದಿನ ಇರಾಮ ಕೊಡು" ಅಂತ ಅವ್ರಿವ್ರು ಬುದ್ವಾದ ಹೇಳಿದ್ರೂ ಹಾಲಣ್ಣ ಕಿವಿಗೆ ಹಕ್ಕಳ್ಳಿಲ್ಲ.

ಒಂದಿನ ಆ ಕತ್ತೆಗೆ ಅದೆಂತಾ ನೋವಾತೋ? ಅದೇಟು ಸಿಟ್ಬಂತೋ? ಉಪ್ಪಿನ ಮೂಟೆ ಹೊತ್ಕಂದು ನಡೋ ಹೊಳೆಯಾಗೆ ಹೋಗ್ತಿದ್ದಾಗ ಮುಗ್ಗುರ್ಸಿ ಬಿದ್ದಂಗೆ ಮುಳಿಗ್ಬಿಡ್ತು. ಉಪ್ಪಿನ ಮೂಟೆ ನೀರ್ಪಾಲಾದ್ವು. ಉಪ್ಪು ನೀರಿನ ಉರ್ತಕ್ಕೆ ಒದ್ದಾಡ್ದ ಕತ್ತೆ ದಿಗ್ನೆ ಎದ್ದು, ಹೊಳೆಹಾದು ಎತ್ಲಾಗೋ ಓಟ ಕಿತ್ಬಿಡ್ತು. ಏನಾತೋ? ಎಲ್ಬಿದ್ದು ಸಾಯ್ತೋ ಏನೋ ? ಹಾಲಣ್ಣ "ಅಯ್ಯೋ ನನ್ಕತ್ತೆ, ಅಯ್ಯೋ ನನ್ಕತ್ತೆ....ಅಂತ ಎದೆ ಬಡ್ಕಂತಾ ಎಷ್ಟು ಹುಡ್ಕಿದ್ರೂ ಸಿಗ್ಲಿಲ್ಲಂತೆ !"

# ನೀತಿ ಕಥೆಗಳು

## ಕಾರ್ಯವಾಸಿ ಕತ್ತೆ ಕಾಲು ಕಟ್ಟ್ಬ-೧

ಒಬ್ಬ ರಾಜ ಇದ್ನಂತೆ. ಅವ್ನಿಗೆ ಒಬ್ಬರಾಣಿ ಇದ್ಲು. ಬಾಳ ದಿನ ಅವ್ರಿಗೆ ಮಕ್ಳೇ ಆಗಿರ್ಲಿಲ್ಲ. ದೇವ್ರುದಿಂಡ್ರು ಅಂತ ಹರ್ಕೆಹೊತ್ಕಂದಿದ್ರು. ದೇವ್ರು ಕಣ್ಬಿಟ್ಹಂಗೆ ರಾಣಿ ದಿಮ್ಮ್ರನ್ಸಿ ಆಗಿ, ದಿನ ತುಂಬಿದ ಮ್ಯಾಲೆ ಒಂದ್ಗಂಡು ಕೂಸ್ನ ಹಡೆದ್ಲು.

ಹುಟ್ತಾನೇ ಆ ಗಂಡು ಕೂಸ್ನ ನೆತ್ತಿಮ್ಯಾಲೆ ಗೋಲಿ ಗಾತ್ರದ ಕೆಂಪ್ಗೆ ಕುರ್ದಂತ ಮೂರ್ಗಂಟಿದ್ವು. ಕೂಸು 'ಗಾರ್ಗಾರಂತ' ಅಳಾಕ್ಹತ್ತಿದ್ದು ನಿಲ್ಲಿಸ್ತಿರ್ಲಿಲ್ಲ. ರಾಜ್ಗೆ ದಿಕ್ಕೇ ತೋಚ್ದಂಗಾಗಿ ದೋಸಿಗರ್ನ ಕರ್ಬು ಕೇಳ್ಸಿದ. "ಏನ್ತೊಂದ್ರೇನೂ ಇಲ್ಲ, ರಾಜ್ಕುಮಾರಂದು ಸುಕ್ರದೆಸೆ. ಪಂಡಿತ್ರನ್ನ ಕರ್ಸಿ ಔಸ್ಟಿ ಮಾಡ್ಸಿ" ಅಂತಂದು ಹೋದ್ರು.

ರಾಜ ಅಳಲೆ ಪಂಡಿತ್ರನ್ನ ಕರ್ಸಿ ಮಗ್ನನ್ನ ತೋರ್ಸಿದ. ಪಂಡಿತ್ರು ಆ ಗಂಟುಗಳ್ನ ಪರೀಕ್ಷೆ ಮಾಡಿ "ಸ್ವಾಮೀ ಇದ್ಕೆ ಕೂಡ್ಲೇ ಔಸ್ದಿ ಮಾಡಿಸ್ಬೇಕು. ಈ ಔಸ್ದಿಗೆ– 'ತತ್ತಿ ಗೀರುಂಡಿ; ಪತ್ರಿಬೇರು, ಕತ್ತೆ ಹಾಲು ಬೇಕು. ಜೊಡ್ನೋ ಏರ್ಪಾಟ್ಮಾಡ್ರಿ" ಅಂತಂದು ಅವ್ನೂಹೋದ.

ಮದ್ಲಿನ ಎಲ್ಡೇನೋ ಸಿಗ್ತವೆ. ಆದ್ರೆ ಕತ್ತೆ ಹಾಲು ! ಅದೂ ಸಿಗೋದು ದ್ವಡ್ಡಕೆಲ್ಸಲ್ಲ. ಆದ್ರೆ "ರಾಜ್ಕುಮಾರ್ನಗಾಯ್ಕೆ ಇಂಥಾ ಔಸ್ದಿ ಹಾಕ್ಸಿದ್ರಂತೆ !" ಅಂತ ತಿಳ್ಕಂದ ಜನ ಕಿಸಿಕಿಸೀ ಅಂತ ನಗ್ದೇ ಇರ್ತಾರಾ ? ನಕ್ರೆ ಕುರ ಅದ್ಹಂಗೆ ಮಾಯ್ತಾವೆ ? ಜನ ಏನಾರ ಅಂದ್ಕಳ್ಳಿ, ಮಗ್ನಕುರ ಹುಸಾರಾದ್ರೆ ಸಾಕು" ಅಂತ ತೀರ್ಮಾನ ಮಾಡ್ದ ರಾಜ ಕತ್ತೆಹಾಲ್ತರಾಕೆ ಆಳ್ಗಳ್ಗೆ ಹುಕುಂಮಾಡ್ದ.

ಅರ್ಮನ್ಗೆ ಹಾಲ್ಕೊಡೊ ಒಂದು ಕತ್ತೇನ ಯಾರ್ಗೂ ಕಾಣ್ದಂಗೆ ಹಿಡ್ಕಂದ್ಬದ್ರು. ಅದ್ಕೇನು ಆರೈಕೇಂತ ? ಸ್ನಾನ ! ತೊಕ್ಕು !! ಹಿಂಡಿ !!! ಅದ್ರೇನ್ಬಂತು ಹಾಲು ಕರ್ಕ್ಳಾಕೆ ಹೋದವ್ರೆಲ್ಲಾ ಹಲ್ಲು ಉದುರಿಸ್ಕಂದು ಬಂದ್ರು. ಮತ್ತ್ಯಾರೂ ಆ ಸಾಸ್ಕೆ ಧೈರ್ಯ ಮಾಡ್ಲಿಲ್ಲಂತೆ.

ರಾಜ್ಗೆ ಸಿಟ್ಟನ ಜತೆ ಚಿಂತೆನೂ ಗಂಟ್ಬಿತ್ತು. ಕಡೆಗೆ, ಯಾರ್ಗೂ ತಿಳೀದ್ದಂಗೆ ಕತ್ತೆ ಹಾಲ್ನ ಕರೆಯಾಗೆ ತಾನೇ ಸಿದ್ಧಾದ. ಅದ್ರ ನಾಕೂ ಕಾಲ್ನ ಕಟ್ಟಿದ. ಬೋಗ್ಣಿಗೆ ಅರ್ಧಹಿಂಡಿ ತುಂಬ್ಸಿ, ಅದ್ರಾಗೆ ಹಾಲ್ಹಾಕ್ಸಿ, ಅದೇನೊ 'ಮತ್ತು' ಬರ್ಸೋ ಪುಡೀನ್ನ ಕಲ್ಸಿದ್ದ. ಹಾಲ್ಕೊಡೊ ಕತ್ಗೆ ಉಪಾಯ್ದಿಂದ ತಿನ್ಸಾಕ್ಹತ್ತಿದ. ಅರ್ಬಡ್ಸಿ ತಿನ್ತಾ ತಿನ್ತಾ ಇದ್ದಂಗೆ ಕತ್ಗೆ 'ಮತ್ತು' ಬಂದು ಮಕ್ಕಂದ್ಬಿಡ್ತಂತೆ. ಆಗ ರಾಜ್ನೇ ಹಾಲ್ಕರ್ಕಂದು, ಪಂಡಿತ್ರಿಂದ ಔಸ್ಧಿ ಮಾಡ್ಸಿ, ರಾಜ್ಕುಮಾರ್ನ ಕುರಕ್ಕೆ ಹಚ್ಚಿಸಿದ್ನಂತೆ. ಒಂದ್ವಾರ್ದಾಗೇ ಕುರ ಮಾಯ್ವಾದ್ವಂತೆ !



## ಕಾರ್ಯವಾಸಿ ಕತ್ತೆ ಕಾಲು ಕಟ್ಟು–೨

ವಸುದೇವ–ದೇವಕಿಯರಿಗೆ ಜನಿಸುವ ಮಗುವಿನಿಂದಲೇ ತನ್ನ ಮರಣವೆಂದು ಕಂಸನಿಗೆ ತಿಳಿದು ಬಂದು ಅವರಿಬ್ಬರನ್ನೂ ಸೆರೆಗೆ ಹಾಕಿದ. ಸೆರೆಮನೆಯ ಬಾಗಿಲಲ್ಲಿ ಕತ್ತೆಯೊಂದನ್ನು ನಿಲ್ಲಿಸಿದ. ಕತ್ತೆಯ ಕೆಲಸವೆಂದರೆ–ದೇವಕಿಗೆ ಪ್ರಸವವಾದ ಕೂಡಲೇ ಜೋರಾಗಿ ಅರಚಿಕೊಳ್ಳುವುದು. ಅದನ್ನು ಕೇಳಿದವರು ಕಂಸನಿಗೆ ಸುದ್ದಿ ಮುಟ್ಟಿಸುತ್ತಿದ್ದರು. ಅವನು ಬಂದು ಶಿಶು ಹತ್ಯೆ ಮಾಡುತ್ತಿದ್ದ.

ಕೃಷ್ಣನ ಜನನವಾದಾಗ, ಈ ಮಗುವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ತೀರ್ಮಾನಿಸಿದ ವಸುದೇವ ಕತ್ತೆಯಕಾಲಿಗೆ ಬಿದ್ದು "ದಯಮಾಡಿ ಈಸಾರಿ ಕೂಗಬೇಡ" ಎಂದು ಬೇಡಿಕೊಂಡನಂತೆ. ಕತ್ತೆ ಅವನ ಬೇಡಿಕೆಯನ್ನು ಮಾನ್ಯಮಾಡಿತಂತೆ !

ಕತ್ತೆಯಂಥ ಕತ್ತೆಯ ಕಾಲನ್ನಾದ್ರೂ ಹಿಡಿದು ಕೆಲಸ ಸಾಧಿಸಬೇಕೆನ್ನುವ ಗಾದೆ ದ್ವಾಪರ ಯುಗದಲ್ಲೇ ಹುಟ್ಟಿಕೊಂಡಿತೆ ? ಅಮೃತಾಪುರದ ಅಮೃತೇಶ್ವರ ದೇವಾಲಯದ ಹೊರಗೋಡೆಯ ಮೇಲಿರುವ ವಸುದೇವನು ಕತ್ತೆಯ ಕಾಲಿಗೆ ನಮಸ್ಕರಿಸುತ್ತಿರುವ ಶಿಲ್ಪದೃಶ್ಯ—ಈಗಾದೆಯ ಹಿನ್ನೆಲೆಯ ಕತೆಯನ್ನು ಒದಗಿಸಿಕೊಡುತ್ತದೆ.

## ಹುಚ್ಚ್ಯಾಸೆ ಕಿಚ್ಚಿಡ್ತಂತೆ

ಎಂದೋ ಒಂದ್ಕಾಲ. ದೇವಳ್ಳಿ ಅನ್ನೊ ಊರ್ನಾಗೆ ಅಣ್ಣಪ್ಪ ತಮ್ಮಯ್ಯ ಅನ್ನೊ ಇಬ್ರು ಅಣ್ಣ ತಮ್ಮ ಇದ್ರು. ಇಬ್ರದ್ದೂ ಮದ್ವಿ ಆಗಿತ್ತು.

ಅಣ್ಣಪ್ಪನ ಹೆಂಡ್ತಿ ಹೆಸ್ರು ಗಂಗವ್ವ ಅಂತ. ಅವ್ರಿಗೆ ಆರ್ಮಕ್ಳು ಮೂರ್ಗಂಡು ಮೂರ್ಹೆಣ್ಣು. ತಮ್ಮಯ್ನ ಹೆಂಡ್ತಿ ಹೆಸ್ರು ಸಂಗವ್ವ ಅಂತ ಇಟ್ಕ. ಅವ್ರಿಗೆ ಮೂರ್ಮಕ್ಳು. ಎಲ್ಲಾ ಗಂಡ್ಮಕ್ಳೇ. ಯಾವಭೇದ್ಭಾವ ಇಲ್ದೆ, ಎಲ್ರೂ ಒಟ್ಟಾಗಿ ದುಡ್ಮೆಮಾಡ್ತಿದ್ರು. ತುಂಬಿದ್ಮನೆ ಜೇನ್ಗೂಡ್ಹಂಗಿತ್ತು.

"ಹುಟ್ತಾ ಅಣ್ಣ ತಮ್ಮಂದ್ರು, ಬೆಳೀತಾ ದಾಯಾದ್ಗಳು" ಅಂತ ಮದ್ಲೇ ಹೇಳ್ತಾರೆ. ಮನೆಯಾಗೆ ಒಡ್ಕು ಹುಟ್ಕಂತು. ಅದು ಹುಟ್ಕಂದದ್ದು ಸಂಗವ್ನಿಂದ್ಲೇ. ತನಿಗ್ನೋಡಿದ್ರೆ ಮೂರೇ ಮೂರು ಮುತ್ನಂಥ ಮಕ್ಳು. ಗಂಗವ್ಗೆ ಆರು ! ಯಜಮ್ರನ್ಗಿ ಬ್ಯಾರೆ ಅಕೀದೆ. ತನ್ಗಂಡ ಮಕ್ಳುಯಾಕೆ ಮೈ ಮುರ್ಕಳ್ಹಂಗೆ ದುಡ್ಮೆ ಮಾಡ್ಬೇಕು ? ಪಾಲ್ತಗಂದು ದುಡ್ಮೆಮಾಡಿದ್ರೆ ಊರ್ಗೇ ಸಾವ್ಕಾರಾಗ್ಬೋದು. ಹರೇವ್ಕೆ ಬಂದ ಮಕ್ಳ ಮದ್ವೇನ 'ಧಾಂಧೂಂ' ಅಂತ ಊರೇ 'ಸೈ' ಅನ್ನಂಗೆ ಮಾಡ್ಬೋದಲ್ಲಾ–ಅಂತ ಯೋಚ್ನೆಮಾಡ್ದ ಸಂಗವ್ವ ತನ್ನ ಗಂಡ ಮಕ್ಳ ಕಿವಿಯಾಗೆ ತೀಟಿ ತುಂಬಿದ್ಲು. ಅವ್ರಿಗೆಲ್ಲಾ ಸಂಗವ್ನ ಮಾತು ಹೋಳ್ಗಿ ಸೀಕ್ನೆ ಉಂಡಂಗಾತು. ತೀಟಿ ಇಂದ ಕ್ವಾಟೇನೂ ಹಾಳಾದಂತೆ ಅನ್ನೋದು ಸುಳ್ಳನ್ನೋಡು.

ಕಳ್ಳೊಂದು ಪಿಳ್ಳೆಸಿವ ಅಂದ್ಹಂಗೆ, ಬಿದ್ದಕಡ್ಡೀನ್ನ ಎತ್ತಿ ಹಾಕ್ದಂಗೆ, ಗಡದ್ದಾಗಿ ಉಂಡು, ಹೊಟ್ನೋವು, ಚಳಿ, ಜರಾಂತ ಮೂಲೆಹಿಡ್ದು ಮಕ್ಕಂತಾ ತಮ್ಮಯ್ನ ಮಕ್ಳು ಮೈಗಳ್ತನ ಕಲ್ತುಬಿಟ್ರು.

ಒಂದಿನ ರಾತ್ರಿ. ಉಣ್ಣಾಕೆ ನೀಡ್ದ ಗಂಗವ್ವ ಎಲ್ರಿಗೂ ಒಂದೊಂದು ಚೌಟ ತುಪ್ಪ ಹಾಕಿದ್ಲು. ಅವಾಗ ತಮ್ಮಯ್ನ ಹಿರೇಮಗ "ದೊಡವ್ವಾ, ನಮ್ಗೆ ಇನ್ನೊಂದೊಂದು ಚೌಟ ತುಪ್ಪ ಹಾಕು. ನಿಮಿಗ್ನೋಡಿದ್ರೆ ಆರ್ಜನಮಕ್ಳು! ನಾವು ನೋಡಿದ್ರೆ ಮೂವರೇ ಮೂವರು. ಅದ್ಕೇ ಸರ್ಪಾಲು" ಅಂತ ಚುಂಚಂಗೆ ಮಾತಾಡ್ದ. "ಹೌದ್ಮತ್ತೆ, ಇದ್ನ ಹಿರೇರು ಮದ್ಲೇ ತಿಳ್ಕಾಬೇಕು" ಅಂತ ತಮ್ಮಯ್ಯೂ ದನಿ ಸೇರ್ಸಿದ. ಈ ಮಾತು ಗಂಗವ್ಗೆ ಕಪಾಳ್ಕೇ ಹೊಡ್ದಂಗಾಗಿ, ಅವ್ರಿಗೆ ಮತ್ತೊಂದೊಂದು ಚೌಟ ತುಪ್ಪ ಹಾಕಿದ್ಲು ಗಂಟ್ಲು ಕಟ್ಟಂಗಾತು ಗಂಗವ್ಗೆ. ಬೆಂಕಿಕೆಂಡ ಮೈಮ್ಯಾಲೆ ಸುರ್ದಂಗೆ ಅಪ್ಪಣ್ಣ ಬೆಚ್ಚಿದ್ದ. ಎಲ್ರೂ ಅರ್ಧಂಬರ್ಧ ಉಂಡ್ಹಂಗೆ ಊಟ ಮುಗ್ಸಿದ್ರು.

ಅವತ್ತು ಎಲ್ರ ಮುಕಾನೂ ಚೊಟ್ಟಾದ್ವು. ದನ್ದ ಕೊಟ್ಗೆ ಕಟ್ಟೆಮಾಗೆ ತಮ್ಮಯ್ಯ ಕುಂತ್ಕಂದು ಏನೋ ಯೋಚ್ನೆಮಾಡ್ತಿದ್ದ. ಅವ್ನ ಹತ್ರಾನೇ ಬಂದು ಕುಂತ್ಕಂದ ಅಪ್ಪಣ್ಣ–"ನೋಡ್ತಮ್ಮಯ್ಯ, ಹೊಡ್ದಾಟಿಲ್ಲ, ಬಡ್ದಾಟಿಲ್ಲ ಇವ್ರಿಗೆ ಇತ್ತಿತ್ಲಾಗೆ ಸರಿಬರ್ತಿಲ್ಲ ಅಂತ ಇವತ್ತು ಪೂರಾ ಕಂಡ್ಬಂತು. ಹಿಂಗೆ ಇರೋದ್ರಿಂದ ಏನಂದ? ಬ್ಯಾರ್ಯಾಗ್ಬಿಡಾನ ! ನೀನು ಬಿಟ್ಟದ್ನ ನಾತಗಂತೇನಿ" ಅಂತ ಅತ್ತಂಗೆ ಹೇಳ್ದ. ರೊಟ್ಟಿ ಜಾರಿ ತುಪ್ದಾಗೇ ಬಿದ್ದಂಗಾತು ತಮ್ಮಯ್ಗೆ. "ಹಂಗೇ ಆಗ್ಲಿ ಬುಡು!" ಅಂತ ಅಂದ್ಬಿಟ್ಟ. ಅವ್ರು, ಬ್ಯಾರೆ ಆದದ್ದು ಯಾರ್ಗೂಗೊತ್ತಾಗ್ಲಿಲ್ಲ. ಹಂಗೆ ಬ್ಯಾರ್ಯಾದ್ರು.

ಅಣ್ಣಗೆ ತಮ್ಮ ಬಿಟ್ಟದ್ದೆಂದ್ರೆ–ದನಾ ಕಟ್ಬೋ ಹಳೇ ಜೋಪ್ಡಿ, ತೆಗ್ಗುತೆಂಬ, ಕಲ್ಲು ಕರ್ಕಿ ಹೊಲ. ಹೆಂಡ್ತಿ ಮಾತ್ನಂಗೆ ತಮ್ಮಯ್ಯ ಆರಿಸ್ಕಂದದ್ದು–ಬೆಚ್ಚನ್ಮನೆ ಅಚ್ಚುಕಟ್ಟಾದ ಸೂಸ್ಲಿನಂತ ಹೊಲಗಳ್ನ.

"ಪಾಲಿಗ್ಬಂದದ್ದೇ ಪಂಚಾಮೃತ" ಅಂತ ತಿಳ್ಕಂದ ಅಪ್ಪಣ್ಣ, ಹೆಂಡ್ತಿ ಮಕ್ಕಳ್ನ ಕಟ್ಕಂದು ಹಗ್ಲೂ ರಾತ್ರಿ ಕಣ್ಗೆ ಎಣ್ಣೆ ಹಚ್ಕಂದು ದುಡಿಯಾಕ್ಹತ್ತಿದ. ಅವ್ರುಬೆವ್ರು ಉಂಡ ಭೂಮ್ತಾಯಿ, ಅವ್ರು ಹಿಡಿಬಿತ್ತಿದ್ರೆ ಕಂಡ್ಗನೀಡಾಕ್ಹತ್ತಿದ್ಲು. ನಾಕಾರು ವರ್ಸದಾಗೇ ಅಪ್ಪಣ್ಣನ ಮನೆ ಸಂಪತ್ನಿಂದ ನಿಗಿನಿಗಿ ಅನ್ಹಂಗೆ ಬೆಳಗ್ತು. ದನಾ ಕಟ್ಬೋ ಹಳೇ ಕೊಟ್ಗೆಗ್ಯಾಗೇ ಇದ್ರಲ್ಲ, ಅದ್ನ ಕೆಡ್ವಿ. ಒಂದು ಚಂದದ ಮನೆ ಕಟ್ಸಿದ್ರು. ಊರಿಗೂರೇ ಬೆರ್ಗಾತು ! ಕೆಲವ್ರು ಹುಬ್ಬೇರ್ಸಿದ್ರು; ಇನ್ ಕೆಲವ್ರು ಇದೇನು ಜೋಜಿಗಾಂದ್ರು. ಮತ್ತೆ ಕೆಲವ್ರು" ಕಲ್ಲೊಲ್ಹಾಗೆ ಬಂಗಾರ್ದ ಕ್ವಡ್ಡಾನ ಸಿಗ್ತಂತೆ" ಅಂದ್ರು ಇನ್ನು ಕೆಲವ್ರು "ದೇವ್ರುವರ ಕೊಟ್ನಂತೆ !" ಅಂತ ಪಿಸುಪಿಸ, ಗುಸುಗುಸಾಂತ ಮಾತಾಡಕ್ಹತ್ತಿದ್ರು.

ಇಂಥ ಮಾತ್ಗಳು ತಮ್ಮಯ್ಯ ಸಂಗವ್ವನ ಕಿವಿಯಾಗೆ ಕಾದ ಕಬ್ಬಣ್ದ ಸಳ್ಳು ಹೊಕ್ಕಂಗೆ ಹೊಕ್ವು. ಅವ್ರ ಮಕ್ಳಿಗೂ ಹಿಂಗೇ ಆತು.

"ಅಪ್ಪಣ್ಗೆ ದೇವ್ರು ವರ ಕೊಟ್ನಂತೆ" ಅನ್ನೋ ಮಾತ್ನ ತಮ್ಮಯ್ಯ ಸಂಗವ್ವ ಪೂರಾ ನಂಬಿಟ್ರು. ಸಂಗವ್ಗಂತೂ ಹುಚ್ಚು ಹಿಡ್ದಂಗಾತು. ಸರಿ. "ನನ್ನ ವಾರ್ಗಿತ್ರಿಗೆ ಹೆಂಗೆ ಮಕ ತೋರಿಸ್ಕಂತಾ ಇರ್ಲಿ? ಸಾಯಾದ್ಬೇಕು ಇರಾದು ಬ್ಯಾಡ. ನೀವೂ ದೇವ್ರ ಹತ್ರ ಹೋಗಿ ವರ ಕೇಳ್ಕಂದು ತಗಂಬರ್ರಿ" ಅಂತ ಪೀಡ್ಸಾಕ್ಹತ್ತಿದ್ಲು. ಒಂದು ರಾತ್ರ್ರೋರಾತ್ರಿ ತಮ್ಮಯ್ಯ ಊರ್ಬಿಟ್ಟು ಹೊಂಟ್ಬಿಟ್ಟ.

ಹೋಗಂದ್ಹೋಗಂದು ಹೋದ. ಹೋದೇಹೋದ. ಒಂದೈವತ್ತು ಗಾವ್ದ ಹೋದ. ಇಬ್ನೂ ನುಸಿಲಾರ್ದಂತ ಒಂದ್ಕಾಡು ಸಿಕ್ತು. ಅದ್ರಾಗೇ ನುಸ್ಕಂದು ಹೋಗಾಕ್ಹತ್ತಿದ. ಕಡೆಗೆ ಒಂದು ದ್ವಡ್ಡ ಆಲ್ದಮರಕಾಣ್ತು. ಆ ಆಲ್ದ ಮರ್ದ ಕೆಳಾಗೆ ಹೋಗಿ ಕುಸ್ದು ಕುಂತ್ಕಂದ್ಬಿಟ್ಟ.

ಅಂಗಾಲೆಲ್ಲಾ ಒಡ್ಕಂದು ರೈತ ಸೋರ್ತಿದ್ವು. ಅಂಗಿ ಪಂಚಿ ಕಿತ್ಕಂದಿದ್ವು. "ದೇವ್ರೇ, ದೇವ್ರೇ, ದೇವ್ರೇ...." ಅಂತ ಕಣ್ಮುಚ್ಕಂದು ಜಪ ಮಾಡಾಕ್ಹತ್ತಿದ ತಮ್ಮಯ್ಯ.

ಒಂದುಣ್ಮಿ ರಾತ್ರಿ. ಸರ್ರಾತ್ರಿ. ಬೆಳ್ದಿಂಗ್ಳು, ಹಾಲು ಚೆಲ್ದಂಗೆ ಹಲ್ಡಿತ್ತು. ಇದ್ಕಿದ್ದಂಗೆ "ತಮ್ಮಯ್ಯ....ತಮ್ಮಯ್ಯ....ಹೂಂ...." ಅನ್ನೋ ದನಿ ಕೇಳಿ ಅವ್ನ ಕಣ್ಬಿಟ್ಟು ನೋಡ್ತಾನೆ–ಚಂದಪ್ನ ಬೆಳಕ್ನಾಗೆ ಎಲ್ಡ್ಮರು ಉದ್ದನ್ನ ಬೆಳ್ಳನಕ್ಲೆ! "ದೇವ್ರೇ....ದೇವ್ರೇ....ಮಾಸ್ವಾಮೀ"ಅಂತ ಕುಂತ್ಕಂಡೇ ಅಡ್ಬಿದ್ದ ತಮ್ಮಯ್ಯ. "ಅಣ್ಗೆ ವರ ಕೊಟ್ಟಂಗೆ ನನ್ಗೂ ವರ ನೀಡು ದೇವಾಂತ" ಕೈ ಒಡ್ಡಿ ಬೇಡ್ಕಂದ. "ಆಗ್ಲಪ್ಪಾ" ಅಂತಂದ ದೇವ್ರು "ತಗಾ, ಈ ಮೂರು ಹಳ್ಳ್ನ! 'ಇಂತದ್ದಾಗ್ಲೀ' ಅಂತ ಒಂದ್ಹಳ್ಳು ಹಾಕಿದ್ರೆ ನಿನ್ನ ಬಾಯಾಗೆ ಬಂದ ಮಾತ್ನಂತೇ ಅದಾಗ್ತೈತಿ! 'ಆದದ್ದು ಹೋಗ್ಬಿಡ್ಲಿ' ಅಂತ ಮತ್ತೊಂದು ಹಳ್ಳ್ನ ಹಾಕಿದ್ರೆ ಅದು ಹೋಗ್ತೈತೆ!! 'ಮದ್ಲಿನ್ಹಂಗಾಗ್ಲೀ' ಅಂತ ಕಡೇ ಹಳ್ಳ್ನ ಹಾಕಿದ್ರೆ ಅದು ಮತ್ತೆ ಬರ್ತೈತೆ !!!" ಅಂತ ಎಚ್ಚರ್ಕೆ ಕೊಟ್ಟ ದೇವ್ರು ಮೂರು ಹಳ್ಳ್ನ ತಮ್ಮಯ್ಗೆ ನೀಡಿ ಮಾಯ್ವಾತು.

ತಮ್ಮಯ್ಗೆ ಹಿಗ್ಗೋ ಹಿಗ್ಗು. ಆ ಮೂರು ವರ್ದ ಹಳ್ಳ್ನ ಪಂಚಿ ಚುಂಗ್ನಾಗೆ ಕಟ್ಕಂದು, ಸೊಂಟ್ದಾಗೆ ಸಿಕ್ಕಿಸ್ಕಂದು ಮೂರ್ದಿನ್ದ ಹಾದಿ ಸವ್ಸಿ ಊರಿಗ್ಬಂದ. ಬಂದಾಗ ಸರ್ಬತ್ತಾಗಿತ್ತು. ಕದಾ ತಟ್ತಾ ವಲ್ಕೆ ಹೆಂಡ್ತೀನ ಕರ್ದ. ಸಂಗವ್ವ ದಿಗ್ನೆದ್ದು ಕದಾ ತಗುಲ್ದ್ಲು. ಮೀಸೆ ಗಡ್ಡ ಬೆಳ್ದ ಗಂಡನ ಮಕ ನೋಡಿ ಅಕಿ ಎದೆ ಧಸಕ್ಕಂತು. ಆಗ ತಮ್ಮಯ್ಯ "ನಾನೇ ಕಣೇ....ನನ್ಗೂ ದೇವ್ರುವರ ಕೊಟ್ಟ! ಒಂದಲ್ಲ ಮೂರು" ಅಂತ



ಕಾಲ್ನ ತೊಳ್ಕೊಳ್ಳಾದ್ನೇ ಮರ್ತು ಉದಾಸ್ಲು ದಾಟ್ದ. ಪಂಚಿ ಚುಂಗ್ನಾಗೆ ಕಟ್ಕಂದಿದ್ದ ಹಳ್ಳ್ನ ಗಂಟ್ನ ಕೈಯ್ಗೆ ತಗಂದು ನನ್ಗೂ ದೇವ್ರು ಕಣ್ಬಿಟ್ಟ. ಹೂಂ, ಬೆಳ್ಗಿದ್ದು ಅಣ್ಣ ಅತ್ಗೆ ನೋಡ್ಲೀ ಹಂಗೆ ಹಂಗೇ ಅಂತ ತಮ್ಮಯ್ಯ ಜಂಬ ಕೊಚ್ಕಂದ. ಸಂಗವ್ಗೆ ಮುಗ್ಲು ಮುಟ್ದಂಗೆ ಆಸೆಬೆಳ್ದು "ದೇವ್ರು ಕಾಣಸ್ಕೊಂಡ್ನಾ? ನಮ್ಗೂ ವರ ಕೊಟ್ನಾ? ಆ ವರ ಹೆಂಗದೆ? ನಾನೂ ಒಂದ್ಸಲ ಕಣ್ಣಾರೆ ನೋಡ್ತೀನಿ. ತೋರ್ಸಿ, ತೋರ್ಸೀ...." ಅಂತ ಗಂಡ್ನ ಕೈಯ್ನ ಗೆಬರಾಡಿದ್ಲು. ಗಂಟ್ನೂ ಕಸ್ಕಂದು ಬಿಚ್ಬಾಗ, ತಮ್ಮಯ್ಯ ಉರುರಿ ಸಿಟ್ನಂದ "ಥೂ ನಿನ್ನಾಸ್ಗೆ ಬೆಂಕಿಬೀಳಾ. ಹೋಗತ್ಲಾಗೆ, ಅಂತ ಹೆಂಡ್ತಿ ಕೈಯ್ನ ಕಿತ್ತೆಸ್ದು, ಹಳ್ಳ್ನ ಕಸ್ಕಳ್ಳಾಕೆ ಕೈ ಹಾಕ್ದ. ಎಲ್ಡಳ್ಳು ನೆಲ್ಲಕ್ಕೆ ಬಿದ್ಬಿಟ್ವು! ಹೇಳೋದೇನು? ಆ ಕೂಡ್ಲೇ ಬಗ್ಗಂತ ಬೆಂಕಿ ಮನ್ಗೆ ಹತ್ಕಂದ್ಬಿಡ್ತು. ಧಣಧಣಾಂತ ಮನೆ ಉರಿಯಾಕ್ಹತ್ತು. ಹಾರ್ಕಂತಾ ಹೊರಗೋಡ್ಬಂದ ಗಂಡಹೆಂಡ್ತಿ "ಅಯ್ಯಯ್ಯಪ್ಪೋ ಬೆಂಕಿ ಬೆಂಕೀ....ಬರ್ರ್ಯಪ್ಪೋ ಬರ್ರ್ಯೋ....ನಮ್ಮನೆ ಬೂದ್ಯಾತ್ರೋ" ಅಂತ ಚೀರಾಡಾಕ್ಹತ್ತಿದ್ರು. ಮಕ್ಳೂ ಎಚ್ರಾಗಿ ಹಾಹಾರಿದ್ರು. ಅವ್ರೂ ಎದೆ ಎದೆ ಬಡ್ಕಳ್ಳಾಕ್ಹತ್ತಿದ್ರು. ತಮ್ಮಯ್ಗೆ ದೇವ್ರ ಎಚ್ಚರ್ಕೆ ಮಾತು ನೆಂಪಾಗಿ "ಆದದ್ದು ಹೋಗ್ಲೀ" ಅಂತ ಉಳ್ದದ್ದೊಂದು ಹಳ್ಳ ಹಾಕ್ದ. ಬೆಂಕಿ ಆ ಕೂಡ್ಲೇ ನಂದ್ತು. ಮದ್ಲಿನಂಗಾಗ್ಲಿ ಅಂತ ಹಾಕಾಕೆ ಇನ್ನೊಂದ್ಹಳ್ಳು ಇದ್ರೆ ತಾನೆ?

# ಐತಿಹ್ಯ ಕಥೆಗಳು

# ಎತ್ತುಗಾಡಿ ಜಿದ್ದಿಗೆ ಕತ್ತಿ ಕೊಡ್ಲಿ ಕುಣ್ದಾಡಿದ್ವಂತೆ

1952ನೆಯ ಇಸ್ವಿ ಸ್ವತಂತ್ರ ಭಾರತದ ಪ್ರಥಮ ಮಹಾ ಚುನಾವಣೆಯ ವರ್ಷ. ಅಗ ನೀವಿನ್ನೂ ಗೋಲಿ ಗಜ್ಜುಗ ಆಡಿಕೊಳ್ಳುತ್ತಾ ಇದ್ದಿರಿ.

ನಮ್ಮ ತಾಲೂಕಿನಲ್ಲಿ ಎರಡು ಮುಖ್ಯ ಪಕ್ಷಗಳಲ್ಲೇ ಭಾರಿ ಪೈಪೋಟಿ ಇದ್ದದ್ದು. ಒಂದು ಕಾಂಗ್ರೆಸ್ ಪಕ್ಷ. ಮತ್ತೊಂದು ಸಮಾಜವಾದಿ ಪಕ್ಷ. ಕಾಂಗ್ರೆಸ್ಸಿಗೆ–ಜೋಡೆತ್ತಿನ ಗುರುತು. ಸಮಾಜವಾದಿ ಪಕ್ಷಕ್ಕೆ–ಗಾಡಿ.

ಕಾಂಗ್ರೆಸ್ ಪಕ್ಷದ ಹುರಿಯಾಳಾಗಿ ನಿಂತಿದ್ದವರು 'ಚಲೇಜಾವ್' ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿ ಹೆಸರುವಾಸಿಯಾಗಿದ್ದ ಹೊಸಗೊಪ್ಪದ ರುದ್ರಪ್ಪನವರು. ಸಮಾಜವಾದಿ ಪಕ್ಷದಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಜನಾನುರಾಗಿಗಳಾಗಿದ್ದ ಹೊನ್ನಾಳಿಯ ಪಟ್ಟಣಶೆಟ್ಟಿ ಮುರಿಗಪ್ಪನವರು.

ಚುನಾವಣೆಯ ಪ್ರಚಾರಕ್ಕೆ ಎರಡೂ ಪಕ್ಷದ ಪ್ರಚಾರಕರು ಗುಂಪು ಗುಂಪಾಗಿ ಊರೂರು ಸುತ್ತತೊಡಗಿದರು. ಆವಾಗ 'ಜಾತಿ ಪ್ರೀತಿ' ಅನ್ನೋದು ತಲೆ ಎತ್ತಿ ಊರೂರಲ್ಲಿ ಭೇದಭಾವಗಳು ಹೆಡೆ ಎತ್ತಿದುವು.

ಚುನಾವಣೆಯ ಕಾವು ಏರುತ್ತಿದ್ದಂತೆ, ಎತ್ತು ಗಾಡಿ ಪಕ್ಷಗಳಲ್ಲಿ ಇರಿಸು ಮುರಿಸು ಹುಟ್ಟಿಕೊಂಡಿತು. ದಿನಂಪ್ರತಿ ಎದ್ದೂ ಬಿದ್ದೂ ಮಾತಾಡುತ್ತಿದ್ದವರು ಆಜನ್ಮ ವಿರೋಧಿಗಳಂತೆ ಕೆಕ್ಕರು ಕಣ್ಣುಗಳಿಂದ ನೋಡುತ್ತಾ ಓಡಾಡತೊಡಗಿದರು.

ಚುನಾವಣೆಯ ದಿನ ಹತ್ತಿರ ಹತ್ತಿರ ಬಂದಂತೆ ಪಕ್ಷದ ಗುರುತುಗಳಿಗೆ ರಂಗೇರ ತೊಡಗಿತು. ಕಾಂಗ್ರೆಸ್ಸಿನವರು ಜೋಡೆತ್ತುಗಳನ್ನು ಮೈತೊಳೆದು, ಕೋಡುಗಳಿಗೆ ಬಣ್ಣಹಚ್ಚಿ, ಟೇಪುಕಟ್ಟಿ ಓಡಾಡಿಸುತ್ತಿದ್ದರೆ, ಗಾಡಿ ಪಕ್ಷದವರು, ಗಾಡಿಗೆ ಎಣ್ಣೆಬಣ್ಣ ಮಾಡಿ, ಹೂವು ತೋರಣಕಟ್ಟಿ ಪೂಜಿಸುತ್ತಿದ್ದರು. "ಎತ್ತಿಲ್ಲದ್ಮ್ಯಾಲೆ ಗಾಡಿ ಯಾಕ್ಬೇಕು ? ಬಸ್ವ ಇದ್ರೆ ಎಲ್ಲಾ; ಅವ್ನಿಲ್ದಿದ್ರೆ ಯಾವ್ದೂ ಇಲ್ಲ." "ಗಾಡಿ ಇಲ್ದಿದ್ರೆ ರೈತನ ಬದ್ಕು ಸಾಗೋದಾದ್ರೂ ಹೆಂಗೆ ? ಬೆಳ್ದದ್ದನ್ನ, ಹೆಣಾಸುಡೋ ಕಟ್ಗೇನ್ನ ಏನ್ ಕತ್ತೆಮ್ಯಾಲೆ ಹೇರ್ಕಂದು ಬರಾಕಾಗ್ತದಾ ?" ಈ ರೀತಿಯ ಮಾತಿನ ಚಟಾಕಿಗಳು ಎರಡೂ ಪಕ್ಷದವರಿಂದ ಸಿಡಿಯುತ್ತಿದ್ದುವು.

ಮಹಾಚುನಾವಣೆ ಮುಗಿದು ಫಲಿತಾಂಶ ಮಾರನೆಯ ದಿನ ಸಾಯಂಕಾಲದ ಹೊತ್ತಿಗೆ ಹೊರಬಿತ್ತು. ಜೋಡೆತ್ತಿನ ಕಾಂಗ್ರೆಸ್ಸು ಜಯಪಡೆದಿತ್ತು. ಆ ಪಕ್ಷದವರು ಹಿಗ್ಗಿ ಕುಪ್ಪಳಿಸುತ್ತಾ ಕುಣಿದಾಡಿದರು. ಹಮ್ಮಿನಿಂದ ಬಸವಣ್ಣನ ದೇವಸ್ಥಾನಕ್ಕೆ ಹೋಗಿ, ಪೂಜೆಮಾಡಿಸಿ ಹಣ್ಣು ಕಾಯಿ ಮಾಡಿಸಿದರು; ಕೈ ಸೋಲುವ ವರೆಗೂ ಗಂಟೆ, ಜಾಗಟೆಬಾರಿಸಿದರು. ಸೋಲು ಒಪ್ಪಿಕೊಂಡ ಗಾಡಿ ಪಕ್ಷದವರಿಗೆ ಸಂಕಟವಾದರೂ ಸುಮ್ಮನಿದ್ದರು.

ಒಂದರ್ಧಗಂಟೆ ಕಳೆಯುವುದರೊಳಗೇ, ದೇವರ ಗುಡಿಯ ಮುಂದೆ ಕತ್ತಿ, ಕೊಡಲಿ, ದೊಣ್ಣೆ ಹಿಡಿದುಕೊಂಡು ಗಾಡಿ ಪಕ್ಷದವರು ಊರೇ ನಡುಗುವಂತೆ ರಣಕೇಕೆ ಹಾಕಿದರು. ಆದದ್ದು ಇಷ್ಟು : ಜೋಡೆತ್ತಿನ ಪಕ್ಷದಲ್ಲಿ ತಲಾಟೆ ಅಂತ ಅಡ್ಡಹೆಸರಿನ ಒಬ್ಬಿದ್ದ. ಅವನು ಗಾಡಿಪಕ್ಷದ ಒಬ್ಬ ಮುದುಕಿಗೆ "ಅಜ್ಜ, ಅಜ್ಜೀ, ನಿಮ್ಗಾಡಿ ಹೊನ್ನಾಳಿ ಸೇತ್ಮಿಮ್ಯಾಲೆ ಅಚ್ಚು ಮುರ್ಕಂದು ಬಿತ್ತಂತೆ ಹೌದಾ ? ಅದ್ನ ಎಳ್ಕಂದು ಬರಾಕೆ ನಮ್ಮ ಎತ್ತುಗಳ್ನ ಕಳ್ಸಿಕೊಡಾನಾ ಮತೆ ?" ಅಂತ ಲೇವಡಿ ಮಾಡಿದನಂತೆ. ಆ ಮುದುಕಿ ಹೊಡೆಸಿಕೊಂಡವಳಂತೆ ಮನೆಗೆ ಬಂದು ಮಗನ ಮುಂದೆ ಅತ್ತಂಗೆ ಹೇಳಿದಳಂತೆ. ಇದೇ ಗಾಡಿಪಕ್ಷದವರನ್ನು ಕೆರಳಿಸಿದ್ದು ನೋಡ್ರಿ. "ಹಾಕ್ರಲಾ ಅವನ್ನ, ಸೊಂಟಾ ಮುರೀರಲಾ" ಅಂತ ಕೂಗುತ್ತಾ ತಲಾಟೆಯನ್ನು ಹುಡುಕಿ ಹಿಡಿದು ಚೆನ್ನಾಗಿ ತದುಕಿದರು. ಎರಡೂ ಪಕ್ಷದವರಿಗೆ ಗುಡಿ ಮುಂದೇ ಮಾರಾಮಾರಿ ಆಯಿತು. ಊರಿನ ಹೆಂಗಸರು ಮಕ್ಕಳು "ಗೊಳೋ" ಅಂತ ಅಬ್ಬರಿಸಿ, ಬಾಯಿ ಬಾಯಿ ಬಡಿದುಕೊಂಡು ಅಳತೊಡಗಿದರು.

ಈ ಕೂಗಾಟ ಗೋಳಾಟ ಕೇಳಿ, ಅಮ್ಮನ್ಮೆಮೇಲೆ ಬರುತ್ತಿದ್ದ ಶಂಕ್ರಪ್ಪ, ಅದೆಲ್ಲಿದ್ದನೋ ಏನೋ "ತಡೀರೋ ತಡೀರಪ್ಪಾ" ಅಂತ ಓಡೋಡಿ ಬಂದು, ಜನರ ಮಧ್ಯೆನಿಂತುಕೊಂಡು, ಕೈಮುಗಿದು "ಕೆಂಪುಮೋತಿಯೋರು ನಮ್ಮನ್ನ ಆಳ್ತಾ ಇದ್ದಾಗ ಅವ್ರ ವಿರುದ್ಧ ಊರೇ ಒಂದಾಗಿದ್ದು ನೀವೆಲ್ಲಾ ಒಂದಾಗಿದ್ರಿ. ಈಗ ಸ್ವತಂತ್ರರಾದವ್ರು



ಅಂತ ಹಿಂಗೆ ದೆವ್ವನಂಗೆ ಕುಣ್ದಾಡಾಕ್ಹತ್ತಿದ್ರ್ಯಾ ? ಎತ್ತು ಗಾಡಿ ಜಿದ್ದಾಗ್ನೆ ಕತ್ತಿ ಕೊಡ್ಲಿ ಕುಣ್ದಾಡಿದ್ರಂತೆ–ಅನ್ನೋ ಮಾತ್ನ ಹುಟ್ಟು ಹಾಕಿದ್ರ್ಯಾ ? ಇದ್ನ ಇಲ್ಗೇ ನಿಲ್ಲಿಸ್ತಿರೋ ? ಇಲ್ಲಾ ಬೆಳ್ಸಿ ದೊಡ್ಡ ಮಾಡ್ತೀರೋ ? ಮುಂದುವರ್ಸಿದ್ರೆ ಊರಮ್ಮನ ಆಣೆ ಐತಿ ! ಆದದ್ನೆಲ್ಲಾ ಮರ್ತು ಸುಮ್ನೆ ನಿಮ್ನಿಮ್ಮ ಮನೆಗೆ ಹೋಗ್ರಪಾ. ಈ ಎಲೆಕ್ಷನ್ ಜೇನ್ಗೂಡಿಗೆ ಕಿಚ್ಚು ಹಚ್ಚಾಕೆ ಬಂದಂಗೈತಿ !" ಅಂತ ಬೇಡಿಕೊಂಡ. ಅಮ್ಮನೇ ಅಪ್ಪಣೆ ಮಾಡಿದಳು ಅಂತ ತಿಳಿದುಕೊಂಡು ಗಣಮಗನ ಮಾತಿಗೆ ಎಲ್ಲರೂ ತಲೆಬಾಗಿ ಮನೆಗೆ ಹೋದರು. ಈಗ ? ಅಮ್ಮನ ಅಪ್ಪಣೆ ಒಂದು ಕಡೆ ಇರಲಿ, ಬ್ರಹ್ಮನ ಮಾತನ್ನೂ ಜನಕೇಳುವಂತಿಲ್ಲ. ಚುನಾವಣೆ ಬಂದಾಗಲೆಲ್ಲಾ ಶಂಕ್ರಪ್ಪನ ಗಾದೆ ನಮ್ಮನ್ನು ನಡುಗಿಸುತ್ತಿರುತ್ತದೆ.

# ದೆವ್ವನ ಕಾಟ್ದಾಗೆ ದಾಸರಹಟ್ಟಿ ಹಾಳಾತಂತೆ

ಆ ಹಾಳು ದಾಸರಹಟ್ಟಿ ಕತೇನಾ ? ಏನೇನೋ ಚಿತ್ರ ವಿಚಿತ್ರವಾಗಿ ಕತೆ ಹೇಳ್ತಾರೆ ನೋಡು. ಹಿಂದೆ, ಯಾವಾಗ್ಲೋ, ಎಂಟೋ ಹತ್ತೋ ದಾಸರ ಮನೆಗಳು ಅಲ್ಲಿ ಇದ್ದುವಂತೆ. ದಾಸರು ಅಂದರೆ ರಂಗನಾಥ ಸ್ವಾಮಿಗೆ ದೀಕ್ಷೆ ಕಟ್ಟಿಸಿಕೊಂಡೋರು ಅಂತ ಹೇಳ್ತಾರೆ. ದೇವರನ್ನು ನಂಬಿದ್ದ ಅವರು ರೈತಾಪಿ ಕಸುಬು ಮಾಡುತ್ತಿದ್ದರು. ಆ ಊರಿನಲ್ಲೇ ಎರಡೋ ಮೂರೋ ಕೊರಗರ ಮನೆಗಳಿದ್ದುವಂತೆ. ಅವರು ರೈತಾಪಿ ಕಸುಬಿಗಿಂತ ಹೆಚ್ಚಾಗಿ, ಮೊಲ, ಚಿಗರಿ ಹಂದಿಗಳನ್ನು ಬೇಟೆ ಆಡುತ್ತಾ, ಕುಡಿಯುತ್ತಿದ್ದುದಲ್ಲದೆ ಕಳ್ಳತನ ಮಾಡುತ್ತಾ ಜೀವನ ಮಾಡುತ್ತಿದ್ದರಂತೆ. ಗಂಟುಕಳ್ಳರ ಸಂಪರ್ಕವನ್ನು ಇಟ್ಟುಕೊಂಡಿದ್ದರಂತೆ.

ಯಾವುದೋ ಒಂದು ವರ್ಷ ಒಂದು ಅಮಾವಾಸ್ಯೆ ರಾತ್ರಿ. ಗುಡಿಗೆ ದೇವರ ಪೂಜೆಗೆಂದು ಹೋಗಿದ್ದ ಪೂಜಾರಿ, ಪೂಜೆತಟ್ಟೆಯನ್ನು ಅಲ್ಲೇ ಎಸೆದು "ಅಯ್ಯಯ್ಯಪ್ಪೋ.." ಅಂತ ಕೇಕೆ ಹೊಡೆಯುತ್ತಾ ದಾಸರ ಮುಖಂಡನ ಮನೆಗೆ ಓಡೋಡಿ ಬಂದ. ಏದುಸಿರು ಬಿಡುತ್ತಾ "ಅಯ್ಯಾ, ಅಯ್ಯಾ ಗುಡಿಗೆ ಪೂಜೆ ಮಾಡಾಕ್ಹೋಗಿ ದೀಪ ಮುಡ್ಸಿದೆ ಇಬ್ರು ಸತ್ತೋರ್ಹಂಗೆ ತೆಕ್ಕೆ ಹಾಕ್ಕಂದು ಬಿದ್ಕಂದಿದ್ದಾರೆ. ಇಬ್ರೂ ಗಂಡಸ್ರಂಗೇ ಕಂಡ್ಹಂಗಾತು" ಅಂತ ಹೇಳಿದ. ಆ ಮುಖಂಡ ಹತ್ತಾರು ಜನ ಸೇರ್ಸಿ, ಪಂಜು, ಹಿಲಾಲು ಹಚ್ಚಿಕೊಂಡು ಗುಡಿಗೆ ಹೋದರು. ನೋಡ್ತಾರೆ–ಇಬ್ಬರು ಮೂಲೆ ಹಿಡಿದು ಕೈಕೈ ಹಿಡಿದುಕೊಂಡು ಕುಳಿತಿದ್ದರು. ಒಬ್ಬನು ಕೊರಗರವನು ಮತ್ತೊಬ್ಬನು ದಾಸರವನು. ಕೊರಗರವನು ದಾಸರವನನ್ನು ಕೈಹಿಡಿದು ಕುಳಿತಿರುವ ದೃಶ್ಯ ಮುಖಂಡನಿಗೆ ಬಿಟ್ಟದಷ್ಟು ಸಿಟ್ಟುಬರುವಂತೆ ಮಾಡಿತು. ಆಗ "ಲೇ ಕೊರಗ್ನನ್ಮಗ್ನೇ, ಬಿಡ್ಲಾ ಕೈಯ್ನ! ದಾಸ್ರನ್ನ ಮುಟ್ಟೋ ಅಸ್ಟು ಸೊಕ್ಕೇನ್ಲಾ? ಬಿಡೋದಿಲ್ಲ ಕೈಯ್ನ" ಎಂದು ಕೂಗಿದಂತೆ ಗದರಿಸಿದ. ಅವರು ಕಣ್ಣು ಕಿಸಿದು ಗುರ್ರಿಸ್ನುವಂತೆ ದುರುಗುಟ್ಟಿ ನೋಡುತ್ತಾ "ಹ್ಞಾಂಹ್ಞೂಂ" ಅಂತ ನರಳುತ್ತಾ ಎದ್ದು ಮತ್ತೆ ಮೂಲೆ ಹಿಡಿದು ಕುಳಿತರು. ತಕ್ಷಣ ಚಟ್ಟನೆ ಎದ್ದವರೇ ಕೈ ಕೈ ಹಿಡಿದುಕೊಂಡು ಗುಡಿಯ ಅಂಗಳಕ್ಕೆ ಜಿಗಿದು, ಕತ್ತಲಲ್ಲೇ ಊರನ್ನು ನುಂಗುವಂತೆ ಕೆಕ್ಕರಿಸಿ ನೋಡಿದರು. ಮತ್ತೆ ಆ ಕೂಡಲೇ ಗುಡಿಯಒಳಕ್ಕೆಬಂದು ಮೂಲೆಹಿಡಿದು ಉದುರಿಹೋಗುವಂತೆ "ಕರಕರಾಂತ" ಹಲ್ಲು ಕಡಿಯತೊಡಗಿದರು. ಒಬ್ಬನು ಧೈರ್ಯತಂದುಕೊಂಡು "ಯಾಕ್ರಲಾ ಹಿಂಗೆ? ಮಾತಾಡ್ರಲಾ. ಏನಾತ್ರಲಾ ?" ಅಂತ ಪ್ರಶ್ನೆ ಮಾಡಿದ. ಅವರು ಕೆಂಗಣ್ಣಿನಿಂದ ಬಿರಿಬಿರಿ ನೋಡಿದರೇ ವಿನಾ ಮಾತಿಲ್ಲ; ಕತೆ ಇಲ್ಲ. ದೆವ್ವ ಹಿಡ್ಕಂದು ಬಿಟ್ಟನೆ. ಮೂಕ ದೆವ್ವಾನೇ ಇರ್ಬೇಕು" ಅಂತ ತೀರ್ಮಾನಕ್ಕೆ ಬಂದರು. ಕೆಲವರಿಗೆ ಭಯವಾದ್ರೆ ಮತ್ತೆ ಕೆಲವರಿಗೆ ತಮಾಷೆ.

ಹಿಡಿದ ದೆವ್ವ 'ಬರೆ' ಇಲ್ಲಾ ಮೆಣಸಿನ ಕಾಯಿ 'ಉರ್ಲಿ'ಗೆ ಬಾಯಿ ಬಿಡುತ್ತವೆಯಂತೆ. ಇದು ಯಾರ ತಲೆಗೆ ಹೊಳೆಯಿತೋ ಏನೋ. ಒಬ್ಬನು ರೊಟ್ಟಿಬೇಯಿಸುವ ಹಂಚಿನ ತುಂಬಾ ನಿಗಿನಿಗಿ ಉರಿಯುವ ಕೆಂಡಗಳನ್ನು ತುಂಬಿಕೊಂಡು ದೆವ್ವ ಹಿಡಿದವರ ಮುಂದೆ ತಂದಿಟ್ಟನು. ಇನ್ನೊಬ್ಬನು ಎರಡು ಕಬ್ಬಿಣದ ಸರಳುಗಳನ್ನು ಕಾಯಿಸಲು ಕೆಂಡದ ಮೇಲಿಟ್ಟ ಮತ್ತೊಬ್ಬನು ಒಂದು 'ಗುಳುಪುಟ್ಟಿ' ಯಷ್ಟು ಕೆಂಡದಂಥ ಮೆಣಸಿನ ಕಾಯನ್ನು ಹಿಡಿದುಕೊಂಡು "ಯಾರ್ನೀವು ? ಬಾಯ್ಬಿಡ್ತೀರೋ ಇಲ್ಲೋ ?" ಎಂದು ಪ್ರಶ್ನಿಸಿದ. ಮತ್ತೆ ಅದೇ–ಗುರುಗುಟ್ಟಿ ತಿನ್ನುವಂತಹ ನೋಟ. ಮಾತಿಲ್ಲ, ಕತೆಇಲ್ಲ. ಸಿಟ್ಟನಿಂದ ಕೆರಳಿದ ಅವನು ಹಿಡಿ ಮೆಣಸಿನ ಕಾಯನ್ನು ಕೆಂಡದ ಮೇಲೆ ಹಾಕಿಯೇ ಬಿಟ್ಟ. ಉಸಿರು ಕಟ್ಟುವಂತೆ ಘಾಟೋ ಘಾಟು ! ಇನ್ನೊಬ್ಬನು ಸರಳುಗಳನ್ನು ಎತ್ತಿಕೊಂಡು ದೆವ್ವಹಿಡಿದವರಿಗೆ "ಚರ್ ಚರ್" ಎನ್ನುವಂತೆ ಎರಡೆರಡು ಬರೆಹಾಕಿದ. ಬರೆ ಬಿದ್ದದ್ದೇ ತಡ, ಒಂದೇ ದನಿಯಲ್ಲಿ "ಅಯ್ಯಯ್ಯೋ..ಸತ್ನೆಪ್ಪೋ..." ಎಂದು ಚೀರುತ್ತಾ ದೆವ್ವಗಳು ಎದ್ದು ನಿಂತವು. ಅದರಲ್ಲಿ ಒಂದು "ಅಯ್ಯಯ್ಯೋ... ನನ್ತಾಳಿ, ನನ್ತಾಳಿ...ಕುಬ್ಸಾ...ಸೀರೆ...ಬ್ಯಾಡ್ರಪಾ, ಮಾನಕಳೀ ಬ್ಯಾಡ್ರೀ" ಅಂತ, ಮಾನಮುಚ್ಚಿಕೊಳ್ಳುವ ಹೆಣ್ಣಿನಂತೆ ಅಳುತ್ತಾ ನಟನೆ ಮಾಡಿ ಬಾಯಿ ಬಿಟ್ಟಿತು. ಇನ್ನೊಂದು "ಅಯ್ಯಯ್ಯಪ್ಪಾ, ಸತ್ತೇ..." ಅಂತ ತಲೆ ಹಿಡಿದುಕೊಂಡು ಹಲ್ಲು ಕಡಿಯುತ್ತಾ ಮುಂದುವರಿಸಿತು–"ಒಂಬತ್ತು ತಿಂಗ್ಳ ಹಿಂದೆ...ಯಾಪಾರ ಮಾಡ್ಕಂದು ನನ್ನ ಹೆಂಡ್ತಿ ಜತ್ಯಾಗೆ ಬರ್ತಿದ್ದೆ. ಆಗ ಕತ್ಲಾತು. ಈ..ಈ..ಬ್ರೂ ನಮ್ಮ್ಯಾಲೆಬಿದ್ದು ಹಿಡ್ಕಂದ್ರು. ಈ ನನ್ನ ಹೆಂಡ್ತೀನ ಮರಕ್ಕಕಟ್ಟಿ, ತಾಳಿ ಕಿತ್ಕಂದು ಏನ್ಮಾಡಿದ್ರೂಂತ... ಸಿವಸಿವಾ..ನನ್ಕಣ್ಮುಂದೇ ಕಣ್ರೋ....ಆಮ್ಯಾಲೆ ನನ್ನ....ತ..ತ....ಹಂಗೇ ಬುಡ್ತೀವಾ?"

ಎಂದು ಹೇಳುತ್ತಾ ಕತ್ತರಿಸಿ ಬಿದ್ದಂತೆ ದೊಪ್ಪನೆ ಬಿದ್ದಿತು. ದೆವ್ವ ಹಿಡಿದ ಇನ್ನೊಬ್ಬನೂ ಹಾಗೆಯೇ ಬಿದ್ದ.

ಒಂದು ವರ್ಷ ತುಂಬುವುದರೊಳಗೇ ದಾಸರಹಟ್ಟಿಯಲ್ಲಿ ಎಂಟ್ಹತ್ತು ಜನ ಚಟ್ಟ ಏರಿದರಂತೆ. ಮುಂದೆ ಊರಿಗೆ ಊರೆ ಕಂಗಾಲಾಗಿ ದಿಕ್ಕಾಪಾಲಾದರಂತೆ. ಹೀಗೆ ಊರಿಗೆ ಊರೇ "ಕದಕಟ್ಟಿ" ಹೋಯಿತು.

ಈಗ ದಾಸರಹಟ್ಟಿಯ ಆಸ್ತಿಗಳೆಲ್ಲಾ ಬೇರೆ ಊರಿನ ಹಣವಂತರ ಸೊತ್ತಾಗಿವೆ. ಇದುವರೆಗೆ ಆ ಊರಿನಲ್ಲೇ ಮನೆಕಟ್ಟಿಕೊಂಡು ವಾಸಮಾಡುವ ಸಾಹಸವನ್ನು ಯಾರೂ ತೋರಿಸಿಲ್ಲ !



## ಪ್ರಾಣಿ ಕಥೆಗಳು

## ಆನೆ ಜರ್ದು ಒಂಟೆ ಹುಟ್ದಂಗೆ

ಒಂದು ಕಾಡಂತೆ. ಅಲ್ಲಿ ಎಲ್ಲಾ ತರ್ದ ಪ್ರಾಣಿಗಳು ವಾಸ್ವಾಗಿದ್ವು. ಒಂದಿನ ಕಾಡ್ಹಬ್ಬ ಮಾಡಾನಾಂತ ಸಿಮ್ಮರಾಜ ಯೋಚ್ನೆಮಾಡಿ, ಎಲ್ಲಾ ಪ್ರಾಣಿಗಳ್ಗೂ ಇಂಥ ದಿನ ಇಂಥ ಜಾಗ್ದಾಗೆ ಸೇರಾನಾಂತ ಹೇಳಿ ಕಳ್ಸಿದ.

ನರಿ, ತ್ವಾಳ, ಚಿಗ್ರಿ, ಹಂದಿ, ಕಾಡೆಮ್ಮೆ, ಕ್ವಾಣ, ಒಂಟೆ ಹೀಗೆ ನಾಕ್ಕಾಲಿನ ಪ್ರಾಣಿಗಳು ಗೊತ್ತು ಪಡ್ಸಿದ ದಿನ, ಗೊತ್ತು ಪಡ್ಸಿದ ಜಾಗಕ್ಕೆ ಬಂದು ಸೇರಿದ್ವು. ಒಜೆಯಾದ ಹೊಟ್ಟೆ ಹೊತ್ಕಂದು ಬರೋದು ಆನೆಣ್ಣಗೆ ಕಸ್ಟಾಗಿ ಬರೋದು ಸ್ವಲ್ಪ ತಡ್ವಾತು.

ತಡ್ವಾಗಿ ಬಂದ ಆನೆಣ್ಣನ ಸೊಂಡ್ಲೆಲ್ಲಾ ಮಣ್ಣಾಗಿತ್ತು. ಸಿಮ್ಮ ರಾಜಗೆ ನಮಸ್ಕಾರ ಮಾಡಿ, ತಡ್ವಾಗಿ ಬಂದದ್ಕೆ ಕಾರ್ಣ ಹೇಳಿ, ತಪ್ಪೂಂತ ಒಪ್ಕಂದು, ಒಂದಡ್ಕೆ ನಿಂತ್ಕಳ್ತು.

ಒಂಟೆ, ಅದ್ವರ್ಗೂ ಆನೇನ ನೋಡೇ ಇರ್ಲಿಲ್ಲ. ಕರೇ ಬಂಡೆ ಆಕಾರ ! ಆ ಹೊಟ್ಟೆ, ಕಾಲು, ಕಿವಿ–ಅಬ್ಬಬ್ಬಾ ! ಅರೇ, ದೆವ್ನಂತೋನ್ಗೆ ಈಟೇಟೇ ಕಣ್ಣು ! ಸೊಂಡ್ಲು, ಕಣ್ಣು ನೆಲ್ದಾಗೇ! ಅದ್ರಿಂದ್ಲೇ ನೆಲ್ದ ಮ್ಯಾಗಿಂದ್ನೆಲ್ಲಾ ತಿಂದೂತಿಂದೂ ಹಿಂಗೆ ದೆವ್ವ ಬೆಳ್ದಂಗೆ ಬೆಳ್ದಿರ್ಬೇಕು. ಆನೆಯ ಆಕಾರ ಒಂಟೆಗೆ ಬಾಳ ಇಚಿತ್ರ ಅನ್ಸಿ "ನಿಜವಾಗ್ಲೂ, ಇವನ್ನ ದೇವ್ರು ಹುಟ್ಸಿರಾಕಿಲ್ಲ ! ದೆವ್ನೇ ಹುಟ್ಸಿರ್ಬೇಕು ಅಲ್ವಾ ? ನೋಡ್ಕೋಡು ಎಲ್ರೂ ಎಲ್ಲಿ ನೋಡ್ತಾರೆ, ಇವ್ನು ಎಲ್ಲಿ ಯಾವುದ್ನ ನೋಡ್ತಿದಾನೆ" ಅಂತ ಪಕ್ಕಾಗಿದ್ದ ನರೀನ್ನ ತಿವ್ದು ಆನೇನ ಜರೀತು.

ಒಂಟೆಯ ಒಲ್ಟುಮಾತು ಎಲ್ರಿಗೂ ಕೇಳಿಸ್ತು. ಆಗ ಕೊಡ್ಲಿ ಇಂದ್ಲೇ ಸೊಂಡ್ಲು ಕಡ್ದಂಗಾತು ಆನೆಗೆ. ಕಣ್ಣಿಂದ ಬಳ ಬಳ ಕಣ್ಣೀರು ಸುರುದ್ವು. ಆನೆಣ್ಣ ಒಂದೂ ಮಾತಾಡ್ಲಿಲ್ಲ. ಹಂಗೇ ಅಳ್ತಾ ಸುಮ್ನೆ ನಿಂತ್ಕಂದಿತ್ತು.

ಒಂಟೆಯ ಒಲ್ಟು ಮಾತ್ನಿಂದ ಸಿಮ್ಮರಾಜಗೆ ಕೊಪ್ಪರ್ಗೆ ಅಸ್ಟು ಸಿಟ್ಬಂದು "ಏಯ್ ಒಂಟೆಣ್ಣಾ, ನಿನ್ಗೆ ತಲೆ ಸರಿ ಐತೋ ಇಲ್ಲೋ ? ನಾವು ಇಲ್ಲಿ ಸೇರಿರೋದು ಯಾತ್ಕೆ ? ಹಿಂಗೆ ಒಬ್ರುಗೊಬ್ರು ಜರ್ದಾಡಾಕಾ ? ಎಲ್ರನ್ನೂ ದೇವ್ರೆ ಹುಟ್ಸಿರೋದು ! ದೇವ್ರು ಸೃಸ್ಟೀನ ಜರಿದ್ರೆ, ದೇವರ್ನೇ ಜರ್ದಂಗೆ; ದೊಡ್ಡೊಂದು ಪಾಪ ಮಾಡ್ದಂಗೆ ನೆಂಪಿರ್ಲಿ !" ಅಂತ ಎಚ್ಚರ್ಕೆಕೊಟ್ಟು, ಮನುಸ್ರುಮಾಡ್ದಂಗೇ ಪ್ರಾಣಿಗಳೂ ಉಗಾದಿ ಹಬ್ಬದ ದಿನ ಕಾಡ್ಹಬ್ಬ ಮಾಡಾನಾಂತ" ತೀರ್ಮಾನಿಸಿ ತಮ್ತಮ್ಮ ಮನೆಗೋದ್ವು.

ಆನೆ ಸಾಪಳಿಸ್ತೋ, ಇಲ್ಲಾ ತಾನು ಹುಟ್ಸಿದ ಜೀವಾನ ಒಂಟೆ ಜರ್ದಿದ್ರಿಂದ, ತನ್ನನ್ನೇ ಜರ್ದಂಗಾತು ಅಂತ ಸಿಟ್ಬಂದ ದೇವ್ರು ಸಾಪಳ್ಸಿದ್ನೋ ? ಮುಂದೆ ಹುಟ್ಟಿದ ಒಂಟೆಗಳೆಲ್ಲಾ ಹುಟ್ತಾನೇ ಮುಗ್ಲು ನೋಡ್ಕಳ್ತಾ ಹುಟ್ಯಾಕ್ಹತ್ತಿದ್ವಂತೆ !

## ಹುಲಿಪಟ್ಟೆ ಕಂಡು ನರಿ ಬರೆ ಹಾಕಿಸ್ಕಂಡ್ಹಂಗೆ

ಒಂದು ಕಾಡ್ನಾಗೆ ಒಂದ್ಹುಲಿ ಒಂಧ್ನರಿ ಇದ್ವು. ಹುಲಿ ಅಂದ್ರೆ, ಅಂತಿಂತದ್ದಲ್ಲ! ಕನ್ನಡಿಯಂಗೆ ಫಳಫಳಾಂತ ಮಿರುಗ್ಟೊಕಣ್ಣು, ಕ್ವಾರ್ಮೀಸೆ, ಕಪ್ಪು ಬಣ್ದಾಗೆ ಬರ್ದಂಗಿದ್ದ ಮೈಮ್ಯಾಗ್ನ ಕರೀಪಟ್ಟೆ. ಹೆಬ್ಬಾವ್ನಂತ ದ್ವಡ್ಡ ಬಾಲ! ಅದ್ರ ಕಸ್ವು, ದರ್ಪ, ದರ್ಬಾರು–ಇವ್ನೆಲ್ಲಾ ಮರೆಯಾಗೇ ನಿಂತ್ಕಂದು ನೋಡ್ತಿದ್ದ ನರಿಗೆ, ಜೀವ 'ಪುಕಪುಕ' ಅನ್ಸಿತ್ತು. ಹಂಗೇ ಹೊಟ್ಟುರೀನೂ ಆಗ್ತಿತ್ತು. ತಾನೂ ಅದ್ರಂಗೆ ಯಾಕೆ ಆಗ್ಬಾರ್ದು? ಹಂಗಾಗಾಕೆ ಏನ್ಮಾಡಾನಾಂತ ಯೋಚ್ನೆಮಾಡ್ತು. ಯಾವ್ದಾರೀನೂ ಹೊಳಿಯ್ದೆ ಸೀದಾ ತನ್ನ ದೇವ್ರ ಹತ್ರ ಪಯ್ಣ ಬೆಳ್ಸಿ ನಮಸ್ಕಾರ ಮಾಡಿ ನಿಂತ್ಕಳ್ತು. ಭಕ್ತನ್ನ ಕಂಡ ದೇವ್ರು ಏನಪಾ ಭಕ್ತಾ ? ಯಾಕೆ ಮಕ ಸಪ್ಪಗೈತೆ ? ಮಟ್ಟ ಹಾಕಿಸ್ಕೊಳ್ಳೋರು ಯಾರೂ ಸಿಕ್ಲಿಲ್ವಾ? ಬಂದದ್ದ್ಯಾಕೆ?" ಅಂತ ಕೇಳ್ದ. ಅದ್ಕೆ ನರಿ "ದೇವ್ರೇ, ಹೇಳೋದ್ನ ಎಸ್ಟು ಹೇಳಿದ್ರೂ ಕಡ್ಮೆನೇ. ಆ ಹುಲಿ ತೋರ್ಸ್ತೋಸೊಕ್ಕು, ದರ್ಪ, ದರ್ಬಾರು ನಿಮ್ಗೆ ಗೊತ್ತೇ ಐತಲ್ಲ. ತಾನೇ ಕಾಡ್ನ ಸೂರ ಆಗಿದ್ದಾನೆ. ಎಲ್ಲರ್ನೂ ಹೆದರಿಸ್ಕಂದು, ಎಲ್ಲಾ ಸೀಟಿ ಕೊಳ್ದಂಗೆ ಮುಕ್ಕಿ "ಯೇಂಮ್ಮಂತ" ಗಡ್ರು ಹಾಕ್ತಿರ್ತಾನೆ. ಕ್ವಾರ್ಮೀಸೆ ತಿರುವ್ತಾ, ಕಣ್ಣು ಕೆಕ್ಕರ್ಸಿ ನಮ್ಕಡೆ ನೋಡ್ತಾ ಗಡ್ಕು ಹಾಕ್ತಿರ್ತಾನೆ. "ಹಿಂಗಾದ್ರೆ ನಾವು ಸಾಯದೇ ಸೈ" ಅಂತ ಪುಕಾರ್ಮಾಡ್ತು. ಭಕ್ತನ ಮಾತ್ನ ಆಲಿಸ್ದದೇವ್ರು "ಭಕ್ತಾ, ಇದ್ರಾಗೇನು ತಪ್ಪೈತಿ? ನರಿ ನರಿಯೇ, ಹುಲಿ ಹುಲಿಯೇ ! ಅವ್ರವ್ರು ಪಡ್ಕಂದು ಬಂದದ್ದು. ಅವ್ರವ್ರ ಜೀವಣ್ದ ದಾರಿ ಅವ್ರವ್ರಿಗೇ ಬಿಟ್ಟದ್ದು. ಇವತ್ತು ನೀನ್ಯಾಕೆ ಬಂದೆ ? ಅದ್ನ ಹೇಳೀಗ" ಅಂತ ಕೇಳ್ದ. ದೇವ್ರೇ ನಾನೂ ಹುಲಿಯಂಗೇ ಆಗ್ಬೇಕು. ಅದ್ರಂಗೇ ಕರೀಪಟ್ಟೆ ಮೈಮ್ಯಾಲೆ ಬರ್ಬೇಕು. ಹಂಗಾಗಾಕೆ ದಾರಿತೋರ್ಸು. ಇಲ್ಲಾ ಅನ್ನೋದಾದ್ರೆ ಹಂಗಾಗ್ಲೀ ಅಂತ ವರಕೊಡು" ಅಂತ ಕೈ ಮುಗ್ದು ನರಿ ಬೇಡ್ಕಂತು. ಈ ಕಂತ್ರಿ ಭಕ್ತಗೆ ಬುದ್ಧಿ ಕಲ್ಸಾನಾಂತ ಮನಸ್ನಾಗೆ ತೀರ್ಮಾನಿಸ್ಕಂದ ದೇವ್ರು–"ಹುಚ್ಚಪ್ಪಾ, ಇಂತ ಸಣ್ಣ ಇಸ್ಯಕ್ಕೆ ವರಾನ ಹಾಳ್ಮಾಡಾರಾ ? ಒಂದು ದಾರಿ ಐತ್ನೋಡು. ಬಾಳ ನೋವು ತಿನ್ನೋ ದಾರಿ ಅದು. ಕರೀ ಪಟ್ಟೆಯ್ಹಂಗೆ ಬಣ್ಣ ಹಚ್ಕಂದ್ರೆ ಅದು ಕಾಯಂ ನಿಲ್ಲಲ್ಲ. ಹುಲಿಯಂತ ಪಟ್ಟೆ ಕಡೇ ತಂಕ ಇರ್ಬೇಕೂ ಅನ್ನಾದಾದ್ರೆ, ನನ್ನ ದ್ವಡ್ಡ ಭಕ್ತ ಒಬ್ನಿದ್ದಾನೆ. ನಾಳೆ ಇದೇ ಹೊತ್ಗೆ ಅವನ್ತಾವ ಹೋದ್ರೆ ಪಟ್ಟೆಹಾಕ್ತಾನೆ. ಎಲ್ಲಾ ತಡ್ಕಾಬೇಕು ಮತ್ತೆ!" ಅಂತಂದ ದೇವ್ರು ಜಾಗೀನೂ ತಿಳ್ಸಿ "ಹೋಗ್ಬಾ, ಒಳ್ಳೇದಾಗ್ಲಿ" ಅಂತ ನರೀನ ಕಳ್ಸಿಕೊಟ್ಟ.

ತಾನು ಹುಲೀನೆ ಆದೆ ಅಂದ್ಕಂತಾ ಧೈರ್ಯ ತುಂಬ್ಕಂದೇ ದೇವ್ರು ಹೇಳ್ದ ಜಾಗಕ್ಕೆ ತಪ್ದೆ ನರಿ ಹೋತು. ಅಲ್ಲಿ ಬೆಂಕಿ 'ಧಣಧಣಾಂತ' ಉರೀತಿತ್ತು. ಅದ್ರಾಗೆಲ್ಲ ಕಬ್ಬಿಣ್ದ ಕುಳ ಕಣ್ಣುಕುಕ್ಕಂಗೆ ಕಾದಿದ್ವು, ನರಿಗೆ ಜೀವ ಬಾಯಿಗ್ಬಂದಂಗಾದ್ರೂ ತಯಾರಾಗಿ ಕಣ್ಮುಚ್ಚಿ ನಿಂತ್ಕಳ್ತು. ದೇವ್ರ ಆ ದ್ವಡ್ಡ ಭಕ್ತ ಎಲ್ಲಾ ಕೈಯ್ಗೆ ಅರ್ಬಿ ಸುತ್ಕಂದಿದ್ದ. ವಲ್ಕೆ, ಬೆಂಕ್ಯಾಗಿಂದ ಕಾದ ಕುಳಾನ, ಎಲ್ಲಾ ಕೈಯಾಗೆ ಒಂದೊಂದು ತಗಂದು "ಚರಕ್, ಚುರುಕ್, ಚೊರಕ್" ಅಂತ ಬಾಲಕ್ಕೆ ಎಲ್ಡು, ಎಲ್ಡಾ ಅಂಡಿಗೆ ಮೂರ್ಮೂರು, ಎಲ್ಡಾ ಮಗ್ಲಿಗೆ ನಾಕ್ನಾಕು ಬರೆ ಹಾಕಿದ್ದೇ ತಡ ಹೇಂವ್ರೋ... ಹೇಂವ್ರೊ ವ್ರೋ" ಅಂತ ದಿಕ್ಕು ದಿಸೆ ಕಾಣ್ದಂಗೆ ಓಟಬಿದ್ದು, ಕಡೀಗೆ ಒಂದು ಹಾಳು ಬಾವ್ಯಾಗೆ ನೆಗೆದ್ಬಿತ್ತು.

## ಕುರಿ ವರಕೇಳಾಕೆ ಹೋಗಿ ಜರಕ್ಕೆ ವರ ಪಡ್ಕಂತಂತೆ !

ಒಬ್ಬ ಕುರ್ಬಣ್ಣಿದ್ದ. ಅವನ್ಹತ್ರ ಒಂದ್ಕುರಿ ಇತ್ತು. ಅದ್ನ ಹೆಂಗೆ ಸಾಕ್ದ ಅಂದ್ರೆ, ಒಳ್ಳೆ ಕ್ವದಾರಿ ಆಗಂಗೆ ಸಾಕ್ದ. ಅಂದಾಜ್ಗಿಂತ ಒಂದುವರೆ ಪಟ್ಟು ಯಾಪಾರ ಸಿಕ್ಕದ್ರಿಂದ ಅದ್ನ ಕಟುಗನ್ಗೆ ಮಾರ್ಬಿಟ್ಟ. ಆ ಕಟ್ಗ ಆ ಕುರಿಕೊಳ್ಳಿ ಹಗ್ಗ ಕಟ್ಕಂದು ಎಳ್ಕಂದ್ಹೋದ.

ಆ ಕಟುಗ್ನ ಮನೇನೋ: ಒಂದ್ಕುರಿ ಕೊಯ್ದು, ಚವ್ಡ ಸುಲ್ದು ನೇತ್ಹಾಕಿದ್ದ. ಸೂರ್ನಾಗಿಂದ ಒಂದಂದೇ ಹನಿ ನೀರು ಬಿದ್ಹಂಗೆ ಕತ್ನಾಗಿಂದ ರೈತ ತಟಗುಟ್ತಿತ್ತು. ಕಡ್ದ ಒಂದು ಕಾಲ್ನ, ಕಡ್ದು ಇಟ್ಟಿದ್ದ ತಲೆ ಬಾಯ್ನ ಅಗ್ಲಿಸಿ ಅಡ್ಡ ಸಿಗ್ಸಿದ್ದ. ಒಂದ್ಕಡೆ ಒಂದು ವ್ಯಾಕೆ, ಇನ್ನೊಂದ್ಕಡೆ ಒಂದು ಹೋತಿನ ಮರೀನ ಕಟ್ಟಿದ್ದ. ಅವು ವ್ಯಾಹಹಾ ವ್ಯಾಹಹಹಾ" ಅಂತ ಬೆದರ್ಕಂದು ಕೂಗ್ಕೊಳ್ತಿದ್ವು. ಇದ್ನೆಲ್ಲಾ ನೋಡ್ದ ಕ್ವದಾರಿ ಕುರಿಗೆ ಜೀವ್ವಿಲ್ಲಂತು. 'ಜರ್ರೋ' ಅಂತ ಉಚ್ಚೆ ಹೊಯ್ದು ಪುಳುಪುಳೂಂತ ಹಿಕ್ಕಿ ಹಾಕ್ತು. 'ಮರ್ರ್ಮಸಿ' 'ಚಟ್ಟಂತ' ಹಗ್ಗ ಹರ್ಕಂದು, ಗುಂಗೆ ಹುಳ್ದಂಗೆ ಪರಾರಿ ಆತು. ಆ ಕಟ್ಗ ಬಾಯ್ಬಾಯಿ ಬಡ್ಕಂತಾ "ಹಿಡ್ಕಳ್ರಪಾ ಹಿಡ್ಕಳ್ರಪಾ" ಅಂತ ಬೆನ್ಹತ್ತಿದ್ರೂ ಸಿಕ್ಲಿಲ್ಲ. ಒಂದ್ವಾರ ಹುಡ್ಕಿದ್ರೂ ಆ ಕ್ವದಾರಿ ಸಿಗ್ಲೇ ಇಲ್ಲ.

ಹಿಂಗೆ ತಪ್ಪಿಸ್ಕಂದ ಕ್ವದಾರಿ ಕುರಿ, ಒಂದಿನ ದೇವ್ರನ್ನ ಕಂಡು, ದೇವ್ರಮುಂದೆ 'ಬ್ಯಾಬ್ಯಾಬ್ಯಾ' ಅಂತ ಅಳ್ತಾ ಉಲ್ಡಾಡ್ತಂತೆ. ಆಗ ದೇವ್ರು ಕಣ್ಬಿಟ್ಟು "ಯಾಕಪಾ, ಯಾಕ್ಹಿಂಗೆ ಉಲ್ಡಾಡ್ಕಂದು ಅಳ್ತೀಯಾ ? ಏಳೇಳು ಎದ್ದೇಳು. ಅಂತಾದ್ದು ನಿನ್ಗೆ ಬಂದಿರೋದಾದ್ರೂ ಏನು ?" ಅಂತ ಕೇಳ್ದ. ಅದ್ಕೆ ಕುರಿ ಎದ್ದು ನಿಂತ್ಕಂದು, ಕಟುಗ್ರ ಮನೆಯಾಗೆ ನೋಡಿತ್ತಲ್ಲ ರಾಣರೈತದ ಕೊಲೇನ ಅದ್ನೆಲ್ಲಾ ಅತ್ಕಂತಾ ಹೇಳ್ತು. ಹೇಳಿ ಆದ್ಮ್ಯಾಲೆ "ಹಿಂಗೇ ಆಗ್ತಿದ್ರೆ ನಮ್ಕುಲ ಹೆಂಗೆ ಉಳ್ದಾತು ? ದೇವ್ರೇ ನಮ್ಮ ಮಾಂಸೆಲ್ಲಾ ಇಸ ಆಗ್ಹಂಗೆ ವರಕೊಡು. ಆವಾಗಾದ್ರೂ ನರ್ಮ್ರನ್ಸ ನಮ್ನಕೊಯ್ಕಂದು ತಿನ್ನಾದಾದ್ರೂ ಬಿಟ್ಟಾನು" ಅಂತ ಕೇಳ್ಕಂತು. ಅದ್ಕೆ ದೇವ್ರು ಏನಂದ ಗೊತ್ತಾ ? "ಕುರಿಯಪ್ಪ ಒಂದೊಂದು ಜೀವ್ಕೆ ಇಂತಿಂತೋದು ಹಿಂಗಿಂಗೇ ಅಂತ ಹಣೆಯಾಗೆ ಬರ್ದು ಬಿಟ್ಟೈತಲ್ಲಾ ! ಗರ್ಡ ಹಾವನ್ನಲ್ದೆ ಸ್ಯಾವ್ಗಿ ತಿಂತದಾ ? ಆಡಾವು ಕಪ್ಪೆ ತಿನ್ನೋದ್ಬಿಟ್ಟು ಕಲ್ಲ ತಿಂತದಾ ? ಆ ಕಪ್ಪೆ ನೊಣಾಬಿಟ್ಟು ಮಣ್ಣ ತಿಂತದಾ ? ಇದೇ ಬದ್ಕಿನ ಸ್ವಾದ. ಹೇಳ್ಬೇಕೂಂದ್ರೆ ನಿನ್ನ ನೋಡಿದ್ಕೂಡ್ಲೇ ನನ್ಗೇ ತಿಂದ್ಬಿಡಾನಾಂತ ಮನಸ್ಸಾತು" ಅಂತ ಅಂದ್ಕೂಡ್ಲೇ "ದೇವ್ರೂನೂ ಹಿಂಗಾ ?" ಕುರಿಗೆ ನಾಚ್ಕೆ ಆಗಿ, ನರ ನರ್ಗ್ಗಿಟ್ಹಂಗೆ ಕತ್ನ ತಗ್ಗಿಸ್ತು. ಅದ್ಕೆ ಆ ಹೊತ್ನಾಗೇ ಭಾರಿ ಜರ ಅವ್ರಿಕಂದ್ವು. ಗಡಗಡಾಂತ ನಡುಕ್ತಾ 'ದಪ್ಪಂತ' ಕಡ್ಕಂದು ಬಿದ್ದು 'ಬ್ಯಾಬ್ಯಾಬ್ಯಾ' ಅಂತ ಹೊಯ್ಕಳ್ಳಾಕ್ಹತ್ತು. ಆಗ ದೇವ್ರು "ಹೂಂ, ಏಳೇಳು. ಎದ್ದು ಸಿದಾ ಮನೆದಾರಿ ಹಿಡಿಯಪಾ" ಅಂದ. "ದೇವ್ರೇ...ದೇವ್ರೇ. ಹ್ಞುಂ ಹ್ಞುಂ ಹ್ಞೂಂ...ಬಾಳ ಜರ ಹ್ಞಾ ಹ್ಞೂಂ ಹ್ಞೂಂ ಚಳಿ ಬ್ಯಾರೆ. ಜರಜರ....ಚಳಿಚಳಿ....ಎದ್ದೇಳಾನಾಂದ್ರೇ ಸಕ್ತಿನೇ ಇಲ್ಲ. ನೀನೇ ನನ್ನ ತಿಂದು ಮುಗಿಸ್ಬಿಡು. ಮುಗಿಸ್ಬಿಡು" ಅಂತ ಬುಡುಬುಡು ಉಲ್ಡಾಡ್ತಾ ಅಳ್ತಾ ಕೇಳ್ಕಂತು. ಅಗ ದೇವ್ರ ಕಳ್ಳು ಚುರುಕ್ಕಂತ ಕರಗ್ತು. ಅವಾಗ ಹಿಂಗೆ ವರ ಕೊಟ್ನಂತೆ "ಹೂಂ, ಏಳೇಳು. ನಿಮ್ಕುಲಕ್ಕೆ ಜರ, ಚಳಿ, ಮಳೆಗಾಳೀನ ತಡ್ಕಳ್ಹಂಗೆ, ಹುಟ್ತಾನೇ ಮೈತುಂಬಾ ದಪ್ಗೆಕೂದ್ಲು ಬೆಳೀಲಿ. ಈಗ್ಬಂದಿರೊ ಜರಾನೂ ಮಾಯ್ವಾಗ್ಲಿ !" ಕುರಿಗೆ ಹಿಡ್ದ ಜರ ಮಂತ್ರ ಹಾಕ್ದಂಗೆ ಮಾಯ್ವಾದ್ವು. ದಿಗ್ನೆದ್ದ ಕುರಿ ಎತ್ಲಾಗೋ ಕಂಬಿ ಕೀಳ್ತಂತೆ.

'ದೇವ್ರೂನೂ ಹಿಂಗಾ' ಅಂತ ನಾಚ್ಕಂದ ಕತ್ತಿನ ನರ ಹಿಡ್ಕಂದಿತ್ತಲ್ಲ ಅದು ಹಂಗೆ ಉಳ್ಕಂತಂತೆ. ಮುಂದಿನ ಕುರಿ ಸಂತಾನ್ಕೆ ಆ ಗುಣ ಅಂಟ್ಕಳ್ತಂತೆ. ದೇವ್ರು ಕೊಟ್ಟ ವರ್ದಂಗೇ ಕುರಿಗಳ್ಗೆಲ್ಲಾ, ಮೈತುಂಬಾ ಮೆತ್ಕಂದ್ಹಗೆ ಕೂದ್ಲು ಹುಟ್ತಾನೇ ಬೆಳ್ಕಂದು ಬರ್ತಾವಂತೆ !

# ಕತ್ತೆ ಒದ್ದಕ್ಕೆ (ಲಾತ್ಗೆ) ಹುಲೀನೂ ಹೇತ್ಕಂಡ್ಹಂಗೆ

ಒಂದು ಕಾಡಿನ ನಡ್ವೆ ಒಂದ್ಕೆರೆ ಇತ್ತು. ಅದ್ರಾಗೆ ಒಂದೆಲ್ಡು ವಾರ ಮಿಗ್ವಸ್ಟು ನೀರಿತ್ತು. ಅಲ್ಲಿಗೆ ಒಂದು ಬಡಕ್ಲು ಕತ್ತೆ ನೀರ್ಕುಡಿಯಾನಾಂತ ಜೋತಾಡ್ತಾ ಬಂತು. ಅಲ್ಲೇ ತುಸು ದೂರ್ದಾಗೆ ಒಂದು ಮರದ ಕೆಳಾಗೆ ಪಟ್ಟಾಗಿ ಹೊಟ್ಟೆ ಪಿಣಿಗರಿಯಂಗೆ ತಿಂದು ಮಲ್ಗಿದ್ದ ಹುಲಿಗೆ ಆ ಕತ್ತೆ ಕಾಣಿಸ್ತು. ಕಾಣ್ಸಿದ್ದೇ ತಡ ಕಣ್ಣು ಕೆಂಪಗ್ಮಾಡಿ, ಮೀಸೆ ನಿಗಿರ್ಸಿ, 'ಆ' ಅಂತ ಆಕ್ಳಿಸಿ, ಮೈಮುರ್ದು ಎದ್ದು ನಿಲ್ತು. ಹೊಟ್ಟೆ ತುಂಬಿ ದೋರ್ಗೆ ಹುಗ್ಗಿ ಮುಳ್ಳಂತೆ. ಆ ಬಡಕ್ಲು ಕತ್ತೆ ತಿನ್ನಾಕೆ ಹುಲಿಗೆ ಅವತ್ತು ಮನಸ್ಸಾಗ್ಲಿಲ್ಲ. ಆದ್ರೂ ಕತ್ತೇನ ಒಂದ್ಸಲ ತಡ್ವಿ ತಮಾಸೆ ಮಾಡಾನಾಂತ ಕೆರೆ ಹತ್ರ ಬಂದೇ ಬಿಡ್ತು. ಹುಲೀನ್ನ ಕಂಡ ಕತ್ತೆ ಜಲಜಲಾಂತ ಬೆವ್ತು, ಉಚ್ಚೆ ಹೊಯ್ಕಂದು, ಗಡಗಡಾಂತ ನಡುಗಾಕ್ಹತ್ತು. ಅದ್ರ ಹತ್ರಾನೇ ಬಂದ ಹುಲಿ "ಏನ್ಲಾ, ನಾನಿರೊ ಹತ್ರ ಬರಾಕೆ ಅದೇಟಲೆ ಧೈರ್ಯ ನಿನ್ಗೆ ? ಏನ್, ಜೀವ ಬ್ಯಾಡಾಗೈತಾ ? ನಾನ್ಯಾರೂಂತ ಗೊತ್ತಿಲ್ಲೇನೋ ?" ಅಂತ ಬಾಯ್ಬಿಸ್ದು ಬೆದರ್ಸಿ ಕೇಳ್ತು. ಕತ್ತೆಗೆ ಕತ್ತು ಹಿಚಿಗ್ಹಂಗಾಗಿ "ಹ್ಞೆಹ್ಞೇ, ಹ್ಞೀ" ಅಂತ ತೊದಲ್ತಾ ಹಿಂಗೆ ಹೇಳಾಕೆ ಸುರುಮಾಡ್ತು–

"ನೀನು ಇಡೀ ಕಾಡಿನ ದ್ವರೆ ಅಂತ ಯಾರಿಗ್ಗೊತ್ತಿಲ್ಲ ಹುಲಿರಾಯ ? ಬಾಳಿದ್ರೆ ಹುಲಿಬಾಳ್ದಂಗೆ ಬಾಳ್ಬೇಕೂಂತ ಮನುಸ್ರೇ ನಿನ್ನ ತಾಕತ್ನ ಹಾಡ್ಕಂದು ಹೊಗಳ್ತಾರೆ. ನಾನ್ನೋಡಿದ್ರೆ ಬಲ ಇಲ್ದ ಬಡ್ಜೀವಿ. ನನ್ನ ಸಾಕ್ತಿದ್ದ ಸಾವ್ಕಾರ ದುಡಿಸ್ಕಳ್ಳಾತಂಕ ದುಡಿಸ್ಕಂದು, ಕಾಯ್ಲೆ ಬರುತ್ಲೂ ಕಣ್ಣೆತ್ತಿ ನೋಡ್ತಿರ್ಲಿಲ್ಲ. ಮೇವು ಗೀವ್ನ ಕನಸ್ನಾಗೆ ತಿಂತಿದ್ವೆ. ನನ್ಗೂ ತಲೆಕೆಟ್ಟು, ಉಸ್ರಿರೊವರ್ಗೆ ಈ ಕೆರೆ ಹತ್ರ ಸಿಕ್ಕದ್ನ ಮೇದು, ಏನೂ ಸಿಗ್ದಿದ್ರೆ ನೀರ್ನಾದ್ರೂ ಕುಡ್ಕಂದು ಸಾಯಾನಾಂತ ಅವ್ನಿಗೆ ಕೈಕೊಟ್ಟು ಇತ್ಲಾಗೆ ಬಂದೆ. ಇಲ್ಲಿ ನಿನ್ನ ನೋಡೋ ಪುಣ್ಯಸಿಗ್ತು. ನೀನೇ ನೋಡ್ದಂಗೆ ನನ್ನ ಮೈಯಾಗೆ ಪಾವುರ್ಸೈತಿಲ್ಲ; ಸೇರು ಮಾಂಸಿಲ್ಲ ! ಬರೇ ಎಲ್ಬೇ ಎಲ್ಬು. ಅದ್ರಾಗೆ ಬ್ಯಾರೆ ರೋಗದ ಪಾಪಿ ನಾನು. ಇಂತ ರೋಗಬಡ್ಕನ್ನ ತಿಂದ್ರೆ ನಿನ್ಗೂ ರೋಗ ಅಂಟಾಕಿಲ್ವಾ" ಅಂತ ಹುಲೀನ ಬಾಯ್ತುಂಬ ಹೊಗ್ಳಿ, ತನ್ನ ಪಾಡ್ನ ಕಳ್ಳು 'ಚುರುಕ್' ಅನ್ನಂಗೆ ತೋಡ್ಕಂತು.

ಕತ್ತೆ ಕೆಚ್ಗೆ, ಅದ್ರ ಜಾಣ್ತನಕ್ಕೆ ಹುಲಿ ಬೆರ್ಗಾತು. ಆದ್ರೂ ಅದ್ನ ತೋರಿಸ್ಕಳ್ದೆ "ಲೇ, ಕತ್ತೆಮುಂಡೇಗಂಡಾ, ಹೊಗ್ಳಿ,ಹೊಗ್ಳಿ ಅಟ್ಟೆ ಹತ್ತಿಸ್ತೀಯಾ ನನ್ನ? ಯಾನದೇವ್ರು ಬಂದು ಹೇಳಿದ್ರೂ ಹಂಗೇ ಬಿಡ್ತೇನಾ ನಿನ್ನ ಹೋಗ್ಲಿ, ನಿನ್ನ ಕೊನೇ ಆಸೆ ಏನೈತೊ ಅದ್ನ ಕೇಳ್ಕಾ" ಅಂತ ಹುಲಿ ಗರ್ಜನೆ ಮಾಡ್ತು. "ಇನ್ನೇನು ನನ್ದು ಮುಗ್ದಂಗೇ" ಅಂತ ಹೆದ್ರಿ ಒಂದು ಪಿಣಿಕಿ ಲದ್ದಿ ಹಾಕ್ದ ಕತ್ತೆ–"ಎದ್ಯೋಗೊ ಮಾತು ಬಿದ್ದಾದ್ರೂ ಬೀಳ್ಲಿ, ಎದ್ದಾದ್ರೂ ಏಳ್ಲಿ" ಅಂತ ಹಿಂಗೆ ಹೇಳಾಕ್ಸುರು ಮಾಡ್ತು–

"ಹುಲಿರಾಯ, ಇವತ್ತು ನನ್ನ ತಿಂದ್ರೆ" "ಬತ್ಗೆಟ್ಟು ತಿಂದೆ. ಥೂ" ಅಂತ ನೀನೇ ಹೇಸ್ಗಿ ಪಟ್ಕಂತಿ. ಒಂದ್ವಾರ ಬಿಟ್ಟು ನನ್ನ ತಿನ್ನು. ನಂದೊಂದು ಕಡೇ ಮಾತೈತೆ, ಅದ್ನ ನಡೆಸ್ಕೊಡು. ಒಂದು ವಾರ್ದಾಗೆ ಅಲ್ಲಿ ಇಲ್ಲಿ ತಿಂದು ಮೈ ತುಂಬ್ಕಂದು ದೇವ್ರ ಸತ್ಯವಾಗ್ಲೂ ನಿನ್ಹತ್ರ ಬಂದೇ ಬರ್ತೇನಿ. ಅವಾಗ ಸತ್ತನನ್ಗೂ, ನನ್ನನ್ನ ತಿಂದ ನಿನ್ಗೂ ಸಂತೋಸ ಆಗ್ದಂಗೆ ತಿನ್ವಂತಿ. ಒಂದ್ಮಾತು–ಒಂದೇ ಪಟ್ಗೆ ನನ್ನ ಕೊಲ್ಬೇಕ್ನೋಡು ಮತ್ತೆ. ನಿನ್ನ ಕೈಯಾಗೆ ಇದಾಗ್ಲಿಲ್ಲಾಂಡ್ರೆ, ನಿನ್ಗೆ ನಾನೊಂದು ಲಾತ್ಕೊಟ್ಟು ನಿನ್ನ ಪ್ರಾಣ ನೋಡಾನಾಂತ ಆಸೈತೆ. ಅನಾಗ ನಾನೇ ಗೆದ್ರೂ ನಿನ್ತುತ್ತೇ– ಅಂತ ಬಾಸೆ ಕೊಡ್ತೇನಿ. ಈ ಮಾತಿಗೆ ತಪ್ಪಿದ್ರೆ ನಾನು ಕತ್ತೇನೆ ಅಲ್ಲ !" ಅಂತ ತನ್ನ ಕೊನೇ ಆಸೇನ ಮುಂದಿಟ್ಟು ಸವಾಲ್ನೂ ಒಡ್ತು ಕತ್ತೆ.

ಕತ್ತೆ ಮಾತ್ಗೆ ಕಾಡೇನಕ್ಹಂಗೆ ಹುಲಿನಗ್ತು. ಮೀಸೆ ತಿರುವ್ತಾ "ಆಗ್ಲಲೇ ಕತ್ತೆ ಕಡವಾ, ನನ್ನ ಮರ್ವಾದೆ ಹೋದ್ರೂ ಚಿಂತಿಲ್ಲ. ನಿನ್ನಸವಾಲ್ಗೆ ಈಳ್ಯಕೊಟ್ಟೆ ಅಂತ ತಿಳ್ಕಾ. ಇಗಾ, ಮಾತ್ಗೆ ತಪ್ಪಿ ನೀನು ಬರ್ದಿದ್ರೆ ನಿನ್ನ ಕತ್ತೆ ಕುಲಾನ್ನೇ ಇಲ್ದಂಗೆ ಮಾಡ್ತೇನಿ. ತಿಳೀತಾ? ಎಚ್ರಿರ್ಲಿ ! ಹಾ...." ಅಂತ ಮೀಸೆ ತಿರುವ್ತಾ ಹುಲಿ ಕಾಡ್ಸೇರ್ತು.

ಆ ವಾರ್ದ ಗಡ್ವಿನಾಗೆ ಕತ್ತೆ ಏನ್ಮಾಡ್ತೂಂತ ಅಂತಿ ? ಅಲ್ಲಿ ಇಲ್ಲಿ, ಅದ್ನೂ ಇದ್ನೂ ಕದ್ಕಂದು ತಿನ್ತಾ, ಆ ಕೆರೆಯಾಗ್ನ ಬಗ್ದು ನೀರ್ಕುಡ್ಕಂತ, ದಿನಾ ಕೆಸ್ರಾಗೆ ಉಲ್ಡಾಡ್ತು ಒಂದ್ಗೇಣು ದಪ್ಪ ಹೊರತ್ಕಳಂಗೆ ಕೆಸರ್ನ ಮೈಯ್ಗೆ ಬಳ್ಕಂತು. ಬಾಸೆ ಕೊಟ್ಟ ದಿನಾನೂ ಬಂತು.

ಕೊಟ್ಟಬಾಸೆಗೆ ತಪ್ಪಂಗೆ, ಹುಲಿಗಿಂತ ಮದ್ಲೇ ಬಂದ ಕತ್ತೆ, ಆ ಕೆರೆ ಅಂಗ್ಳ ದಾಗೆ ಹುಲಿ ಬರ್‍ಲೀಂತ ಮಕ್ಕಂದು, ಮೆಲ್ಕು ಹಾಕ್ತಾ ಕಾಯ್ತಿತ್ತು. ದೂರ್‍ದಿಂದ ಕತ್ತೇನ್ನ ನೋಡ್ದ ಹುಲಿ ಸುಂಟ್ರುಗಾಳಿ ಬಂದ್ಹಂಗೆ ಓಡ್ಬಂತು. ಕತ್ತೆ ದಿಗ್ನೆ ಎದ್ದು ನಿಂತ್ಕಂದು, ಗೋಣೆತ್ತಿ, ಮುಗ್ಲು ಕಡೆ ತಲೆ ಎತ್ತಿ ಕಣ್ಮುಚ್ಕಂದು ನಿಲ್ತು.

ಬಾಯ್ತೆರ್‍ಕಂದು, ನ್ಯಾಲ್ಗಿ ಚ್ಯಾಚ್ಕಂದು, ಬೋರಾಡ್ತಾ ಕತ್ತೆ ಹತ್ರ ಬಂದ ಹುಲಿ 'ರಪ್ಪಂತ' ಬಾಲಾನ ನೆಲಕ್ಕೆ ಬಡ್ದು, ಮುಂಗಾಲು ಉಗುರ್‍ನ ಕತ್ತೆ ದೊಕ್ಕೆಗೆ ಇರೀತು ; ಬಾಯ್ನ ಗ್ವಾಮಾಳ್ಕೆ ಹಾಕ್ತು. ದೊಕ್ಕೆ ಇಂದ ಒಂದ್ಗೇಣು ದಪ್ಪದ ಒಣಗ್ದ ಕೆಸ್ರು ಚೆಕ್ಳ ಉದುರ್‍ತು. ಬಾಯ್ನಾಗೂ ಗೇಣ್ದಪ್ಪದ ಕೆಸರ್‍ನ ಚಕ್ಳ ! ಜಾಣ ಜಾರ್‍ಕಂದು ಬಿದ್ದಂಗಾತಲ್ಲಾ ಅಂತ ಹುಲಿಗೆ ಜೋಜಿಗಾತು. ಆಗ–"ಕತ್ತೆಯ್ಯ ನಿನ್ನ ಸತ್ಯಕ್ಕೆ ಮೆಚ್ಚಿ ನಿನ್ನ ಆಸೇನೂ ತೀರಿಸ್ತಾ ಮತ್ತೆ" ಅಂತಂದ ಹುಲಿ, ಒಂದಸ್ಟುದೂರ ಹೋಗಿ, ಮುಂಗಾಲ್ನ ನೆಲಕ್ಕೂರಿ, ಕತ್ತನ್ನು ಮುಗ್ಲು ಕಡೆ ಎತ್ತಿ ಕುಂತ್ಕಳ್ತು. ಕತ್ತೆಗೆ ಕಂಡ್ಗ ಧೈರ್ಯ ಒದೆ ಕೊಡಾಕೆ ಸಿದ್ವಾತು. ಹುಲಿ ಕಡೆ ಕುಂಡಿ ತಿರ್‍ವಿ, ಹಿಂಗಾಲ್ನಾಗೆ ಓಡ್ತಾ ಬಂದು, ಕಸ್ವುಮೀರಿ ಜಾಡ್ಸಿ ಒಂದ್ಸಾರಿ ಒದಿತ್ನೋಡು....ಹುಲಿ ಕಣ್ಣಾಗೆ ದೀಪ ಮುಖಿಸ್ದಂಗಾತು. ಒಂದೆಲ್ಡು ಹಲ್ಲೂ ಉದುರಿದ್ವು. ಬಾಯಾ ರಕ್ತ 'ಚಿರ್' ಅಂತ ಚಿಮ್ತು. ಬುಡುಕ್ಕಂತ ಉಲ್ಟಾಡ್ದ ಹುಲಿಗೆ ಹಿಂದೆ ಮುಂದೆ ಪಚಕ್ಕಂತ ಹೊಂಟು "ಸತ್ನೆಪ್ಪೋ" ಅಂತ ತಡವರಿಸ್ಕಂದು ಎದ್ದದ್ದೇ, ಕಲ್ಡಿಗುಡ್ಡ ಸೇರೋವರ್‍ಗೂ ತಿರ್‍ಗಿ ನೋಡ್ದಂಗೆ ಓಟಕೀಳ್ತಂತೆ.



## ಗಾದೆಯ ಕಥೆಗಳನ್ನು ಹೇಳಿದವರು

# ಗಾದೆಯ ಕಥೆಗಳನ್ನು ಹೇಳಿದವರು

(ಆವರಣದಲ್ಲಿರುವ ಸಂಖ್ಯೆ ಗಾದೆಕಥೆಯ ಸಂಖ್ಯಾನುಕ್ರಮವನ್ನು ಸೂಚಿಸುತ್ತದೆ)

೧ **ಅಜ್ಜಪ್ಪ ಗುತ್ತೇರ** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ರೆಡ್ಡಿಯವರು, ಅರವತ್ತು ವರ್ಷ, ಸಂಗ್ರಹ : ೧೯೭೭

ಕತೆ : ಮೂಳರ ಪಂತ ಮೂರಾಬಟ್ಟೆ (೧೧)

೨ **ಅಮೀರ್ ಸಾಬ್** : ಗಂಗನಕೋಟೆ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಮುಸ್ಲಿಮರು, ಐವತ್ತೇಳು ವರ್ಷ, ಸಂಗ್ರಹ : ೧೯೭೪

ಕತೆ : ಕಲ್ಲಂಗ್ಡಿ ಕನಸ್ನಾಗೆ ಬುಡೇನ್ ಸಾಬು ಬಡ್ವಾದ

೩ **ಕರಿಯಜ್ಜಿ** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಹರಿಜನರು, ನೂರಾ ಮೂರು ವರ್ಷ, ಸಂಗ್ರಹ : ೧೯೬೬

ಕತೆಗಳು : ವಲ್ಲೊಲ್ಲೆ ಅಂದೋನು ಒಳ್ಕಲ್ಲು ನೆಕ್ದ (೨)

ಕತೆ : ಹಳೇ ಗಂಡ್ನ ಪಾದ್ವೆ ಗತಿ (೩)

೪ **ಗೋವಿಂದಪ್ಪ ಅಕ್ಕೇರ** : ನಂದಿಗಾವಿ ಅಂಚೆ, ಹರಿಹರ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ರೆಡ್ಡಿಯವರು, ಎಪ್ಪತ್ತು ವರ್ಷ, ಸಂಗ್ರಹ : ೧೯೬೫

ಕತೆ : ರೆಡ್ಡೀ ಅಂದ್ರೆ ಬಂಗಾರ್ದ ಕಡ್ಡೀ ಅಂತ (೧೫)

೫ **ಬಸಪ್ಪ ಚೆನ್ನವ್ವನವರ** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ವೀರಶೈವರು, ಅರವತ್ತು ವರ್ಷ, ಸಂಗ್ರಹ : ೧೯೭೦

ಕತೆ : ಉಂಡೂ ಹೋದ ಕೊಂಡೂ ಹೋದ (೫)



೬ **ಬಸಪ್ಪರೆಡ್ಡಿ ಗುತ್ತೇರ** : ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ರೆಡ್ಡಿಯವರು, ಅರವತ್ತೆರಡು ವರ್ಷ, ಸಂಗ್ರಹ : ೧೯೭೪

ಕತೆ : ಅಳಿಯನ ಎಮ್ಮೆ ಮಾವ್ನ ಕಲ್ಲೊಲ್ಲ ಮೇದ್ಹಂಗೆ (೮)

೭ **ಬಸವ್ವ ಎರೇಸೀಮೆ** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ರೆಡ್ಡಿಯವರು, ಎಪ್ಪತ್ತು ವರ್ಷ, ಸಂಗ್ರಹ : ೧೯೭೪

ಕತೆ : ಆಸೆಬುರ್ಕಿ ಸೊಸೇರ್ಗೆ ಹಂಚ್ನ ಬುರ್ಕೀನೇ ಸೋಬ್ತಿ (೪)

೮ **ತಿಮ್ಮಪ್ಪರೆಡ್ಡಿ ಅಕ್ಕೇರ** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ರೆಡ್ಡಿಯವರು, ಐವತ್ತಾರು ವರ್ಷ, ಸಂಗ್ರಹ : ೧೯೬೫

ಕತೆಗಳು : ಅದೇ ಉಂಡೇನು ಕದಾ ತಗಿ (೧)

ಕಾರ್ಯವಾಸಿ ಕತ್ತೆ ಕಾಲು ಕಟ್ಟು (೧೭)

ಹುಲಿಪಟ್ಟೆ ಕಂಡು ನರಿ ಬರೆ ಹಾಕಿಸ್ಕಂಡ್ಹಂಗೆ (೨೩)

ಬೆಲ್ದೋನು ಬಾಯ್ಬಾಯ್ ಬಡ್ಕೊಂಡ್ರೆ,

ತೆಂಗಿನ್ಕಾಯ್ಗೋನು ತಲೆತಲೆ ಹೊಡ್ಕಂಡ (೧೩)

೯ **ತಿಪ್ಪವ್ವ ಮೂಡಬಾಗಿಲು** : ಬಿಜೇಗಟ್ಟಿ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ರೆಡ್ಡಿಯವರು, ಅರವತ್ತು ವರ್ಷ, ಸಂಗ್ರಹ : ೧೯೬೩

ಕತೆ : ಅಳಿಯನ ಕುಲ್ಡು ಬೆಳ್ಗಾಗೊ ತಂಕ (೯)

೧೦ **ದೇವಲಾನಾಯ್ಕ** : ಕುರುವತಾಂಡ, ಗೋವಿನ ಕೋವಿ ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ನಾಯಕರು, ಐವತ್ತು ವರ್ಷ, ಸಂಗ್ರಹ : ೧೯೬೬

ಕತೆಗಳು : ಕತ್ತೆ ಒದ್ರಕ್ಕೆ (ಲಾತ್ಗೆ) ಹುಲೀನೂ ಹೇತ್ಕಂಡ್ಹಂಗೆ (೨೫)
ಹುಚ್ಚಾಸೆ ಕಿಚ್ಚಿಡ್ತು (೧೯)

೧೧ ನಂಜ್ಯಪ್ಪ ಮಾಸ್ತರು : ಬಿಜೇಗಟ್ಟೆ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ವೀರಶೈವರು, ಅರವತ್ನಾಲ್ಕು ವರ್ಷ, ಸಂಗ್ರಹ : ೧೯೮೦

ಕತೆ : ಎತ್ತುಗಾಡಿ ಜಿದ್ದಿಗೆ ಕತ್ತೆ ಕಣ್ಗೆ ಕುಣ್ದಾಡಿದ್ವಂತೆ (೨೦)

೧೨ ಸಣ್ಣಜ್ಜ : ಬಿಜೇಗಟ್ಟೆ, ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಹರಿಜನರು, ಅರವತ್ತೆಂಟು ವರ್ಷ, ಸಂಗ್ರಹ : ೧೯೭೫

ಕತೆಗಳು : ದಡ್ಡಗೆ ಒಂದು ದಂಡಾದ್ರೆ, ಜಾಣಗೆ ಮೂರ್ದಂಡ (೧೦)
ಆನೆ ಜರ್ದು ಒಂಟೆ ಹುಟ್ದಂಗೆ (೨೨)
ಕುರಿ ವರ ಕೇಳಾಕೆ ಹೋಗಿ ಜರಕ್ಕೆ ವರ ಪಡ್ಕಂತಂತೆ (೨೪)

೧೩ ಸಿದ್ದಯ್ಯ ಪಾಟೀಲ್ : ವಡೆಯರ ಹತ್ತೂರು ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ವೀರಶೈವರು, ಐವತ್ತೆಂಟು ವರ್ಷ ಸಂಗ್ರಹ : ೧೯೭೭

ಕತೆ : ದೆವ್ವದ ಕಾಟ್ದಾಗೆ ದಾಸರಹಟ್ಟೆ ಹಾಳಾತಂತೆ (೨೧)

೧೪ ಸಿಂಗಣ್ಣ : ಬಸವನಹಳ್ಳಿ ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಕುರುಬರು, ಎಪ್ಪತ್ತು ವರ್ಷ, ಸಂಗ್ರಹ : ೧೯೮೦

ಕತೆಗಳು : ಅಯ್ಯಪ್ಪಗೆ ಆದದ್ದು ದಾಸಪ್ಪಗೂ ಆಗ್ತೈತಿ (೭)
ನೀರಾಗಿದ್ದ ಅಗ್ಸ ನೀರಡಿಸಿ ಸತ್ತ (೧೪)
ಹಣ್ಣೂ ಕೆಡವ್ಕೊಂಡು ಹೆಣ್ಣೂ ಹೊಡ್ಕಂಡ್ಹಂಗೆ (೬)
ಹೊನ್ನಾಳಿ ಅಗ್ಸ ಕೆಟ್ಟಂಗೆ (೧೬)



# ಅ ರ್ಥ ಕೋ ಶ

## ಅ

ಅಂಬ್ರ : ಅನ್ನದೊಡನೆ ಕಲಸಿಕೊಳ್ಳಲು ತಯಾರಿಸುವ ಸಾರು, ರಸ
ಅಕ್ತಂಗೇರ ಮರ : ಪಪ್ಪಾಯಿ ಮರ, ಪರಂಗಿ ಮರ
ಅಗರ್ಣ : ಹಗರಣ, ಅಪವಾದ, ಸಂಸ್ಕೃತ ನಾಟಕದ ಒಂದು ಪ್ರಭೇದ
ಅಗ್ಣಿ : ಕದದ ಭದ್ರತೆಗೆ ಗೋಡೆಯಲ್ಲಿ ಅಳವಡಿಸಿರುವ ಹಿಡಿಯನ್ನುಳ್ಳ ಮರದ ಸಣ್ಣ ಭಾಗ
ಅಗ್ಸೆ : ಅಗಸೆ, ಊರಿನ ಬಾಗಿಲು
ಅಚ್ಕಟ್ಟು : ಕೆರೆ. ಕಾಲುವೆಯ ಆಸರೆಯಲ್ಲಿರುವ ಭೂಮಿ, ಫಲವತ್ತಾದ ಭೂಮಿ
ಅಚ್ಚು : ಗಾಡಿಯ ಚಕ್ರ ತಿರುಗಲು ಜೋಡಿಸಿರುವ ಕಬ್ಬಿಣದ ಸಾಧನ
ಅಣೆ : ಆಣೆ, ರೂಪಾಯಿಯ ಹದಿನಾರನೆಯ ಒಂದು ಭಾಗ
ಅದುವು : ಅಂಗವಿಕಲ
ಅಮ್ಡು : ಅವಡು, ದವಡೆ ಕೆಳಗಿನ ಭಾಗ
ಅಯ್ಸಿರಿ : ಐಶ್ವರ್ಯ, ಸಂತಸ
ಅರ್ಬಡಿಸು : ತರಾತುರಿ ಮಾಡು, ಆರ್ಭಟಿಸು
ಅಳಲೆಕಾಯಿ : ಔಷಧೋಪಯೋಗಿ ಕಾಯಿ

## ಆ

ಆಣೆ : ಒಂದು ರೂಪಾಯಿಯ ೧೬ನೆಯ ಒಂದು ಭಾಗ, ಪ್ರಮಾಣ
ಆನ್ಪಾನ : ಸೇವೆ, ಆರೈಕೆ
ಆಯ : ಮಾಡಿದ ಕೆಲಸಕ್ಕೆ ವರ್ಷಕ್ಕೊಂದು ಬಾರಿ ಪಡೆಯುವ ಫಲ
ಆಯತ್ವಾರ : ಆದಿತ್ಯವಾರ, ಭಾನುವಾರ

## ಇ

ಇಗಾ : ಇಲ್ಲಿ ನೋಡು, ಗಮನವಿಟ್ಟು ಕೇಳು
ಇತ್ಲಾಗೆ : ಇತ್ತ ಕಡೆ
ಇರಿಸು ಮುರಿಸು : ಕಸಿವಿಸಿ, ತಳಮಳ
ಇರುದ್ದ : ವಿರುದ್ಧ
ಇವತ್ತಿ : ವಿಭೂತಿ
ಇಸ್ಯ : ವಿಷಯ, ಸುದ್ದಿ

## ಈ

ಈಳ್ಯ : ವೀಳ್ಯ, ಒಪ್ಪಿಗೆ ಕೊಡು

## ಉ

ಉಂಡಾಡಿ : ಕೆಲಸವಿಲ್ಲದೆ ಉಂಡು ಆಡುವವನು, ಸೋಮಾರಿ
ಉಕ್ಕಿ : ಉಕ್ಕೆ, ನೇಗಿಲ ಉಳುಮೆ
ಉಚಾಯಿಸು : ಹದ್ದು ಮೀರು
ಉದಾಸ್ಲು : ಹೊಸಲು, ಬಾಗಿಲಿನ ಚೌಕಟ್ಟಿಗೆ ಜೋಡಿಸಿರುವ ಕೆಳಭಾಗ
ಉಬ್ಬು : ಕೆಲಸದ ಒಂದು ಉತ್ಸಾಹದ ಸಮಯ, ಮೇಲಕ್ಕೆ ಎದ್ದಿರುವುದು
ಉರ್ಲು : ಮೆಣಸಿನಕಾಯಿಯನ್ನು ಸುಟ್ಟಾಗ ಬರುವ ಘಾಟಿನಿಂದ ಕೊಡುವ ಶಿಕ್ಷೆ

## ಊ

ಊರಾಡು : ಮನೆ ಮನೆಗೆ ಭಿಕ್ಷಕ್ಕೆ ಹೋಗು
ಊರು : ನೆಡು, ಗ್ರಾಮ, ತೊಡೆ

## ಎ

ಎಕ್ರೆ : ಜಮೀನಿನ ೪೦ ಗುಂಟೆ ವಿಸ್ತೀರ್ಣದ ಅಳತೆ
ಎಲ್ಬು : ಎಲಬು, ಮೂಳೆ

## ಏ

ಏಟಲೆ ? : ಎಷ್ಟಲೆ ?

## ಐ

ಐಬು : ದೋಷ, ಕುಂದು

## ಒ

ಒಂದಾ : ಮೂತ್ರ
ಒಕ್ಲು : ಮನೆತನ, ಪೈರಿನಿಂದ ಧಾನ್ಯಗಳನ್ನು ಬೇರ್ಪಡಿಸು
ಒಗೆ : ಬಟ್ಟೆಯನ್ನು ತೊಳೆ, ಬಿಸಾಕು, ಎಸೆ
ಒಜೆ : ಭಾರ
ಒಡ್ಡು : ಅಡ್ಡಗಟ್ಟೆ
ಒರ್ಚು : ಓರೆಗಣ್ಣು, ಮೆಳ್ಳಗಣ್ಣು
ಒಲ್ಟು : ಒರಟು, ಪೆಡಸು
ಒಳ್ಳು : ಒರಳುಕಲ್ಲು
ಒಳ್ಳೆಣ್ಣೆ : ಕಡಲೆಕಾಯಿ ಎಣ್ಣೆ

## ಕ

ಕಂಡ್ಗ : ಖಂಡುಗ, ಅಳತೆಯ ಸಾಧನ, ಇದರ ಅಳತೆಯ ಲೆಕ್ಕ
(೨೫ ಸೇರಿನಿಂದ ೧೬೦೦೦ ಸೇರಿನವರೆಗೂ ಇದೆ)
ಕಟ್ಟಗೆ : ಮನಸ್ಸಿಗೆ ನಾಟುವಂತೆ, ಅತಿ ಬಿಸಿಯಾಗುವಂತೆ
ಕಟ್ಟಾಣಿ : ಶ್ರೇಷ್ಠ, ಪ್ರೀತಿಪಾತ್ರ
ಕಡವ : ಜಿಂಕೆ ಜಾತಿಗೆ ಸೇರಿದ ಚುರುಕಿಲ್ಲದ ಪ್ರಾಣಿ
ಕಣ್ಕಟ್ಟು : ಇಂದ್ರಜಾಲ ವಿದ್ಯೆ, ನೋಟದಿಂದಲೇ ಮರೆಯಿಸು
ಕಪ್ಪ : ಮದುವೆಯಾದವನು ಬಲ ಮುಂಗೈಗೆ ಇಟ್ಟುಕೊಳ್ಳುವ ಬಂಗಾರದ ಕಡಗ, ಕಾಣಿಕೆ
ಕರಾವು : ಹಾಲು, ಬೆಣ್ಣೆಯ ಅನುಕೂಲತೆ
ಕರೇ : ಕರಿಯದಾದ
ಕಲ್ದಿಗೆ : ಕರಡಿಗೆ, ಲಿಂಗವನ್ನಿಟ್ಟುಕೊಳ್ಳುವ ಬೆಳ್ಳಿಯ ಪೆಟ್ಟಿಗೆ
ಕಸ್ಮರ್ರಿಗ : ಪೊರಕೆ
ಕಸ್ವು : ಕಸುವು, ಶಕ್ತಿ



ಕಳ್ಳು : ಕರುಳು
ಕಾವಿಗೆಕೂರು : ಪಕ್ಷಿಗಳು ಮರಿಮಾಡಲು ಮೊಟ್ಟೆಯ ಮೇಲೆ ಕುಳಿತುಕೊಳ್ಳುವ ಕ್ರಿಯೆ
ಕಾಳ್ಜಿ : ಕಾಳಜಿ, ಆಸಕ್ತಿ, ಚಿಂತೆ
ಕಿಸಾಣಿ : ತಮಾಷೆ ಮಾಡುವವನು
ಕುರ : ರಕ್ತ ಕೀವುಗಳಿಂದ ಕೂಡಿದ ದೊಡ್ಡ ಗುಳ್ಳೆ
ಕುಸಿ : ಜಾರಿ ಬೀಳು, ಖುಷಿ, ಸಂತೋಷ
ಕುಳ : ನೇಗಿಲಿಗೆ ಜೋಡಿಸುವ ಕಬ್ಬಿಣದ ದೊಡ್ಡ ಸಾಧನ, ಮನೆತನ
ಕೆಂಪು ಮೂತಿಯೋರು : ಇಂಗ್ಲೀಷಿನವರು
ಕೆಳ್ಳು : ಕೆರಳು, ಉದ್ರೇಕಗೊಳ್ಳು
ಕೇರಿ : ಹಳ್ಳಿಯ ಬೀದಿ
ಕೊಪ್ಪರ್ಗೆ : ಅಗಲ ಬಾಯನ್ನುಳ್ಳ, ಕಡಾಯಿ
ಕೊರಗ : ಹೊಲೆಯರ ಒಂದು ಪಂಗಡ
ಕ್ವದಾರಿ : ಕೊಬ್ಬಿದ, ನೆಣಗಟ್ಟಿದ
ಕ್ವಾರಾನ್ನ : ಕೋರಾನ್ನ, ಮೀಸಲು ಅನ್ನ

## ಗ

ಗಂಗಾಳ : ಗಂಗೆಯ + ಕಳ = ಗಂಗಳ → ಗಂಗಾಳ
ಅಗಲವಾದ, ದುಂಡನೆಯ ಲೋಹದ ತಟ್ಟೆ, ಊಟದ ಬಟ್ಟಲು
ಗಡ್ಕು : ಗದರಿಕೆ
ಗಡ್ರು : ತೇಗು
ಗಡ್ವು : ಗಡುವು, ಕಾಲಾವಕಾಶ, ಅವಧಿ
ಗಣಮಗ : ಮೈಮೇಲೆ ದೇವರು "ಮೈ ದುಂಬು"ವವನು
ಗಯ್ಯಾಳಿ : ಕೆಟ್ಟ ಹೆಂಗಸು, ಬಜಾರಿ
ಗರ್ಡ : ಗರುಡ
ಗಾಗರೆ : ಅಂಗಲಾಚು
ಗಾವ್ದ : ೧೨ ಮೈಲಿ ದೂರದ ಅಳತೆ
ಗಿರಸ್ತ : ಗೃಹಸ್ಥ, ಮನೆಯ ಯಜಮಾನ
ಗೀರುಂಡಿ : ಮೊಟ್ಟೆಯೊಳಗಿನ ಹಳದಿ ಬಣ್ಣದ ಗುಂಡನೆಯ ಲೋಳೆ
ಗುಳುಂ ಮಾಡು : ನುಂಗಿ ಹಾಕು, ಸ್ವಾಹಾ ಮಾಡು, ಮೋಸ ಮಾಡು
ಗ್ವಾಮಾಳ : ಗೋಮುನಾಳ, ಗಂಟಲು

## ಚ

ಚಪ್ಪಿಕೆ : ಚಪ್ಪಾಳೆ
ಚವ್ಡು : ಚರ್ಮ
ಚುಂಗು : ಪಂಚೆ, ರುಮಾಲು ಮುಂತಾದ ಬಟ್ಟೆಗಳ ತುದಿ
ಚೂಜಿ : ಸೂಜಿ
ಚೈನ್ಬಾಜಿ : ಷೋಕಿ ಮಾಡುವವನು
ಚೋಜಿಗ : ಸೋಜಿಗ, ಅಶ್ಚರ್ಯ
ಚೌಟ : ಸವುಟು, ಸಟ್ಟುಗ
ಚ್ಯಾಟಿ : ಚಾವಟಿ, ಬಾರೆಕೋಲು
ಚ್ಯಾಸ್ಟಿ : ಜೇಸ್ಟೆ, ತಮಾಸೆ, ಸರಸ

## ಜ

ಜಟಾಪಟಿ : ಜಗಳ
ಜಪ್ಪು : ಸಂಚು ಹೊಡೆ
ಜಿಗಣಿ : ನೇಗಿಲಿನ ತುದಿಯಲ್ಲಿ ಭದ್ರವಾಗಿ ಅಳವಡಿಸಿರುವ ಎರಡು ತುದಿಯ ಮೊಳೆ
ಜೀವಜಂಚಲ್ಲು : ಜೀವ ಚಂಚಲವಾಗು, ಉಸಿರು ಕಟ್ಟು
ಜ್ಯಾಪಾನ : ಜೋಪಾನ, ಎಚ್ಚರಿಕೆ

## ಟ

ಟೋಪಿ ಹಾಕು : ಮೋಸ ಮಾಡು

## ಡ

ಡೌಲು : ಆಡಂಬರ

## ತ

ತಡ್ಪು : ಕೆಣಕು, ಕೆರಳಿಸು



ತತ್ತಿ : ಮೊಟ್ಟೆ
ತತ್ರಿಬಿತ್ರಿ : ಕಕ್ಕಾಬಿಕ್ಕಿ, ದಿಗ್ಭ್ರಮೆ
ತಡುಕು : ಗುದ್ದು, ಥಳಿಸು
ತಲಾಟಿ : ಗ್ರಾಮದ ಕಂದಾಯ ಸಂಗ್ರಹಕಾರ, ತೀಟಿ ಹಚ್ಚುವವನು
ತಾಕತ್ತು : ಸಾಮರ್ಥ್ಯ
ತಿರ್ಬೋಕಿ : ಭಿಕ್ಷುಕ
ತುವಾಲು : ಟವೆಲ್ಲು, ತಲೆಗೆ ಸುತ್ತಿಕೊಳ್ಳುವ ಚೌಕ
ತೆರ : ಕನ್ಯಾಶುಲ್ಕ
ತೆರು : ಕೊಡು, ದಂಡ ಕೊಡು
ತೊಕ್ಕು : ಹೋರಿ, ಹಸು, ಎಮ್ಮೆಗಳಿಗೆ ಹುರಳಿ ನುಚ್ಚನ್ನು ನೆನೆಯಿಸಿ ಮಾಡುವ ವಿಶೇಷ ತಿನಿಸು
ತ್ರಾಣ : ಶಕ್ತಿ
ತ್ವಲ : ತೊಲ, ಒಂದು ತೂಕ–ಈಗಿನ ೧೦ ಗ್ರಾಂಗೆ ಸಮ

## ದ

ದಬ್ಬ : ಡಬ್ಬ
ದರ್ವೇಸಿ : ಭಿಕ್ಷುಕ, ಅನಾಥ, ದಿಕ್ಕಿಲ್ಲದವನು
ದಿಮ್ಮಾಸ್ಸಿ : ಮೂರು ತಿಂಗಳ ಗರ್ಭಿಣಿ
ದುಡ್ಡು : ನಾಲ್ಕು ಕಾಸು
ದುಂಬಾಲು : ದೈನ್ಯದಿಂದ ಬೇಡಿಕೊಳ್ಳುವುದು
ದೊಕ್ಕೆ : ಡೊಕ್ಕೆ, ಹೊಟ್ಟೆ
ದೋಸಿಗ : ಜೋಯಿಸ
ದ್ವಾಸಿ : ದೋಸೆ

## ನ

ನಳ್ಳು : ನರಳು, ಡೊಂಕು, ನೆಲ ಇಲ್ಲವೆ ಪಾತ್ರೆಯಲ್ಲಾಗುವ ತಗ್ಗು
ನಿಚ್ಚಯ : ಗೊತ್ತು ಮಾಡು, ನಿಶ್ಚಯ
ನೀರಡಸು : ಬಾಯಾರಿಸು
ನೀರೆರ್ಕಳ್ಳು : ಮುಟ್ಟಾದಾಗ ಮಾಡುವ ಸ್ನಾನ

ನೆಗೆದು ಬೀಳು : ಹಾರಿ ಬೀಳು, ಸಾಯಿ
ನೊಗಸುತ್ತು : ನೊಗಕ್ಕೆ ಕಟ್ಟುವ ನಾರಿನ ಅಥವಾ ಚರ್ಮದ ಹಗ್ಗ
ನೊಣ ಬುದ್ಧಿ : ಚಂಚಲ ಬುದ್ಧಿ, ಶೀಲಗೆಟ್ಟ ನಡತೆ
ನೊರ್ಜ : ಗುಂಗಾರ, ಸೊಳ್ಳೆ
ನ್ಯಾರ : ನೇರ, ಸಮನಾಗಿರುವುದು

## ಪ

ಪಜೀತಿ : ತೊಂದರೆ, ಕಷ್ಟ
ಪರೆ : ಪದರ, ಹಾವಿನ ಪೊರೆ
ಪಾಡು : ಸ್ಥಿತಿ, ಹಾಡು
ಪಾವು : ಒಂದು ಸೇರಿನ ನಾಲ್ಕನೆಯ ಒಂದು ಭಾಗದಷ್ಟು ಅಳತೆ ಸಾಧನ
ಪಿಟಾರಿ : ಮರದ ದೊಡ್ಡ ಪೆಟ್ಟಿಗೆ
ಪಿಣಕಿ : ಆಡು, ಕುರಿ ಮುಂತಾದ ಪ್ರಾಣಿಗಳ ಕಾಳಿನ ಗಾತ್ರದ ಮಲ, ಹಿಕ್ಕೆ
ಪಿಣಗರಿ : ಹೊಟ್ಟೆ ಬಿರಿಯುವಂತೆ ಮೇಯುವುದು
ಪಿಲಾನು : ಪ್ಲಾನ್—ಪ್ಲಾನು—ಪಿಲಾನು, ಉಪಾಯ
ಪೀಕ್ಲಾಟ : ಉಪದ್ರವ, ತೊಂದರೆ

## ಬ

ಬಗ್ಡ : ಬಗ್ಗಡ, ರಾಡಿಯಾದ ನೀರು, ಕೆಸರು
ಬಗ್ಸೆ : ಬೊಗಸೆ, ಗುಳಿಯಾಗುವಂತೆ ಜೋಡಿಸಿದ ಎರಡು ಹಸ್ತಗಳು ; ಎರಡು ಹಸ್ತಗಳು ಹಿಡಿಸುವಷ್ಟು ಅಳತೆ
ಬಚ್ಚು : ಬೊಚ್ಚು, ಹಲ್ಲಿಲ್ಲದ, ಬೋಡಾದ
ಬಟ್ಟೆ : ದಾರಿ, ವಸ್ತ್ರ
ಬತ್ಗೆಡು : ಹಿರಿಮೆಯನ್ನು ಕಳೆದುಕೊಳ್ಳು
ಬರೆ : ಕಾದ ಸರಳು ಅಥವಾ ಕುಳದಿಂದ ಹಾಕುವ ಗೆರೆ
ಬಲೇ : ಬಹಳ
ಬಲ್ತ : ಬಲಿತ
ಬವನಾಸಿ : ದಾಸಯ್ಯನ ಕೈಯಲ್ಲಿರುವ ತಾಮ್ರದ ಭಿಕ್ಷಾ ಪಾತ್ರೆ
ಬವ್ಕಿ : ಗರ್ಭಿಣಿ ಸ್ತ್ರೀಯ ಆಸೆ



ಬಾಕುಕ್ಕಿ : ಬಾಯ್ + ಕುಕ್ಕಿ—ಬಾಯ್ಕುಕ್ಕಿ—ಬಾಕುಕ್ಕಿ ದನಕರುಗಳು ಮೇವನ್ನು ತಿನ್ನದಂತೆ ಬಾಯಿಗೆ ಕಟ್ಟುವ ಸಣ್ಣ ಪುಟ್ಟಿ
ಬಾಡ್ಕ್ಯಾವ್ : ನಿಂದಿಸುವ ಬೈಗುಳದ ಒಂದು ರೀತಿ
ಬಾಸೆ : ಪ್ರಮಾಣ, ಮಾತುಕೊಡು
ಬಿಳಿಬೀಡಿ : ಸಿಗರೇಟು
ಬೀಡು : ಮೊದಲು ಬಂದ ಫಸಲಿನ ಫಲ, ತಂಗುವ ಸ್ಥಳ
ಬುರ್ಕಿ : ಮುಸುಕು, ಪರದೆ, ಆಸೆಯ ಪರದೆಯಲ್ಲಿ ಸಿಲುಕಿಕೊಂಡವಳು, ಮಣ್ಣು ಹೆಂಚಿನ ಅಥವಾ ಮಡಕೆಯ ತುಣುಕುಗಳು

## ಮ

ಮಕ : ಮುಖ, ಮೋರೆ
ಮಚ್ರ : ಮತ್ಸರ, ಹೊಟ್ಟೆಕಿಚ್ಚು, ದ್ವೇಷ
ಮಟ್ಟ ಹಾಕು : ಮೋಸ ಮಾಡು
ಮಣ : ೪೦ ಸೇರು ತೂಕದ ಒಂದು ಪ್ರಮಾಣ
ಮತ್ತು : ಮದ, ಅಮಲು, ಇನ್ನೂ
ಮದ್ಲು : ಮೊದಲು
ಮನ್ಸಿಕರಾಯ : ಮನಸ್ಸು ಬಂದಂತೆ ವರ್ತಿಸುವವನು
ಮಲ : ಮೊಲ, ದೇಹದಿಂದ ಹೊರಬರುವ ಹನ್ನೆರಡು ಬಗೆಯ ಅಶುಚಿಗಳಲ್ಲಿ ಒಂದು
ಮಳ : ಮೊಳ, ಮೊಳಕೈಯಿಂದ ಹಸ್ತದ ತುದಿಯವರೆಗಿನ ದೂರ
ಮಳೆ : ಮೊಳೆ, ಚೂಪಾದ ತುದಿಯುಳ್ಳ, ಲೋಹದ ಉಪಕರಣ
ಮಳ್ಳಿ : ಜಾಣತನವಿದ್ದು ಇಲ್ಲದಂತೆ ವರ್ತಿಸುವವಳು, ಹುಚ್ಚಿ, ಮರಳಿ
ಮಾರಾಮಾರಿ : ಜಗಳ, ಬಡಿದಾಟ, ದೊಂಬಿ
ಮಾರಿ : ಮೋರೆ, ಮುಖ
ಮಾಸ : ಮಾಂಸ, ತಿಂಗಳು
ಮುಂಡೆ : ಗಂಡ ಸತ್ತವಳು, ವಿಧವೆ
ಮುಕ್ಕು : ಗಬಗಬನೆ ನುಂಗು
ಮುಗ್ಲು : ಮುಗಿಲು, ಮೋಡ, ಆಕಾಶ
ಮುಸ್ಡಿ : ಮುಸುಡಿ, ಮುಖ
ಮೂಡ್ಲು : ಮೂಡಲು, ಪೂರ್ವ ದಿಕ್ಕು
ಮೆಳೆ : ದಟ್ಟವಾಗಿ ಬೆಳೆದ ಗಿಡಗಳ ಗುಂಪು

ಮೈಟ್ಟು : ಜಗ್ಗು, ಕುಗ್ಗು
ಮೋಜು : ರಸಿಕತೆ
ಮ್ಯಾಕೆ : ಮೇಕೆ, ಗಂಡು ಆಡು

## ಯ

ಯಾಪಾರ : ವ್ಯಾಪಾರ

## ರ

ರಂಗೇರು : ಕಳೆಗಟ್ಟು
ರಾಟ್ಬಳ್ಳಿ : ಚರಕದ ಗಾಲಿ
ರೈತ : ಜಮೀನು ಉಳುವವನು, ರಕ್ತ

## ಲ

ಲೇವಾದೇವಿ : ಹಣಕಾಸಿನ ವ್ಯವಹಾರ (ಲೇನಾ–ದೇನಾ ಇದರ ಮೂಲ ಪಧ)

## ವ

ವಣ್ಕೆ : ಒನಕೆ
ವಾಟೆ : ಮಾವಿನ ಹಣ್ಣಿನೊಳಗಿರುವ ದೊಡ್ಡ ಬೀಜ
ವೈನಾಗಿ : ಚೆನ್ನಾಗಿ

## ಸ

ಸಂಚು : ಯುಕ್ತಿ, ಉಪಾಯ
ಸಂದ್ಕ : ಪೆಟ್ಟಿಗೆ
ಸಂಭೈತ : ಸಭ್ಯ, ಸುಸಂಸ್ಕೃತ ವ್ಯಕ್ತಿ
ಸನೇವು : ಸಮೀಪ
ಸಬೂಬು : ನೆಪ



ಸರ್ರಾತ್ರಿ : ಸರಿರಾತ್ರಿ, ಮಧ್ಯರಾತ್ರಿ
ಸವ್ಲತ್ತು : ಸವಲತ್ತು, ಅನುಕೂಲತೆ
ಸಳ್ಳು : ಸರಳು
ಸಾಗು ಹಾಕು : ಮುಂದಕ್ಕೆ ಕಳುಹಿಸು
ಸಾಯ : ಸಹಾಯ
ಸಾರಿ : ಬಾರಿ, ಸಲ, ಸರದಿ
ಸಾಸ : ಸಾಹಸ
ಸೀಟು : ಏನೂ ಇಲ್ಲದಂತೆ ಒರೆಸು
ಸೀರೆ ಉಡಿಸಿಕೊಳ್ಳು : ಗಂಡನಿದ್ದರೂ ಬೇರೊಬ್ಬನನ್ನು ಮದುವೆಯಾಗು
ಸುಳ್ವು : ಜಾಡು, ಮಾರ್ಗ
ಸೂತ್ಕ : ಸೂತಕ, ಹುಟ್ಟು ಸಾವುಗಳಿಂದಾಗುವ ಮೈಲಿಗೆ
ಸೆಲೆ : ತೇವಾಂಶದಿಂದ ಉಂಟಾಗುವ ಹುಣ್ಣು
ಸೇತ್ಮೆ : ಸೇತುವೆ
ಸೇರು : ನಾಲ್ಕು ಪಾವಿನ ಅಳೆಯುವ ಸಾಧನ
ಸೊಳ್ಳೆ : ಮೂಗಿನ ಹೊಳ್ಳೆ, ಸೊಳ್ಳೆ
ಸೋಬ್ತಿ : ಅಧೀನ, ಅದೇ ಗತಿ
ಸ್ವಾದ : ರುಚಿ
ಸ್ವಾದ್ರ : ಸೋದರ

## ಹ

ಹಕ್ಕೆ : ದನಕರುಗಳನ್ನು ಕಟ್ಟುವ ಕೊಟ್ಟಿಗೆ
ಹಗೇವು : ಧಾನ್ಯವನ್ನು ರಕ್ಷಿಸಿಡಲು ಭೂಮಿಯಲ್ಲಿ ತೋಡಿದ "ಭೂ ಕಣಜ"
ಹತಾರ : ಆಯುಧ
ಹನುಕು : ಹನಿ ಹನಿಯಾಗಿ ಬೀಳು, ತಟಗುಟ್ಟು
ಹಳ್ಳು : ಹರಳು, ಕನ್ನಡಿ
ಹಳ್ಳೂಟ : ಮದುವೆಯಾದವನು ಮಾವನ ಮನೆಯಲ್ಲಿ ತಿಂಗಳುಗಟ್ಟಲೆ ಉಣ್ಣುವ ವಿಶೇಷ ಊಟ
ಹಾರ್ಕಿ ಮಾತು : ಉಡಾಫೆ ಮಾತು, ಸುಳ್ಳು
ಹಿಂಡಿ : ಕಾಳಿನಿಂದ ಎಣ್ಣೆಯನ್ನು ತೆಗೆದ ಮೇಲೆ ಉಳಿಯುವ ಸಿಪ್ಪೆ, ದನಕರುಗಳಿಗೆ ಪುಷ್ಟಿದಾಯಕ ತಿಂಡಿ
ಹಿಡ್ಕಿ : ವಸ್ತುವನ್ನು ಹಿಡಿದುಕೊಳ್ಳಲು ಆ ವಸ್ತುವಿಗೆ ಅಳವಡಿಸಿರುವ ಸಾಧನ

ಹುಕುಂ : ಆಜ್ಞೆ, ಅಪ್ಪಣೆ
ಹುಟ್ಟುಹಾಕು : ಸೃಷ್ಟಿ ಮಾಡು
ಹುರುಕ್ಕು : ಕಜ್ಜಿ
ಹುಪ್ಪಟೆ : ಎಲುಬಿಲ್ಲದೆ ಹರಿದಾಡುವ ಕೀಟ ಜಾತಿ
ಹೊಯ್ಕಳ್ಳು : ಅಳುವುದು
ಹೊರತ್ಕಳ್ಳು : ಪುಷ್ಟಿಯಾಗಿ ತುಂಬಿಕೊಳ್ಳು
ಹೋತು : ಗಂಡು ಆಡು, ಹೋಯಿತು
ಹೊಂಡು : ಹೊರಡು, ಗೊಬ್ಬರದ ಅಂಶಗಳಿಂದ ಕೂಡಿದ ಮಣ್ಣಿನ ತಿಳಿ

ಗಾದೆಗಳನ್ನು ವರ್ಗೀಕರಿಸಿ ನೋಡುವಾಗ 'ಗಾದೆಯು ಕಥೆ'ಗಳಿಗೆ ಒಂದು ಸ್ಥಾನ ಲಭ್ಯವಾಗುತ್ತದೆ. ಬಹುಮಟ್ಟಿನ ಗಾದೆಗಳ ಹಿನ್ನೆಲೆಯಲ್ಲಿ ಕಥೆಗಳ ರೂಪದ ಘಟನೆಯೊಂದು ಇರುವಂತೆ ಗೋಚರಿಸಿದರೆ ಆಶ್ಚರ್ಯವಿಲ್ಲ. ಹಲವರ ಬದುಕಿನ ಪಾಠ ಒಂದು ಗಾದೆಯಾಗಿ ವೈತಾಳಿರಬೇಕು. ಅದು ಒಂದು ಕಥೆಯ ಸ್ವರೂಪದಲ್ಲಿ ಅರಳಿ ಗಾದೆಯಿಂದ ಆರಂಭವನ್ನೋ, ಅಂತ್ಯವನ್ನೋ ಕಂಡಿರಬೇಕು. ಶ್ರೀ ಕೃಷ್ಣಪ್ಪರೆಡ್ಡಿಯವರು ಸಂಪಾದಿಸಿಕೊಟ್ಟಿರುವ ಗಾದೆಯು ಕಥೆಗಳು ಸಂಕಲನದಲ್ಲಿನ ಕಥೆಗಳು ಗಾದೆಗಳ ಹುಟ್ಟಿನ ನಮ್ಮ ಆಲೋಚನೆಯನ್ನು ಕೆರಳಿಸುತ್ತವೆ. ಒಂದು ಪರಿಪುಷ್ಟವಾದ ಕಥಾಲೋಕ ಗಾದೆಗಳ ಗರ್ಭದಲ್ಲಿ ಹುದುಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಶ್ರೀ ಕೃಷ್ಣಪ್ಪ ರೆಡ್ಡಿಯವರು ಗಾದೆಗಳಿಗೆ ಸಂಬಂಧಿಸಿದ ಕಥೆಗಳನ್ನೇ ಶ್ರಮಪಟ್ಟು ಸಂಗ್ರಹಿಸಿ ನಮ್ಮ ಜನಪದ ಕಥೆಗಳ ವೈವಿಧ್ಯಮಯ ಪ್ರಪಂಚವನ್ನು ಪರಿಚಯಿಸಿದ್ದಾರೆ. ವಕ್ತೃವಿನ ನಿರೂಪಣಾ ವಿಧಾನ, ಭಾಷಾ ಪ್ರಯೋಗಗಳನ್ನು ಅಚ್ಚುಕಟ್ಟಾಗಿ ಈ ಕತೆಗಳಲ್ಲಿ ಅವರು ಕಾಪಾಡಿರುವುದು ಒಂದು ಶಾಸ್ತ್ರೀಯ ಕ್ರಮಕ್ಕೆ ಉದಾಹರಣೆಯಾಗಿದೆ. ಇಂಥ ಒಂದು ಒಳ್ಳೆಯ ಸಂಕಲನವನ್ನು ಅರ್ಪಿಸುವುದರ ಮೂಲಕ ನಮ್ಮ ಜಾನಪದ ಕ್ಷೇತ್ರದ ಒಂದು ಪಿಗ್ಗವನ್ನು ಅವರು ತುಂಬಿದ್ದಾರೆ. ಇದಕ್ಕಾಗಿ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

**ಜೀ. ಶಂ. ಪರಮಶಿವಯ್ಯ**